ಹಗಲಿರುಳು.

ಚಂದ್ರಾವಳಿ ವಿಲಾಸ, ಸೊಬಗಿನಬಳ್ಳಿ, ನಡತೆಯನಾಡು, ಬಡಹುಡುಗಿ, ಪ್ರೇಮಪಾಶ
ಮೊದಲಾದ ಗ್ರಂಥಕರ್ತರೂ ಕನ್ನಡ ಕೋಗಿಲೆಯ ಸಂಪಾದಕರೂ ಆದ

ಮುಳಿಯ ತಿಮ್ಮಪ್ಪಯ್ಯ

ಇವರಿಂದ ರಚಿಸಲ್ಪಟ್ಟಿತು.

ಮಂಗಳೂರು

ಶಾರದಾ ಛಾಪಖಾನೆಯಲ್ಲಿ ಛಾಪಿಸಲ್ಪಟ್ಟಿತು.

೧೯೧೮.

ಬೆಲೆ ರೂ. ೦—೮—೦.

ಪ್ರಸ್ತಾವನೆ.

ನಮ್ಮ ಈ 'ಹಗಲಿರುಳು' ಎಂಬ ಪುಸ್ತಕವು ಬೇರೆ ಯಾವ ಗ್ರಂಥದ ಆಧಾರದಿಂದ ಬರೆದುದೂ ಅಲ್ಲ. ಬರಿಯ 'ಹಗಲು ಇರುಳು' ಇವುಗಳ ರೀತಿಯಿಂದಲೆ ಆಕರ್ಷಿಸಿ ಬರೆದುದಾಗಿದೆ. ಕಾಲಪುರುಷ, ಸೂರ್ಯ, ಚಂದ್ರ, ಅಗ್ನಿ, ಕತ್ತಲೆ, ಮೇಘ, ಬೃಹಸ್ಪತಿ, ವಾಯು, ಶುಕ್ರ ಮೊದಲಾದವರನ್ನೆ ಪಾತ್ರಗಳನ್ನಾಗಿ ಮಾಡಿ, ನಮ್ಮ ಸಮಾಜದ ಚಿತ್ರವನ್ನೆ ಇದರಲ್ಲಿ ಚಿತ್ರಿಸಲ್ಪಟ್ಟಿದೆ. ಇದನ್ನು ಓದುವವರು, 'ನಾವು ಈಗಿನ ಸಮಾಜದ ಗುಟ್ಟನ್ನೆ ಒಡೆದು ನೋಡುತ್ತೇವೆ' ಎಂದು ಭಾವಿಸಿದರೆ, ನಮ್ಮ ಪ್ರಯತ್ನವು ಸಫಲವಾದೀತು. ಸೂರ್ಯಚಂದ್ರರೆ ನಾಯಕರಾಗಿರುವ ಹಗಲಿರುಳುಗಳಲ್ಲಿಯೆ ನಮ್ಮ ಜೀವನವು ಸಾಗುವುದು. ಅದರಲ್ಲಿ, ಸೂರ್ಯನ ಆಡಳಿತದ ಹಗಲಲ್ಲಿ ನಾವು ಎಚ್ಚರಿತು ಹೇಗೆ ಕರ್ತವ್ಯವನ್ನು ಮಾಡುತ್ತೇವೆ? ಚಂದ್ರನ ಯಜಮಾನಿಕೆಯ ಇರುಳಲ್ಲಿ ಹೇಗೆ ಸ್ಮೃತಿತಪ್ಪಿ ಹೋಗುತ್ತೇವೆ? ಇರುಳೇ ಹಗಲಾಗಬೇಕೆಂದು ಪ್ರಯತ್ನಿಸಿದರೆ ಸಾಧ್ಯವೆ? ಆ ಹಗಲಿರುಳುಗಳು ತಂತಮ್ಮ ಕೆಲಸಗಳನ್ನಷ್ಟೆ ಮಾಡಿದರೆ ಲೋಕಕ್ಕೆ ಎಷ್ಟು ಸುಖವಾದೀತು? ಮೊದಲಾದುವುಗಳನ್ನು ವಿಚಾರಿಸಿದರೆ, ನಮ್ಮಲ್ಲಿ ಭಿನ್ನವಾಗಿ ತೋರುವ ಸಮಾಜರೋಗವು ವಾಸಿಯಾದೀತು. ಹಾಗೆಂದು—ನಮ್ಮಲ್ಲಿ ಕೆಲವ್ಯಕ್ತಿಗಳು ಇತರರಿಗೆ ತಲೆಬಗ್ಗಿಸಬೇಕೆಂದಲ್ಲ. ಅವರವರು, ಲೋಕಹಿತವಾದ ಕಾಲಸೂಚಿತವಾದ ತಂತಮ್ಮ ಕೆಲಸಗಳಿಗಷ್ಟೆ ತಲೆಬಗ್ಗಿಸಿದರೆ ಎಲ್ಲವೂ ಸುಗಮವಾಗುವುದು. ಎಂದರೆ—ವ್ಯಕ್ತಿ ಸಮಾಜ ಇವುಗಳಲ್ಲಿ ದ್ವೇಷವನ್ನು ಇಡದೆ ಕಾರ್ಯದಲ್ಲಿ ನಿರತರಾದರೆ ಭಂಗಾರವಾಗುವುದು. ಇದರಲ್ಲಿ ಜಾತಿಭೇದದ ಕುತ್ಸಿತ ಪ್ರಶ್ನೆಯುಂಟೆಂದು ನೆನೆಸಬಾರದು. ಆರ್ಯರ ಆಗಮನಕಾಲ ಮೊದಲ್ಗೊಂಡು, 'ಆರ್ಯ, ದಸ್ಯು' ಎಂಬ ಭೇದವಳಿದು ಹೇಗೆ 'ಹಿಂದಿ' ಎಂಬ ಒಂದೆ ಹೆಸರು ನೆಲೆಗೊಂಡಿದೆಯೊ ಹಾಗೆಯೆ ಬ್ರಾಹ್ಮಣ ಬ್ರಾಹ್ಮಣೇತರ ಭೇದವಳಿದು ಸಮರ್ಥರಾದವರೆ ಮುಖಂಡರಾಗಬೇಕೆಂದೂ, ಅವರೇ ಆರ್ಯರೆಂದೂ ನಮ್ಮ ನಂಬಿಕೆ. ಆ ಅಭಿಪ್ರಾಯವೆ ಕಾಲಪುರುಷನ ಮಾತಿನಲ್ಲಿ ಪ್ರತಿಬಿಂಬಿಸುತ್ತಿದೆ. ವಾಚಕಮಹಾಶಯರು ಈ ಚಿಕ್ಕ ಪುಸ್ತಕದಲ್ಲಿ ತೋರುವ ಗುಣದೋಷಗಳನ್ನು ವಿಮರ್ಶಿಸಿ ಬಹಿರಂಗಪಡಿಸಿದರೆ ಮುಂದಿನ ಕಾರ್ಯಕ್ಕೆ ಸುಗಮವಾಗುವುದು. ನಮ್ಮ ಕನ್ನಡದಲ್ಲಿ ಇಂಥ ಪುಸ್ತಕಗಳು ಅಪೂರ್ವವಾದ್ದರಿಂದ ಪ್ರತಿಯೊಬ್ಬ ಕನ್ನಡಿಗನೂ ಸೂಕ್ಷ್ಮದೃಷ್ಟಿಯಿಂದ ವಿಚಾರಿಸಿ ತಿಳಿಸುವರೆಂದು ನಂಬಿದ್ದೇವೆ.

ಇತಿ

ಗ್ರಂಥಕಾರ.

ಹಗಲಿರುಳು.

ಅನುಷ್ಟುಪ್ ॥ ಹಗಲೂ ಇರುಳೂ ತಾವು ತಿರುಗುತ್ತಿರುವಂದದಿ ।
ಸುಖವೂ ದುಃಖವೂ ಮೇಲಿಮೇಲಿ ಬಪ್ಪುದುಮುಂದಿಗೆ ॥ ೧ ॥

ಎಲ್ಲಕೂ ಕರ್ತೃವಾದೇವನದಕ್ಕಾನು ನಿಮಿತ್ತವೈ
ಸೂಜಿ ಚಿಪ್ಪಿಗನೊಪ್ಪಿಂದ ನೂಲಂಬಟ್ಟೆಯೊಳೊಯ್ವವೊಲ್ ॥ ೨ ॥

(ಎನ್ನುತ್ತ ಕಾಲನೆಂಬ ಸೂತ್ರಧಾರನು ಪ್ರವೇಶಿಸಿ)

ಆಹಾ! ಸರ್ವಾಧಿಕಾರಿಯಾದ ಪರಮಾತ್ಮನ ದಯದಿಂದ, ನನ್ನ ಗತಿ, ಎಲ್ಲೆಲ್ಲಿಯೂ ತಡೆಯಿಲ್ಲದೆ ನಡೆಯುತ್ತಿದೆ. ಪಕ್ಷಪಾತವಿಡದೆ, ಲೋಕವೆಲ್ಲವನ್ನೂ, ಅವರವರ ಕರ್ಮಾನುಸಾರವಾಗಿ ನಡೆಯಿಸಬೇಕೆಂದು, ಅವನ ಕಟ್ಟಪ್ಪಣೆ. ನನ್ನ ಮನಃಪೂರ್ವಕವಾದ ಎಣಿಕೆಯೂ ಹಾಗೆಯೆ. ಅದರಿಂದಲೇ ನನ್ನ ಅಧಿಕಾರವು ಶಾಶ್ವತವಾಯಿತು. ಆದರೇನು? ಮೊದಲು, ಅಧಿಕಾರದಲ್ಲಿ ಆಸೆಯಿತ್ತು. ಈಗ, ಅದನ್ನು, ಸರಿಯಾಗಿ ನಡೆಯಿಸುವುದು ಹೇಗೆ?' ಎಂಬ ಅಂಜಿಕೆಯಾಗಿದೆ. ಅದೇನೆಂದರೆ— ಈಗ, ಇಡಿ ಲೋಕವೆ ಎರಡು ಕವಲಾಗಿದೆ. ಒಂದು ನಾಡಿಗೆ ಒಯ್ದರೆ, ಇನ್ನೊಂದು ಕಾಡಿಗೆ. ಒಂದುಕಡೆ, ಹಗಲಿನ ಬೆಳುಪು, ಮತ್ತೊಂದು ಕಡೆ, ಕತ್ತಲೆಯ ಕಪ್ಪು. ಈ ಇತ್ತಂಡವನ್ನು, ಒತ್ತಟ್ಟಿಗೆ ತರುವುದೆಂದರೆ, ಸ್ವರ್ಗಪಾತಾಳಗಳನ್ನು, ಒಟ್ಟುಗೂಡಿಸುವ ಕೆಲಸವೆ.

ಬೆಳಕೆಂದರೆ, ಬಹಳ ಮಂದಿ ಆಶಿಸತಕ್ಕುದು. ಪ್ರತಿಯೊಂದನ್ನೂ ನೋಡಬೇಕೆಂದು, ತನ್ನ ಬಾಗಿಲುತೆರೆದು, ಅಣಕಿಸುತ್ತಿರುವ ಕಣ್ಣಬೊಂಬೆಯನ್ನು, ಕೈಗೊಟ್ಟು, ಬೇಕಾದಲ್ಲಿಗೆ ನಡೆಯಿಸುವುದರಿಂದಲೆ, ಅದಕ್ಕೆ ಅಷ್ಟು ಮೇಲ್ಮೆ. (ಯೋಚಿಸಿ) ಆದರೆ, ಬೆಳಕು, ಆ ಕಣ್ಣಿಗೆ, ಅಷ್ಟು ಸಹಾಯಮಾಡಲಿಕ್ಕೆ, ಏನಾದರೂ ಕಾರಣವಿದೆಯೆ? ಹೌದು, ಕಾರಣವಿಲ್ಲದೆ ಕಾರ್ಯವಿರಲಾರದು. ತಾಯಿ ಇಲ್ಲದೆ ಮಗುವೆಲ್ಲಿಂದ?—ಹೋ! ನೆನಪಿನ ಬೀಗದ ಕೈ ಕೈಗೆ ಸಿಕ್ಕಿತು. ಕಣ್ಣೆಂದರೆ, ಬೆಳಕಿನ ಸಮೀಪದ ಬಂಧು. ಅದರಿಂದಲೆ, ಬೆಳಕು, ಕಣ್ಣನ್ನು ಎಲ್ಲಿ ಬೇಕಾದರೂ ನಡೆಯಿಸಿ, ಬೇಕೆಂಬಷ್ಟು ಕಾಣಿಸುವುದು. ಆ ಹೊರಗಿದ್ದು ದಾರಿತೋರಿಸುವ ಬೆಳಕು ಇಲ್ಲದಿರುವುದರಿಂದಲೆ, ರಾತ್ರಿಯಲ್ಲಿ ಗತಿಗಾಣದೆ ಕಣ್ಣುಮುಚ್ಚುವುದು. ದೊಡ್ಡವರು, ಮುಂದು

ವರಿಯಲಿಕ್ಕಿರುವ ಚಿಕ್ಕವರಿಗೆ, ಲೋಕವ್ಯವಹಾರಗಳನ್ನು, ಕೈಗನ್ನಡಿಯಾಗುವಂತೆ, ತಿಳಿಸುವುದೆಂದರೆ, ಹೀಗೆಯೆ. ಆದರೆ, ಆಬೆಳಕುಗಳ ಹುಟ್ಟು, ಯಾರಿಂದ?—ನೋಡೋಣ—ಅವುಗಳು ತರತರವಾಗಿವೆ. ಅದರಿಂದ, ಅವುಗಳ ತಾಯಿಮನೆಯೂ, ಒಂದಲ್ಲ, ಎರಡಲ್ಲ ಹತ್ತಲ್ಲ, ಹಲವು; ಎಂದು ಕೆಲವರು ಹೇಳಬಹುದು. ಅದು ಸರಿಯಲ್ಲ. ಸೂರ್ಯಚಂದ್ರ ಅಗ್ನಿ ಮೊದಲಾದ, ಹಲವು ತೇಜೋರಾಶಿಗಳೂ, ಅಲ್ಪಸ್ವಲ್ಪ ತಾರತಮ್ಯವುಳ್ಳ ಮಕ್ಕಳಂತೆ, ಒಂದೆ ತಾಯಿಯ ಮಕ್ಕಳು. ಆ ತಾಯಿಯೆ, ಯೋಗಿಗಳು ಸೇವಿಸುವ ಬ್ರಹ್ಮವಿದ್ಯೆ. ಅವಳ ನಾಡೆ, ಆನಂದಸಾಮ್ರಾಜ್ಯವು. ಹಲವರು ಆ ವಿದ್ಯೆಯನ್ನೂ, ಅದರ ಅಂಗಗಳಾದ ಕಳಾಶಾಸ್ತ್ರಗಳನ್ನೂ ಅಭ್ಯಾಸಮಾಡಿ, ತಿಳಿದುಕೊಳ್ಳುತ್ತಾರೆ. ಆದರೇನು? ಅವರ ಮನಸ್ಸು ನೆಲೆಗೊಳ್ಳದಿರುವುದರಿಂದ, ಹದವಾಗದ ಹಿಟ್ಟು, ಕಜ್ಜಾಯಕ್ಕೆ ಬಾರದೆ, ಅರುಚಿಗೂ, ಅಜೀರ್ಣಕ್ಕೂ, ಆಮೂಲಕ, ರೋಗಕ್ಕೂ ಕಾರಣವಾಗುವಂತೆ, ಲೋಕಕಂಟಕರೆ ಆಗುತ್ತಾರೆ.

ಅದಿರಲಿ, ಆ ಆನಂದಸಾಮ್ರಾಜ್ಯದಲ್ಲಿ ಆರ್ಯ (ಸೂರ್ಯ)ನೆ ದೊರೆ. ಉಳಿದವರೆಲ್ಲರೂ, ಅವನ ಕಿರಿಯರು. ಆರ್ಯನು ಇದಿರುಬಂದೊಡನೆ, ಎಲ್ಲರೂ ಕೈ[೧]ಮುಗಿದು ವಿಧೇಯತೆಯನ್ನು ಪ್ರಕಟಿಸುತ್ತಾರೆ. ಆದರೆ, ಆ ಒಳಗಿನವರು, ಅವನಲ್ಲಿ ಹೊಟ್ಟೆಗಿಚ್ಚು ಪಡುತ್ತಿದ್ದರೆ, ಅಲ್ಲವೆ, ಅವನು ಉದ್ಧತನಾಗಿ ಕಂಡವರ ತಲೆಯಲ್ಲಿ ಪಾದ[೨]ವಿಡುವುದಾದರೆ, ಅದು ಅಪಾಯಕರವೆ. ಇರಲಿ, ಒಳಗೊಳಗಿನ ಎಣಿಕೆಗಳನ್ನು, ಹೊರಹೊರಗಿಂದ ಕಂಡುಹಿಡಿವುದೆಂದರೆ, ಬಹಳ ಬಾರಿ ನಿಷ್ಫಲವೆ ಆಗುವುದು. ಆಯಾ ಅಭಿಪ್ರಾಯಗಳನ್ನು, ಅವರವರ ಕೆಲಸಗಳಿಂದಲೆ ಅಲ್ಲಿಂದಲ್ಲಿಗೆ ಅಚ್ಚುಗಟ್ಟಾಗಿ ಗೊತ್ತುಹಚ್ಚಬೇಕು. ಅನುಮಾನಕ್ಕಿಂತಲೂ ಪ್ರತ್ಯಕ್ಷವೆ ಉತ್ತಮವಲ್ಲವೆ?

ಇನ್ನು 'ಕತ್ತಲೆಯೆಂದರೇನು?' ಎಂಬುದೊಂದು ಪ್ರಶ್ನವಿದೆ. ಅದಕ್ಕೆ, ಹಿರಿಯರ ಹೇಳಿಕೆ ಹೀಗೆ—

ಕತ್ತಲೆಯೆಂಬುದೊಂದು, ಬೇರೆ ಪದಾರ್ಥವಲ್ಲ. ಬೆಳಕಿಲ್ಲದುದೇ ಅದು. ಅದನ್ನು 'ತೇಜಸ್ಸಿನ ಅಭಾವ'ವೆಂದು ಕರೆಯುತ್ತಾರೆ. ಪ್ರಬಲವಾದ, ಯಾವುದಾದರೊಂದು ತೇಜಸ್ಸು ಬಯಲಿಗೆ ಬಂದೊಡನೆ, ಅದು ಮಾಯವಾಗುವುದೆ, ಇದಕ್ಕೆ ಸಾಕ್ಷಿ. ಮಾಯಾದೇವಿಯೆಂದರೆ, ಹೇಗೆ ಅಜ್ಞಾನ ಸ್ವರೂಪವೊ, ಹಾಗೆಯೆ ಇದೂ ಅದರ ರೂಪಾಂತರವು.

೧. ಕೈ = ಹಸ್ತ, ಪ್ರಕಾಶ. ೨. ಪಾದ = ಚರಣ, ಕಿರಣ.

ಇದಕ್ಕೂ, ಕೆಲವು ಆಕ್ಷೇಪಗಳುಂಟು. ಹೇಗೆಂದರೆ—"ಕತ್ತಲೆಯ ಅಭಾವವೆ ತೇಜಸ್ಸೆಂದು, ಯಾಕೆ ಹೇಳಕೂಡದು? ಪ್ರಬಲವಾದ ಕತ್ತಲೆ ಕವಿದರೆ, ಆತೇಜಸ್ಸೂ ತಲೆಯೆತ್ತುವುದಿಲ್ಲವಷ್ಟೆ. ಕೆಲವು ಚಿಕ್ಕಚಿಕ್ಕ ರತ್ನಗಳ ಮಿಣುಕೂ, ಕಗ್ಗತ್ತಲೆಯಲ್ಲಿ ಕಾಣುವುದಿಲ್ಲ. ಹಾಗೆಯೆ, ಅಶಕ್ತವಾದ ಕತ್ತಲೆಯೂ, ಪ್ರಬಲವಾದ ತೇಜಸ್ಸಿನ ಜಳಪದ ಎದುರಲ್ಲಿ, ಅಡಗುತ್ತದೆ. ಮಡಿಕೆ ಮೊದಲಾದುವುಗಳಲ್ಲಿ, ಕಪ್ಪಾಗಿ ನೆಲೆನಿಂತ ಕತ್ತಲೆ, ಬೆಳಕಿಗೆ ಅಳುಕುವುದೆ? ರಾತ್ರಿಯ ರಂಗಿನಂತಿರುವ ಅಬಲವಾದ ಕತ್ತಲೆಯನ್ನು ಮಾತ್ರ, ತೇಜಸ್ಸು ಚದರಿಸುವುದು."

ಇದು ಸರಿಯಲ್ಲ. ವಸ್ತುವಿಲ್ಲದೆ, ಅದರ ಬಣ್ಣವೂ ಇಲ್ಲವೆಂಬುದು ಸರ್ವಸಮ್ಮತವು. ಎಂದಮೇಲೆ, ಹಗಲಿನಲ್ಲಿ, ರಾತ್ರಿ ಇಲ್ಲದಿರುವುದರಿಂದ, ಅದರ ಬಣ್ಣವೆಂದು ಕರೆಯಲ್ಪಡುವ ಕತ್ತಲೆಯೂ ಇಲ್ಲವೆಂದಾಯಿತು. ಆದರೆ, ಹಗಲಿನಲ್ಲೆ, ಕೋಣೆಕೊಟ್ಟಡಿಗಳಲ್ಲೂ, ಕಾಡುಗವಿಗಳಲ್ಲೂ ಕತ್ತಲೆಯನ್ನು ನೋಡುವುದು ಪ್ರತ್ಯಕ್ಷಸಿದ್ಧವು. ಇದರಿಂದ, ಮೇಲಿನ ತರ್ಕವು ವ್ಯರ್ಥವೆಂಬುದು ನಿಶ್ಚಯವಾಗಿ, ಕತ್ತಲೆಯೆಂದರೆ, ಕಣ್ಣುಗಟ್ಟುವ ಮಾಯಕದ ಮುಂಕುಮುಸಿಯೆಂದು, ಗೊತ್ತಾಗುವುದು. ಕೆಲವು ರತ್ನಗಳ ಹೊಳಪು, ಗಣಿಗಳಲ್ಲಿ ಮಿಣುಕದಿರುವುದೂ, ಅವುಗಳ ಅಶಕ್ತಿಯಿಂದಲೆ. ಎಳ್ಳಷ್ಟಾದ ಜ್ಞಾನವು, ಅಜ್ಞಾನಪುಂಜದಲ್ಲಿ ಹೊಳೆಯುವುದೆ? ಅದರಿಂದ, ಅನಾಸ್ತಿತ್ವದ ಕತ್ತಲೆಗೆ, ಅಸ್ತಿತ್ವದ ತೇಜಸ್ಸಿನ ಮನ್ನಣೆ ಸಿಕ್ಕಲಾರದು. ನಿಜಸ್ಥಿತಿ, ಹೇಗಿದ್ದರೇನು? ಈಗ ಈ ಉಭಯಮತಗಳಲ್ಲಿಯೂ, ಜಗಳವು ಹುರಿಯೇರುತ್ತಿದೆ. ಇಂತಹ ಸಂದರ್ಭಗಳಲ್ಲಿ, ಮಧ್ಯಸ್ಥನಾಗುವುದೆಂದರೆ ಬಹಳ ಕಷ್ಟವು. ಆಗಲಿ, ನಡೆವವನಿಗೆ, ಮಳೆಬಿಸಿಲುಗಳ ಕಲ್ಲುಮುಳ್ಳುಗಳ ಕಾಟವು, ಕಟ್ಟಿಟ್ಟ ಗಂಟೇಸರಿ. ಆದರೂ, ಕೆರವನ್ನೂ ಕೊಡೆಯನ್ನೂ ಒದಗಿಸಿಕೊಂಡರೆ, ಹೇಗಾದರೂ ಸಾಗಬಹುದು. ಹಾಗೆಯೆ, ಭೂತಭವಿಷ್ಯತ್ಕಾಲಗಳನ್ನು, ಕೆಳಗೂ ಮೇಲೂ ವಿಸ್ತರಿಸಿಕೊಂಡು, ಅವುಗಳಿಗೆ ಅನುಸಾರವಾಗಿ, ನಾನೂ ವರ್ತಿಸುತ್ತಿರಬೇಕು.

(ಆಕಾಶದಲ್ಲಿ—

ಕಂದ || ಕಾಲಗತಿ ಹೇಗೊ? ನಮ್ಮಯ
ಪಾಲಕನಾರ್ಯನಿಗೆ ಮುಪ್ಪುಮೀರುತ ಬಂತಾ!
ಮೇಲೆ ಕತ್ತಲೆಯೆ ತನ್ನಯ
ಕಾಲೂರುವುದಂತೆ ಎಮ್ಮವಸ್ಥೆಯೆ! ಕಾ ಕಾ![೧] || ೧ ||

ಎಂದು, ಕಾಗೆ ಮೊದಲಾದ ಪಕ್ಷಿಗಳು ಹಾರುತ್ತಿರುವುವು.)

೧. ಕಾ ಕಾ = ಎಂಥದೊ ಎಂಥದೊ, 'ಕಾ ಕಾ' ಎಂಬ ಕೂಗು.

ಓಹೋ! ಹೊತ್ತು ಹೋಯಿತು. ಇನ್ನು, ವಿಮರ್ಶೆಗೆ ಎಡೆ ಇಲ್ಲ. ಆರ್ಯ ನಿಗೆ, ಮುಪ್ಪು ಏರಿದೆ. ಕತ್ತಲೆಯ ಭೇದೋಪಾಯವು, ಎತ್ತೆತ್ತಲೂ ತಲೆ ದೋರಹತ್ತಿದೆ. ಅದೊ! ಆರ್ಯನ ಪಕ್ಷದವರೆಲ್ಲ, ಕಾರ್ಯವಿಮುಖರಾಗಿ, ಚಲಿಸ ತೊಡಗಿದ್ದಾರೆ. ಮಾತ್ರವಲ್ಲ, ಅವರು ನನ್ನ ವಿಷಯದಲ್ಲಿ, ಸಂಶಯಪಡುತ್ತಾರೆಂದು, ಧ್ವನಿಪ್ರಧಾನವಾದ, ಅವರ ಮಾತೇ ಸೂಚಿಸುವುದು. ಇನ್ನು, ನಾನೂ, ಅತ್ತಕಡೆಯ ವಿಚಾರವನ್ನು ಮಾಡದಿದ್ದರೆ, ಅಪವಾದಕ್ಕೆ ಬಲಿಬೀಳಬೇಕಾದೀತು. 'ಲೋಕಾಪ ವಾದಾದ್ಭಯಂ' ಎಂದಲ್ಲವೆ ಎಚ್ಚರಿಕೆಯ ಮಾತು?

ಇಂತು ಪ್ರಸ್ತಾವನೆ.

ಒಂದನೆಯ ಅಂಕ.

(ಮುಚ್ಚಂಜೆಯ ಹೊತ್ತು. ವೃದ್ಧನಾದ ಆರ್ಯನು (ಸೂರ್ಯನು) ಕಾಲನ ರಥದೊಳಗಿನ ಕೆಂಬಿಸಿಲ ಪೀತಾಂಬರದ ಹಾಸಿಗೆ ಹಿಡಿದಿರುತ್ತಾನೆ.)

ಆರ್ಯ:—(ಮೋರೆಯೆತ್ತಿ, ಮುಂದಿನ ಪ್ರಜೆಗಳನ್ನು ನೋಡಿ) ಪ್ರಜೆಗಳೆ, 'ನೀವೆಂದರೆ, ನನ್ನನ್ನು ಮನಮುಟ್ಟಿ ಪೂಜಿಸುತ್ತ, ಆಜ್ಞಾಧಾರಕರಾಗಿರುವವರು' ಎಂಬು ದನ್ನು ಚೆನ್ನಾಗಿಬಲ್ಲೆನು. 'ಅರಸಿಂಗಂ ಪ್ರಜೆಯೆ ದೈವಂ' ಎಂಬ ಮಾತು, ನಿಮಗೇ ಸಲ್ಲುವುದು. ಆದರೆ, ಅದಕ್ಕಾಗಿ, ಮುಖಸ್ತುತಿಮಾಡುವುದು ಸರಿಯಲ್ಲ, ಸ್ತುತಿಯಿಂದ, ಹಲವು ಬಾರಿ, ಕೇಡೆ ಉಂಟಾಗುವುದೆಂಬುದು ಅನುಭವಸಿದ್ಧವು. ಅದರಿಂದಲೆ, ನಿಮ್ಮ ನಡತೆಯನ್ನು ಒಳಗಿಟ್ಟು, ಹೊರಗೆ, ಗಂಭೀರಭಾವದಿಂದಿ ದ್ದೆನು. ಆದರೆ, ನೀವು, ನನ್ನ ಆ ಗಂಭೀರತೆಗೆ ಬೇಸರಪಟ್ಟ ಮೂಢರಲ್ಲ ವೆಂಬುದು, ನಿಮ್ಮ ಆಗಾಗಿನ ಕರ್ತವ್ಯತತ್ಪರತೆಯಿಂದಲೂ, ಕಡೆಗಾಲದ ಈ ಅಜ್ಜ[೧]ನ ಮೋರೆನೋಡುವುದಕ್ಕಾಗಿ ಬಂದು ನೆರೆದಿರುವ ಈ ಸಂದಣಿಯಿಂದ ಲೂ, ನಿಮ್ಮೆಲ್ಲರ ಮುಖಭಾವದಿಂದಲೂ, ಮತ್ತಷ್ಟು ಗಟ್ಟಿಯಾಗಿದೆ. ಬೆಲ್ಲ ದಲ್ಲಿ ಕಡೆಗೊಡಿಯೆಂದುಂಟೆ?

ನಿಮ್ಮಲ್ಲಿ ಹಲವರು, ನನ್ನ ಕೈಸನ್ನೆಯಿಂದಾಗಿ, ಮುಂಜಾನೆ ಆನೆಯಾಡ ತೊಡಗುವ ಮೊದಲೆ, ನನ್ನ ಪಕ್ಷದವರೆಂಬುದನ್ನು, ತಮ್ಮ ಪಕ್ಷ[೨]ಗಳನ್ನು ಎತ್ತಿ

೧. ಅಜ್ಜ = ಅಜ್ಜನು, ಆರ್ಯನು. ೨. ಪಕ್ಷ = ಮಿತ್ರಸಮೂಹ, ರೆಕ್ಕೆ.

ರಿಸಿಯೂ, ಸ್ವರಯುಕ್ತವಾದ ಗಾನದ ಜಯಘೋಷದಿಂದಲೂ,—ಕೆಲವರು, ಮಂತ್ರಪೂತವಾದ ಅರ್ಘ್ಯನಮಸ್ಕಾರಗಳಿಂದಲೂ, ನೆಲಕ್ಕೆ ತಿಳಿಸಿದ್ದೀರಿ. ಈ ಸದಾಗತಿ (ಗಾಳಿ), ನನ್ನ ಬಿರುಸು ಎಷ್ಟಿದ್ದರೂ ಸೈರಿಸಿಕೊಂಡು, ಎಡೆಯು ರಿತು, ತನ್ನ ಬೀಸಣಿಗೆಯನ್ನು ಬೀಸುತ್ತಿರುವುದನ್ನು, ಎಷ್ಟು ಹೇಳಿದರೂ ಕಡಮೆಯೆ. ಏನೂ ತಿಳಿಯದ ಈ ಪಶುಪ್ರಾಣಿಗಳೂ, ತಮ್ಮ ಕರುಗಳ ಬಾಯಿಗಟ್ಟಿ, ತಮ್ಮ ಹಾಲನ್ನು, ನನ್ನ ನೈವೇದ್ಯಕ್ಕಾಗಿ, ಅರ್ಪಿಸಿದ್ದಾವೆ. ತೇಜಸ್ವಿ (ಅಗ್ನಿ) ಯೆಂದರೆ, ಯಜ್ಞಯಾಗಾದಿಗಳಿಂದ ದೇವತೆಗಳ, ಅಡಿಗೆಯ ಭಕ್ಷ್ಯಭೋಜನಾದಿಗಳಿಂದ ಮನುಷ್ಯರ, ಆಹಾರಕ್ಕೇ ಕಾರಣಭೂತನು. ಇನ್ನೂ ಅಸಂಖ್ಯರಾದ ನಿಮ್ಮ ಕೃತಜ್ಞತೆಯನ್ನು ಎಷ್ಟು ಹೇಳಿದರೂ, ಸಮುದ್ರಕ್ಕೆ ಹಿಂಗುಕದಡಿದಂತೆ ಕಡಮೆಯೆ ಸರಿ. ನಿಮ್ಮ ಈ ಉಪಕಾರಗಳಿಗೆಲ್ಲ, ಕಾರ್ಯರೂಪವಾಗಿಯೆ ಪ್ರತಿಫಲವನ್ನು ಕಟ್ಟಿಕೊಡಬೇಕೆಂದು, ನನ್ನ ಎಣಿಕೆ ಯಿತ್ತು. ಮಾಡುವುದೇನು? ಈ ಕಾಲಗತಿಯಿಂದಾಗಿ, ಈ ಬಂಧುವಿಗೆ, ನಿಮ್ಮನ್ನಗಲಿ ದೂರವಿರುವ ಕಠಿಣಸಂದರ್ಭವು ಹತ್ತಿರವಾದುದರಿಂದ, ಹೂಗೊಡುವಲ್ಲಿ, ಹೂವಿನ ಎಸಳಿನಿಂದಲೆ ತೀರಿಸಬೇಕಾಗಿದೆ.

ಕಾಲ:—ಆರ್ಯನೆ, ನೀನು, ನನ್ನ ಕಾರ್ಯಭಾರವನ್ನು ತಿಳಿಯದವನಲ್ಲ. ಆ ಭಾರವನ್ನು ಹೊತ್ತು, ಲೋಕಕ್ಕೆ ತಿಳಿಸುವುದರಿಂದಲೆ, ನಿನಗೆ 'ಹೊತ್ತು' ಎಂಬ ಹೆಸರೂ ಬಂದಿದೆ. ಎಲ್ಲವನ್ನೂ ತಿಳಿದ ನೀನು, ನೆವವನ್ನೊಡ್ಡಿ ಆಲಸ್ಯಮಾಡಿದರೆ, 'ಆಳಿನ ತಪ್ಪು ಅರಸಿನ ಮೇಲೆ' ಎಂಬಂತೆ ಪರಮಾತ್ಮನ ಸಮಕ್ಷದಲ್ಲಿ, ಎಲ್ಲವೂ ನನ್ನ ತಪ್ಪಾಗಿ ತೋರುವುದು. ಯಾಕೆಂದರೆ—ಕಾಲ ಸೂಚಕರಾದ ನಿಮ್ಮೊಳಗೆ ಒಬ್ಬನಾದ ನಕ್ಷತ್ರಪತಿಯೆಂಬವನು, 'ಕ್ಷಯರೋಗ' ವೆಂದು ಹೇಳುತ್ತ, ಆಗಾಗ, ಕೆಲಸಕ್ಕೆ ಬರುವುದಿಲ್ಲ. ನಿನ್ನ ಅವಸ್ಥೆಯೂ ಹೀಗೆ. ಕಾಲಬೋಧಕವಾದ ಗಡಿಯಾರ(ಘಟಿಕಾಗಾರ)ಗಳೆಂಬ ನಿಮ್ಮ ಗತಿ ಹೀಗಾಗಹತ್ತಿದರೆ, ದಿನಗಳೆದಂತೆ ಒಬ್ಬೊಬ್ಬರು, ಒಂದೊಂದು ಗಡಿಯಾರಗಳನ್ನು ಕೈಗೆ ಕಟ್ಟಿಕೊಳ್ಳುವ ಎಡೆಯುಂಟಾಗುವುದು. ಆ ಕೃತ್ರಿಮ ಯಂತ್ರಗಳು ತೋರುವ ಕಾಲವೂ, ಬೂತಗನ್ನಡಿಹಿಡಿದ ಮೋರೆಯಂತೆ, ಕೃತ್ರಿಮವೆ. ಅದರಿಂದಲೆ, ಕಾರ್ಯಕ್ರಮಗಳೊಂದೂ, ಸರಿಯಾಗದೆ, ಅದರಲ್ಲಿ, ಲೋಕಕ್ಕೆ ಅಸಡ್ಡೆಯುಂಟಾಗಿ ಧರ್ಮವೆಲ್ಲವೂ ಕೆಡುವುದು,

ಅದರಿಂದ, ನಿನ್ನ ಮಾತಿನ ರಾಮಾಯಣಕ್ಕೆ, ಇನ್ನು ಎಡೆಸಿಕ್ಕಲಾರದು. ಆರ್ಯತೆಯ ಹಿರಿತನಕ್ಕೆ ಮಾನಕೊಟ್ಟು, ವಾರ್ಧಕ್ಯದಲ್ಲಿ ಕನಿಕರವಿಟ್ಟು, ಎಷ್ಟೆಷ್ಟು ಸಡಿಲುಬಿಟ್ಟೆನೊ, ಅಷ್ಟಷ್ಟು, ನಿನ್ನ ಆ ರಾಮಾಯಣದ ಹನುಮಂತನ ಬಾಲವು, ಉದ್ದಕ್ಕೆ ಬೆಳೆಯುತ್ತಿದೆ. ಹುಂ, ಸಾಕು; ಇನ್ನು ನನ್ನ ಈ ಕಾಲಚಕ್ರದ ಗತಿಯನ್ನು ತಡೆದು, ಕರ್ತವ್ಯದ ಮೋರೆಗೆ ಮಸಿಮೆತ್ತಲಾಗುವುದಿಲ್ಲ.

ತೇಜಸ್ವಿ:—(ಉರಿದೆದ್ದು) ಓಹೋ, ನೀನೊಬ್ಬ ಸರ್ವಗುಣಸಂಪನ್ನನು. ನಿನ್ನ ಮಹತ್ತನ್ನು, ಮತ್ತಾರೂ ಕೊಂಡಾಡುವುದಿಲ್ಲವೆಂದು, ನೀನೇ ಗಂಟೆಬಾರಿಸಿಕೊಳ್ಳುವೆಯೇನು? ನಿನ್ನ ಕಾಲ[1]ಮುಖದ ಲಕ್ಷಣವು, ಯಾರಿಗೆ ಗೊತ್ತಿಲ್ಲ? ತೋರುವುದೊಂದು, ಕೊಡುವುದು ಬೇರೊಂದು. ನಿನ್ನ, ಈ ಮುಂದಾಳುತನದಿಂದ, ಮುಂದೆ ಪ್ರಪಂಚವ್ಯಾಪಾರದಲ್ಲಿ, ಆಗಲಿಕ್ಕಿರುವ ಸುಧಾರಣೆ ತಿಳಿದೇ ಇದೆ. ನಮ್ಮಜ್ಜನಲ್ಲಿ ಮಾನವಿಟ್ಟವನಂತೆ, ಧರ್ಮಮಾರ್ಗೋದ್ಧಾರಕನಂತೆ, ಅಂಥವನಂತೆ, ಇಂಥವನಂತೆ. ಹುಂ, ಸಾಕು, ಸಾಕು. ನಾನು ಮಾತಾಡಲು ಎಡೆಗೊಟ್ಟಿರುವೆನೆಂದು ಹೇಳಲಿಕ್ಕೆ, ನಿನಗೆ ನಾಚಿಕೆಯೂ ಆಗುವುದಿಲ್ಲವೆ? ಒಂದೇಒಂದು ನಿಮಿಷವಾದರೂ ಎಡೆಗೊಡದೆ, ನಿನ್ನ ಈ ಗಾಡಿಯನ್ನು, ಮುಂದುವರಿಸುತ್ತಲೆ ಇರುವೆ. ಇರಲಿ, ಇದನ್ನು ನಿಲ್ಲಿಸಬೇಕೆಂದು, ನಿನ್ನೊಡನೆ ಹೇಳಿಕೊಂಡವರಾದರೂ ಯಾರು? ಆದರೂ, ಬರಿದೆ, ಆ ವಿಶ್ವಾಮಿತ್ರನ ಕಡೆಯು, ದುಷ್ಟನಕ್ಷತ್ರಕನ ಅವತಾರವನ್ನೆ ಧರಿಸಿರುವೆ. ನಿನ್ನಂಥ ಕಪ್ಪುಮುಸುಡಿನವರಿಗೆ, ಇದೆ ಒಂದು ಕಾಲವು. ಆ ಮೇಲೆ, ನಿಮ್ಮಂಥವರನ್ನು ಕೇಳುವರಾರು? ಇಂಥ ದುರ್ಬುದ್ಧಿಯಿಂದಲೆ, ನಿನ್ನ ಪೂರ್ವಿಕರು, ಭೂತ[2]ಗಳಾಗಿರುವುದು. ಆಗಲಿ, ನಿನ್ನ ಕೈಯುದ್ದವಿದ್ದಷ್ಟು ಬೀಸು. ಹುಂ, ನೋಡೋಣ.

ಕಾಲ:—ಸರಿ, ನನ್ನ ಎಣಿಕೆ ಗುರಿಯನ್ನೇ ಮುಟ್ಟಿತು. 'ನಿಯಮವೆಂಬ ಕೈಗತ್ತಿಯುಳ್ಳ, ಈ ಕಾಲನೆಂಬ ಕಟುಕನ ಕಣ್ಣಿನಲ್ಲಿ ನೆತ್ತರುಂಟೆ?' ಎಂದು ನಿಮ್ಮೊಳಗೆ, ಇನ್ನೂ, ಹಲವರು, ನನ್ನನ್ನು ಬೈಯಬಹುದು. ಆದರೆ, ಅವರವರ ಧರ್ಮವು, ಅವರವರಿಗೆ ಮುಖ್ಯವೆಂದು ಒಪ್ಪುವುದಾದರೆ, ಇಷ್ಟು ಹೇಳುತ್ತೇನೆ.

---

೧. ಕಾಲ = ಸಮಯ, ಕಪ್ಪುಬಣ್ಣ. ೨. ಭೂತ = ಭೂತಕಾಲ, ಕೆಟ್ಟದೈವ.

ನನಗೆ 'ಇವರು ದೊಡ್ಡವರು, ಅವರು ಬಡವರು' ಎಂಬ ಭೇದವಿಲ್ಲ. ಏನು ಹೇಳಿದರೂ, ನನ್ನ ಧೋರಣವನ್ನು ಬದಲಾಯಿಸಲಾಗುವುದಿಲ್ಲ. ಮುಂದೆ, ಎಂಥ ಕಷ್ಟಗಳಿದ್ದರೂ, ಹಿಂದಿರುಗುವ ಉತ್ತರನಿಗೂ ನನಗೂ ಕರ್ಣಾರ್ಜುನ. ಈಗ, ನಿಮಗೆಲ್ಲರಿಗೂ ಒದಗಿದ ದುಃಖವು, ನನಗೂ ಕಾಣುವುದು. ಮಾಡುವುದೇನು? ದುಃಖಕ್ಕೂ ನಿಯಮಕ್ಕೂ ಒಡನಾಟವಿರಲಾರದು.

ತೇಜಸ್ವಿ:—(ಕೋಪಿಸಿ) ಹೌದು, ನೀನು ಸರ್ವಗುಣಸಂಪನ್ನನು. ಆದರೆ, ನಿನ್ನ ಈ ಕಟ್ಟಪ್ಪಣೆ, ಆರ್ಯನಂತೆ ಕಾಲಸೂಚಕನಾಗಿರುವ ನಕ್ಷತ್ರಪ್ರತಿಗೂ ತಟ್ಟುವುದಿಲ್ಲವೊ? ಅವನು ಬಂದಾಗ, ಬರುವುದು. ಹೋದಾಗ ಹೋಗುವುದು. 'ಬಾರದ ಮಹಾರಾಯನು ಇಲ್ಲವಷ್ಟೆ, ಬರುವ ಬಾಹಿರನು ಎಲ್ಲಿದ್ದಾನೆ?' ಎಂಬಂತಲ್ಲವೆ, ನಿನ್ನ ಆಡಳಿತವು?

ಆರ್ಯ:—ತೇಜಸ್ವಿಯೆ, ಬರಿದೆ, ನಿನ್ನ ಸುಡುಮಾತುಗಳೇಕೆ? ಹೀಗೆ ಮಾಡಿದರೆ, ಹೋಗುವ ಜಗಳವನ್ನು, ಹಣಬಡ್ಡಿಗೆ ಕೊಂಡಂತಾಗುವುದು. ಈ ಕಾಲನ ಮನಸ್ಸೆಂದರೆ, ಅವನ ಹೇಳಿಕೆಯಂತೆ, ನಿಷ್ಕಲ್ಮಷವೆಂಬುದು, ಅನುಭವಸಿದ್ಧವು. ಯಾರನ್ನಾದರೂ ಸರಿ, ಅವರವರ ಅದೃಷ್ಟಾನುಸಾರವಾಗಿ, ಎತ್ತಿಹಿಡಿದರೆ ಆಕಾಶಕ್ಕೂ, ಕಿತ್ತೊಗೆದರೆ ಪಾತಾಳಕ್ಕೂ, ಮುಟ್ಟಿಸಬೇಕೆಂದು, ಅವನಿಗೆ ದೈವಾಜ್ಞೆ. ನಮ್ಮಲ್ಲಿ, ಕಾಲನ ಕಣ್ಣೋರೆಯಾಗಿರುವುದು, ನಮ್ಮ ಅದೃಷ್ಟದಿಂದ ಹಾಕಿದ ಅಂಗಿ ಹಾರಿದರೆ ಹೋಗುವುದೆ? ಕಾಲನು ತನ್ನ ಕೆಲಸವನ್ನು ಪೂರಯಿಸಬೇಕಾದುದು ನ್ಯಾಯವೆ. ವೈರಿಗಳಲ್ಲಿ ಕೋಪೋದ್ರಿಕ್ತರಾಗಿ, ಮೈಮೇಲೆ ಬಂದಿರುವ ಕಾಲನನ್ನು ಬೈದರೆ, ಗುಂಡಿನ ಅರೆಪೆಟ್ಟಿನಿಂದಾಗಿ, ಮೈಮೇಲಿನ ಗಾಯವನ್ನೆ ಪರಚುವ ಹುಲಿಯ ಹುಣ್ಣಿನ ಅವಸ್ಥೆಯಾದೀತು.

ಶಾಂತಮನಸ್ಸಿನಿಂದ ಕೇಳು, ಈಗ, ನನ್ನ ಪ್ರತಿನಿಧಿಯಾಗಿ, ನಿನಗೇ ಪಟ್ಟಗಟ್ಟಲೆಣಿಸಿದ ನನಗೆ, ಈ ರೀತಿಯನ್ನು ನೋಡಿ, ಬಹಳ ವ್ಯಸನವಾಗುತ್ತದೆ. ಸಿಟ್ಟು ಉರಿಯಿತೆಂದು, ಅದನ್ನು, ಕಂಡಬಟ್ಟೆಯಲ್ಲಿ ಹಚ್ಚಲಾಗದು. ಹಚ್ಚಿದರೆ, ಊರೂ, ಕಡೆಗೆ ತಾನೂ ಸುಟ್ಟು, ಎಲ್ಲವೂ ಕಪ್ಪಾಗುವುದು. ಸಿಟ್ಟೆಂದರೆ ಗಂಡುಗಲಿತನದ ಗುರುತೆಂಬುದನ್ನು, ನಾನೂ ಒಪ್ಪಿಕೊಳ್ಳುತ್ತೇನೆ. ನಿಮ್ಮಂಥ ಎಳೆಜವ್ವನಿಗರು, ತಮ್ಮ ದಾರಿಗೆ ಒಂದಿಷ್ಟು ಅಡ್ಡವಾದರೆಂದರೆ, ವಿಚಾರ

ವಿಲ್ಲದೆ ಅವರ ಮೇಲೆ ಉರಿದುಬೀಳುವುದು, ತುಂಬ ವಿಷಾದಕರವು. ಆ ಉರಿಸಿಟ್ಟನ್ನು, ಶಾಂತತೆಯ ಸ್ನೇಹ[೧]ವಿಚಾರದಲ್ಲಿ, ತಕ್ಕಂತೆ ಹಚ್ಚಿದರೆ, ತೇಜಸ್ಸಿಗೆ ಎಡೆಯಾಗುವುದು. ಇಲ್ಲವಾದರೆ, ಕೂಡಲೆ, ಮಸಣದ ಮುಜಲಿನಂತೆ, ಎಲ್ಲವೂ ಮಸಿಬೂದಿಗಳ ಸುಡುಕಳವಾದೀತು, ಅದರಿಂದ, ಮುಂದೆನೋಡಿ, ಹಿಂದೆ ನಡೆಯಬೇಕು.

ತೇಜಸ್ವಿ:—ಆರ್ಯ, ಲೋಕವ್ಯವಹಾರಜ್ಞಾನವು, ತಕ್ಕಂತೆ ನೆಲೆಗೊಳ್ಳದಿರುವುದರಿಂದ, ನನ್ನಲ್ಲಿ ತಪ್ಪುಗಳು ಕಾಲೂರಿಕೊಂಡಿರಬಹುದು. ಆದರೆ, ಇನ್ನು ಮುಂದೆ, ನಿನ್ನ ಜ್ಞಾನೋಪದೇಶದ ಕೈಯನ್ನು ಹಿಡಿದುಕೊಂಡೆ ನಡೆಯುತ್ತೇನೆ.

ಆರ್ಯ:—ಎಲೆ ಸದಾಗತಿ, ನೀನು, ಯಾವಾಗಲೂ ಎತ್ತೆತ್ತಲೂ ಸಂಚರಿಸಿ, ಲೋಕವ್ಯವಹಾರದ ಮರ್ಮವನ್ನು ತಿಳಿಯುತ್ತಿರುವವನು. ಅದರಿಂದ ದೊರೆಯಾಗುವ, ನಿನ್ನ ಪ್ರಿಯನಾದ ತೇಜಸ್ವಿಗೆ, ಅಚ್ಚುಮೆಚ್ಚಿನ ಮಂತ್ರಿಯಾಗಿ ಬೋಧಿಸುತ್ತ ಅವನ ನಡತೆಯನ್ನು ಲೋಕಾನುಭವದ ಅಚ್ಚಿನಲ್ಲಿ ಒತ್ತುತ್ತಿರಬೇಕು. ಒಮ್ಮೊಮ್ಮೆ ಮೇರೆದಪ್ಪಿಹೋದರೆ, ತೇಜಸ್ವಿಯನ್ನು, ಪ್ರೇಮದಿಂದ ಒತ್ತಾಯಿಸಿ, ಸಮಾಧಾನಿಸುವ ಹಕ್ಕು ನಿನಗಿರುವುದು. ಹೆಚ್ಚೇನು ಹೇಳಲಿ? ಊರ ಉಸಿರಾಡಿಸುತ್ತಿರುವ ನಿನಗೆ, ಪ್ರಿಯಮಿತ್ರನ ಯೋಗಕ್ಷೇಮವನ್ನು ವಿಚಾರಿಸುತ್ತಿರಬೇಕೆಂದು ತಿಳಿಯದೆ? (ತನ್ನಲ್ಲಿ) ಈ ಎರಡೆ ಅಧಿಕಾರಿಗಳನ್ನು ಇಟ್ಟರೆ ಸಾಕೆ? ಉ:, ಸಾಲದು. ಒಂದು ವೇಳೆ, ಇವರಿಬ್ಬರೂ ಸಮಾನಗುಣಕೃತ್ಯದವರಾಗಿ, ಸ್ವಾರ್ಥದಿಂದ ಒಟ್ಟಾಗಿ, ಬೀಗಿಬಿರಿದು ಬೀದಿವರಿದರೆ, ಭೂಮಿಯೆ ಬೆದರಿ ಬೀಳಬಹುದು. ಅಲ್ಲವೆ, ಇಬ್ಬಾಗವಾದರೂ ಲೋಕವಿಘಾತವೆ.

ಚೌಪದಿ॥ ತಲೆವಾಗಿಹುದು ಬೆಂಕಿಗಡ್ಡಿ ಪೆಟ್ಟಿಗೆಯೊಳ್ ।
ಬಳಿಕ ಮೇಲೇರಿಕೀರಲು ನಾಡಸುಡುಗುಂ ॥
ನಲವನಾಗಿಸುವ ತಂಗಾಳಿ ಬಿರುಸಾಗೆ ।
ನೆಲೆದಪ್ಪಿಸದೆ ಊರ ಮರಮನೆಗಳನ್ನು? ॥ ೧ ॥

ಆಗಾಗಿನ ಕಾಲಸಂಸರ್ಗಗಳಿಂದ, ವ್ಯಕ್ತಿಗಳು ಹೇಗೆ ಎಷ್ಟು ಮಾರ್ಪಡುತ್ತವೆಂಬುದನ್ನು ಊಹಿಸಲಾಗುವುದಿಲ್ಲ. ಅದರಿಂದ, ಇವರೊಡನೆ, ಇನ್ನೊಬ್ಬನನ್ನೂ ಕೂಡಿಸುವುದು ಹಿತಕರವು. (ಪ್ರಕಾಶವಾಗಿ) ಎಲೈ ಜಲಧರ (ಮೇಘ)ನೆ,

೧. ಸ್ನೇಹ = ಕೆಳೆತನ, ಎಣ್ಣೆ.

ನೀನು ಜೀವನದ[೧] ಬಂಡಾರವಾಗಿರುವೆ. ಕೈಬಾಯಿಮುಟ್ಟುವ ಇಕ್ಕಟ್ಟಿನ ಬರಗಾಲದಲ್ಲಿ ಲೋಕದ ಜೀವನಾಧಾರನಾಗಿರತಕ್ಕವನೆಂದು, ನಾನೆ, ಕೈನೀಡಿ ನಿನ್ನ ಮನೆದುಂಬಿರುತ್ತೇನೆ. ಆ ನನ್ನ ಉದ್ದೇಶವನ್ನು ಮರೆಯದೆ, ನೀನು, ಬೇಕಾದಾಗ ಅಮೃತಪ್ರವಾಹದಿಂದ ಲೋಕವನ್ನು ತಣಿಸುತ್ತಿರುವುದೂ ಪ್ರಸಿದ್ಧವಿದೆ. ಈಗ ನೋಡು, ಇಂಥ ಅನಿವಾರ್ಯಸಂದರ್ಭದಿಂದಾಗಿ, ಈ ವೃದ್ಧನ ಮೇಲೆ, ಲೋಕಾಂತರಕ್ಕೆ ತೆರಳಿಸುವ ದುರ್ದಶೆಯು ಗದೆ ಎತ್ತಿರುವುದು. ಅದರಿಂದ, ನಿನ್ನಲ್ಲಿಯೂ ಇಷ್ಟು ಹೇಳಬೇಕಾಗಿದೆ. ಯಾವುದರಿಂದ, ನಿಮ್ಮೆಲ್ಲರನ್ನೂ, ಕಾಲಕ್ಕೆ ತಕ್ಕಂತೆ, ನಡೆಯಿಸುತ್ತಿದ್ದೆನೊ, ಆ ನನ್ನ ಕೈಯನ್ನು, ಲೋಕಹಿತಕ್ಕಾಗಿ, ಈ ತೇಜಸ್ವಿಯ ತಲೆಯಲ್ಲಿ ಇಡುತ್ತೇನೆ. ಇವನೆ, ಮುಂದಣ ದೊರೆ; ಸದಾಗತಿಯೆ ಮಂತ್ರಿ. ಒಂದು ವೇಳೆ, ಆಮೇಲೂ, ಲೋಕಕ್ಕೆ ಕ್ಷಾಮವುಂಟಾಗುವುದಿದ್ದರೆ ಅದನ್ನು, ನೀನು ಶಾಂತಪಡಿಸಬೇಕು. ಅಂಥ ಬರಗಾಲದ ನಿವಾರಣೆಗಾಗಿಯೆ, ಮಹಾತ್ಮರು, ತಮ್ಮ ಜೀವನವನ್ನು ಒಪ್ಪಿಸುತ್ತಿರುವುದನ್ನು, ನೀನು ತಿಳಿಯದವನಲ್ಲ. ಆದರೆ, ಒಂದೊಂದು ಸಂದರ್ಭಗಳಲ್ಲಿ, ಒಬ್ಬೊಬ್ಬರ ಎಣಿಕೆಯ ದಾರಿಗಳು ತಪ್ಪಿ ಬದಲಾಗುವುದು ಪ್ರಕೃತಿಯಾದುದರಿಂದ, ಲೋಕಮತವೆಂಬ ಉಗಿಬಂಡಿಗಳು ಎದುರೆದುರು ಹಾಯ್ದು, ಅವಗಡವುಂಟಾಗುವುದುಂಟು. ಅದಕ್ಕಾಗಿಯೆ, ನೀವೆಲ್ಲರೂ ಪರಸ್ಪರ ಸಹಾಯಕರಾಗಿರಬೇಕೆಂದು, ಇಷ್ಟು ಅಚ್ಚುಗಟ್ಟಿನ ನಿಯಮಗಳನ್ನು ಮಾಡಿರುವೆನಲ್ಲದೆ, ನಿಮ್ಮೊಳಗೆ ಯಾರಲ್ಲಿಯೂ, ಹೀನತೆಯುಂಟೆಂದಲ್ಲ.

ನಚ್ಚಿನ ನಂಟರೆ, ಎಲ್ಲರೂ ಇದಿರಿಗೆ ಬನ್ನಿರಿ. ಎಣಿಸಿದ ಮಾತುಗಳೆಲ್ಲವನ್ನೂ ಆಡಿದೆನು. ಕಾಲನು, ರಥವನ್ನು ನೂಕುತ್ತಿರುವುದರಿಂದ, ನಿಮ್ಮ ಮೈ, ನನ್ನ ಕೈಗೆ ನಿಲುಕುವುದಿಲ್ಲ. ನಿಮ್ಮನ್ನು, ಕಣ್ಣುದಣಿವಂತೆ ನೋಡಿ, ಕೈದಣಿವಂತೆ ಹರಸಬೇಕೆಂಬ, ಒಂದೇ ಒಂದು ಎಣಿಕೆ ಬಾಕಿಯಾಗಿದೆ.

[ಅಷ್ಟರಲ್ಲಿ, ಎಲ್ಲರೂ ಮುಂದೆ ಬಂದರು. ಪಶುಪಕ್ಷಿಗಳು, ಸ್ವರಯುಕ್ತವಾದ ಸಾಮಗಾನಕ್ಕೆ ಆರಂಭಿಸಿದುವು. ಇನ್ನೊಂದೆಡೆ, ಜನಜಂಗುಳಿ, ಆರ್ಯನ ಆತ್ಮಕ್ಕೆ ಹಿತವಾಗಲೆಂದು, ಜಪಿಸಹತ್ತಿತು. ತೇಜಸ್ವಿ, ಹಿರಿಯನ ಅಪ್ಪಣೆಗೆ ಅನುವಾಗಿ, ಎಲ್ಲರಿಗೂ ಸನ್ಮಾರ್ಗಬೋಧನೆಮಾಡತೊಗಿದನು. ಸದಾಗತಿ, ಆರ್ಯನಿಗೆ ತನ್ನ ಬೀಸಣಿಗೆಯೆತ್ತಿದನು. ಜಲಧರನು, ಬಿಳಿಬಟ್ಟೆಯುಟ್ಟು, ಮೇಲುಗಡೆ ನಿಂತು

೧. ಜೀವನ = ನೀರು, ಜೀವನೋಪಾಯ.

ಮೇಲುಕಾಪನ್ನು ಬಲಿದನು. ಆಗ, ವೇದಪಾರಾಯಣದ, ಸಂಕಜಾಗಟೆಯ, ಜತಿ ಜೊತೆಗೂಡಿದ ಹಾಡಿನ ಸವಿದನಿ, ಪಾಕದ ಪಾನಕದ ಬಿಂದುಗಳಂತೆ, ಒಂದು ಒಂದರಲ್ಲಿ ಒಂದಾಗಿ ಶ್ರವಣಮುಖಕ್ಕೆ ಹರಿಯುತ್ತಿತ್ತು. ಹೆಚ್ಚೇನು, ಪ್ರತಿಯೊಬ್ಬರಲ್ಲಿಯೂ, ದೈವೀಭಾವನೆಯ ಮೂರ್ತಿ ಮನೆಮಾಡಿತ್ತು. ಆರ್ಯನು, ಎಲ್ಲರನ್ನೂ ಮನಮುಟ್ಟಿ ನೋಡಿ, ಮೇಲೆ ಕಣ್ಣಿಟ್ಟು]—

ಜಲಧರನೆ, ಅದೋ, ದ್ವಿಜಸಮೂಹವು[1], ನನ್ನನ್ನು ನೋಡಲೆಂದು ಕಣ್ದೆರೆದು ನಿಲುಕುತ್ತಿದೆ. ನೀನು ಅಡ್ಡವಾಗಿರುವುದರಿಂದ, ಅವರಿಗೆ, ಆಶಾಭಂಗವಾಗುತ್ತಿದೆ. ಜಾತ್ರೆಸಂದಣಿಯಲ್ಲಿ, ಹುಡುಗರ ಕಣ್ಣಿಗೆ ಪರದೆಯಾಗುವ ಕೆಲವು ಜೌವನಿಗರ ನಡತೆಯಂತೆಯೆ, ಇದಾಗುವುದಲ್ಲವೆ?

ಜಲಧರ:—ಆರ್ಯ, ಇವರೆಲ್ಲರೂ, ನಮ್ಮ ಒಳಗಿದ್ದು ಹೊರಗೋಡಿದ ಆ ನಕ್ಷತ್ರಪತಿಯ ಬೇಹಿನವರು. ದ್ವಿಜವೇಷಧಾರಿಗಳಾದ ಮಾತ್ರಕ್ಕೆ, ಈ ನೀಚನಕ್ಷತ್ರಗಳಿಗೆ ಎಡೆಗೊಡುವುದೆಂದರೆ, ಮನೆಯಲ್ಲಿ ಮಾರಿಯನ್ನು ಮನ್ನಿಸಿದಂತೆಯೆ. ಕಿರುತೂತಾದರೂ, ಮುಚ್ಚದಿದ್ದರೆ, ಹಡಗನ್ನೆ ಮುಳುಗಿಸುವುದಲ್ಲವೆ?

ಆರ್ಯ:—ಅದು ಹೇಗೂ ಇರಲಿ, ಜನರು ದೈವಭಕ್ತಿಪೂರ್ವಕವಾಗಿ ಆರೋಗ್ಯವನ್ನು ಕಾಪಾಡುತ್ತಿದ್ದರೆ, ಹೊರಗಿನ ರೋಗದ ಮಾರಿ ಹೊರಗೇ ಆಗುವುದು. ಹಾಗೆಯೆ, ನಾವೂ ಮನಶ್ಶಕ್ತಿಯನ್ನು ಬಲಿದರೆ, ಅವರಿಂದೇನೂ ಸಾಗದು. ನೀರು, ಮಣ್ಣನ್ನು ಕರಗಿಸಬಲ್ಲುದಾದರೂ, ಬಂಡೆಗೆ ಬಿದ್ದರೆ ಛಿನ್ನವಿಛ್ಛಿನ್ನವಾಗಿ ಚದರುವುದು. ಅವರವರ ಪಾಪಕ್ಕೆ ಅವರವರೇ ಹೊಣೆ. ಅದರಿಂದ ನಮಗೇನು? ನೋಡಬೇಕಾದರೆ, ಅವರೂ ನೋಡಿಕೊಳ್ಳಲಿ.

[ಹಿರಿಯನ ಮಾತನ್ನು ಮೀರಬಾರದೆಂದು, ಸದಾಗತಿ ಸನ್ನೆಯ ಕೈಯನ್ನು ಬೀಸಿದನು. ಅದಕ್ಕೊಪ್ಪಿ, ಜಲಧರನೂ ಎಡೆಬಿಟ್ಟು ನಿಂತನು. ಆದರೇನು? ಅಲ್ಪರಿಗೆ ಕೃತಜ್ಞತೆಯುಂಟೆ? ಆ ನಕ್ಷತ್ರಗಳು, ಆರ್ಯನ ಇಳಿಹೊತ್ತನ್ನು ಕಾಯುತ್ತ, ಮೆಲ್ಲಮೆಲ್ಲನೆ ಮುಗುಳುನಗತೊಡಗಿದುವು. ಸಂಜೆ ಮಲ್ಲಿಗೆ ನೈದಿಲೆಗಳೂ, ನಕ್ಷತ್ರಗಳೊಡನೆ ಸೈಗುಟ್ಟಿ ನಗತೊಡಗಿದುವು. ದಾರಿಗುರಿಗಳು ಎಂಥವಾದರೂ, ದಾರಿಹೋಕರು ಇರುತ್ತಾರೆಯಲ್ಲವೆ? ಹಣ್ಣೆಲೆ ಬೀಳುವಾಗ ಹಸುರೆಲೆ ನಗುವುದಂತೆ.]

೧. ದ್ವಿಜ = ನಕ್ಷತ್ರ, ಬ್ರಾಹ್ಮಣ.

ಆರ್ಯ:—(ತನ್ನವರನ್ನು ಉದ್ದೇಶಿಸಿ) ಪ್ರಿಯ ಬಂಧುಗಳೆ, ನಿಮಗೆಲ್ಲರಿಗೂ ಸುಖವಾಗಲಿ. ನಿಮ್ಮ ಪ್ರಯತ್ನವು ಸತ್ಕಾರ್ಯ್ಯದಂತೆ, ಅನಾವಶ್ಯಕಶಬ್ದಾಡಂಬರವಿಲ್ಲದೆ, ಸಾರ್ಥವಾಗಿರಲಿ. ಅದರಿಂದಲೆ, ವೈಮರೆತ ಲೋಕವು ಎಚ್ಚತ್ತು ಕಣ್ದೆರೆದು, ತನ್ನ ಕಾಲಲ್ಲಿ ತಾನು ನಿಲ್ಲುವುದು. 'ವೈಯೆಂಬುದು ಅಶಾಶ್ವತವು; ಸತ್ಕರ್ಮವೆ ಎಂದೆಂದೂ ನಿಲ್ಲುವುದು.' ಎಂಬುದನ್ನರಿತು, ನನ್ನ ಈಗಿನ ಅವಸ್ಥೆಗಾಗಲಿ, ಮುಂದೆ, ನಿಮ್ಮ ಮೇಲೆ ಮೊಸಲಾಗಿರುವ, ಹಗೆಗಳ ಭೇದೋಪಾಯಕ್ಕಾಗಲಿ ಕೈಗೆಡದೆ ಪ್ರಯತ್ನಿಸಿರಿ. ಬಂಗಾರಕ್ಕಾದರೂ, ಒರೆದು ನೋಡದೆ, ಬೆಲೆಗಟ್ಟಬೇಡಿರಿ. ಅರಸನ ಅಪ್ಪಣೆಯಿಂದಲೇ ಆದರೂ, ನ್ಯಾಯನಿರ್ಣಯಮಾಡುವುದು, ಅಧಿಕಾರಿಯಾದುದರಿಂದ, ಆ ಸಾಮಾನ್ಯವ್ಯಕ್ತಿಯ ಎಣಿಕೆಗೆ ಅನುಗುಣವಾಗಿ, ತೀರ್ಪಿನಲ್ಲಿ ತಪ್ಪೂ ಒಪ್ಪೂ ಬೆರೆತುಹೋಗುವುದು ಸ್ವಭಾವವು. ಹಾಗೆಯೆ, ಎಲ್ಲವೂ ಪರಮಾತ್ಮನ ಉದ್ದೇಶಾನುಸಾರವಾಗಿಯೆ ನಡೆವುದಾದರೂ, ಮಾಯಾದೇವಿಯ ಮೇಲುವಿಚಾರಣೆಯಿಂದಾಗಿ, ನ್ಯಾಯವು ಅಡಿಮೇಲಾಗಬಹುದು. ಆದರೆ, ಆ ತಪ್ಪೊಪ್ಪುಗಳನ್ನು, ಜಗತ್ಪತಿಯ ಮುಂದೊಡ್ಡಿದರೆ, ಆಗಲೆ, ತಪ್ಪಿನ ಜಳ್ಳುಹಾರಿ ಹೋಗುವುದು. ಅದರಿಂದ, ಬತ್ತದ ತೆನೆ, ಅನ್ನವಾಗಬೇಕಾದರೆ, ಬಹಳ ಕಷ್ಟವನ್ನು ಅನುಭವಿಸುವಂತೆ, ನೀವೂ, ನೀತಿಮಾತ್ರದ ಲಾಭಕ್ಕಾಗಿ, ನಿಸ್ವಾರ್ಥತೆಯಿಂದ, ನ್ಯಾಯಮಾರ್ಗದಲ್ಲಿ ಹೆಣಗಾಡಬೇಕಾಗುವುದು. 'ಕರ್ಮಣ್ಯೇವಾಧಿಕಾರಸ್ತೆ' ಎಂಬ ಪರಮಾತ್ಮನ ಮಾತಿನಲ್ಲಿ 'ಮನಮೆಚ್ಚಿ, ಸತ್ಕಾರ್ಯಗಳನ್ನೆ ಮಾಡಿರಿ. ಫಲವನ್ನೊದಗಿಸುವದು ನನ್ನ ಕರ್ತವ್ಯವು' ಎಂಬ ಅರ್ಥವಿದೆ. 'ಕರ್ತವ್ಯಸಾಧ್ಯವೆಂದರೆ, ಅತಿ ಕಷ್ಟವಲ್ಲವೆ?' ಎಂಬ ಪ್ರಶ್ನೆಗೆ, ಹಿರಿಯರ ಉತ್ತರ ಹೀಗೆ—'ಬಿತ್ತಿ ಬೆಳೆಯಿಸದೆ ಬತ್ತ ಬಾಯಿಗೆ ಬರುವುದೆ?' ಕೇಳಿರಿ, ಸನ್ಮಾರ್ಗಾನುಯಾಯಿಯಾದ ಈ ತೇಜಸ್ವಿ ನಿಮಗೆಲ್ಲ ದಾರಿ ತೋರಿಸುವನು. ಅವನನ್ನು ಸರಿಯಾಗಿ ನಡೆಯಿಸುವುದು ನಿಮ್ಮ ಕರ್ತವ್ಯವು.

ತೇಜಸ್ವಿ:—ನಿನ್ನ ಅಪ್ಪಣೆಯಂತೆ, 'ಕಬ್ಬಿನ ಹೋಲಿಕೆ ಬಿದಿರು' ಎಂಬ ಹಾಗೆ, ಕೈಲಾಗುವಷ್ಟು ಪ್ರಯತ್ನಿಸುತ್ತೇನೆ. ಆದರೆ, ಮೇಲಿನ ಹೋಲಿಕೆ ಹೇಗಿದ್ದರೂ ಒಳಗಿನ ಸವಿ ಸರಿಯಾಗುವದು ಹೇಗೆ? ಅದರಿಂದ, ನನ್ನ ಅಧಿಕಾರವು, ನಿನ್ನ ಬದಲಾಗಿ, ಸ್ವಲ್ಪ ಕಾಲಕ್ಕೇ ಇರತಕ್ಕುದೆಂದೂ, ಲೋಕೋದ್ಧಾರಕ್ಕಾಗಿ, ನೀನು ಇನ್ನೂ, ಉದಯಿಸಬೇಕೆಂದೂ, ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ.

ಆರ್ಯ:—'ಸತ್ಯಮೇವಜಯತೆ' ಎಂಬಂತೆ, ಆ ಸತ್ಯಮಾರ್ಗಕ್ಕೆ, ಯಾವ ಅಡ್ಡಿಯೂ ಬರಲಾರದು. 'ಇದು ಕೇಡು, ಇದು ಪಾಡು' ಎಂಬುದು ಹೊಳೆದು ಕಾಣಬೇಕೆಂದು, ಪರಮಾತ್ಮನ ಎಣಿಕೆ. ಬಿದ್ದರಲ್ಲವೆ, ಬೇನೆಯು ಗೊತ್ತು? ಆ ನಮ್ಮ ಹಿತಕ್ಕಾಗಿಯೆ, ಆ ಕಾಡಿನ ಕಾಲುವೆಗಳು, ಪಾಡಿನ ನಾಡಿನಲ್ಲಿಯೂ ಹರಿದಾಡುವುದೆಂದು ತಿಳಿಯಬೇಕು. ಸತ್ಯದ ಬಂಗಾರಕ್ಕೂ, ಸುಳ್ಳಿನ ಕಿಲುಬು ಹಿಡಿಯಬಹುದು. ಆದರೆ, ಕಬ್ಬಿಣಕ್ಕೆ ಹಿಡಿದ ಮಣ್ಣಿಗಿದ್ದಂತೆ, ಕೆಡಿಸುವ ಶಕ್ತಿ, ಆ ಸುವರ್ಣದ ಕಿಲುಬಿಗಿಲ್ಲ. ಒಮ್ಮೆ ಅಡಗಿಸುವುದಷ್ಟೆ, ಅದರ ಗದ್ದಲವು. ಆ ಕಬ್ಬಿಣದಂತಿರದೆ ಬಂಗಾರದಂತಿರುವುದು ಮಾತ್ರ ನಿಮ್ಮ ನೀತಿ. ಹುಂ, ಇನ್ನು, ಕಣ್ಣಮಿಂಚಿಗೂ ಎಡೆ ಇಲ್ಲ. ಇದೊ, ಬೇರೆಬೇರೆಯಾಗಿ ನಿಮ್ಮೆಲ್ಲರ ತಲೆಯಲ್ಲೂ, ನನ್ನ ಕೈಯ ಹರಕೆ. ಈಗಲೆ, ನಿಮ್ಮ ಸಮಾಜಕ್ಕೆ, ಕೈಯನ್ನೂ ಮುಗಿಯುತ್ತೇನೆ. ಯಾಕೆಂದರೆ, ನೀವು, ಒಬ್ಬೊಬ್ಬರೂ ನನಗೆ ಕಿರಿಯರಾದರೂ, ಸಂಗಡವು ಕಿರಿದಲ್ಲ. 'ಹತ್ತಿದ್ದಲ್ಲಿ ಮುತ್ತುಂಟು' ಎಂಬುದು ಇಂಬಿನ ಮಾತು. ಈ ದೀರ್ಘಕಾಲವಿಯೋಗದ ಫಲೋದಯವಾಗುವಂತೆ ಅನುಗ್ರಹಿಸಿರಿ. ಹೆಚ್ಚೇನು? 'ಸರ್ವೇಜನಾಸ್ಸುಖಿನೋಭವಂತು'

[ತೇಜಸ್ವಿ ಮೊದಲಾದವರು 'ತಥಾಸ್ತು' ಎನ್ನುವಷ್ಟರಲ್ಲಿ ಕಾಲನ ರಥವು ಮರೆಯಾಯಿತು. ಆದರೂ, ಆರ್ಯನು, ಕೈಯನ್ನೆತ್ತಿ, ಸನ್ನೆಯಿಂದ ಸನ್ಮಾರ್ಗವನ್ನು ತೋರುತ್ತಿದ್ದನು. 'ಮೈಯಳಿದರೂ ಕೈಯಳಿವುದು' ಎಂಬ ಮಾತು ನಮ್ಮ ಆರ್ಯರಿಂದಾಗಿ, ಬಳಕೆಗೆ ಬಂತು. ಅದರಿಂದಲೆ, '*ಅದ್ಯೈವ ವಾ ಮರಣಮಸ್ತು ಯುಗಾಂತರೇವಾ | ನ್ಯಾಯಾತ್ಪಥಃ ಪ್ರವಿಚಲಂತಿ ಪದಂ ನಧೀರಾಃ'—ಎಂಬುದು ಆ ಹಿರಿಯರ ಮಂತ್ರವಾಗಿದೆ. ಎಂದಮೇಲೆ, ಆ ಆರ್ಯಸಮುದಾಯಕ್ಕೆಲ್ಲ ಮೂಲಪುರುಷನಾದ ಆರ್ಯನ ಎಣಿಕೆಯನ್ನು ಒರೆದು ನೋಡುವುದೇಕೆ? ಆದರೂ, ಈಗಿನ ಪ್ರತ್ಯಕ್ಷಪ್ರಿಯವಾದ ಲೋಕಕ್ಕೆ, ಎಲ್ಲವೂ ತಾನಾಗಿಯೇ ಕಾಣುವುದೋ ಏನೊ?

ಆಮೇಲೆ, ಮಂತ್ರತಂತ್ರಾತ್ಮಕವಾದ ತರ್ಪಣಾದಿಗಳು ನೆರವೇರಿದುವು. ಆ ತರ್ಪಣಾದಿಗಳ ಶಕ್ತಿಗಳೆಲ್ಲವೂ, ಉದ್ದೇಶಸಾಧನಕ್ಕಾಗಿ, ಆರ್ಯನನ್ನು

* ಧೀರರು ತಮಗೆ ಈಗಲೆ ಮರಣಬರಲಿ, ಇಲ್ಲವೆ ಯುಗಾಂತರದಲ್ಲಿ ಬರಲಿ. ನ್ಯಾಯಮಾರ್ಗವನ್ನು ಬಿಡುವದಿಲ್ಲ.

ಹಿಂಬಾಲಿಸಿದುವು. ಒಂದೇ ಮಾತಿನಿಂದ ಹೇಳುವುದಾದರೆ, ಕಾಲಕರ್ಮವನ್ನು ತೀರಿಸಿಕೊಂಡು ಎಲ್ಲರೂ ಹಿಂತಿರುಗಿದರು. ಇಂಥ ಹಿಂದಾಳುಗಳಿಂದಲೆ, ಮುಂದಾಳುಗಳ ಉದ್ದೇಶವು ಜರುಗಬೇಕು. ಪೂರ್ವದಲ್ಲಿ ಅರ್ಥವನ್ನು ತಿಳಿದುಕೊಂಡುದರಿಂದಲೇ, ಆ ಜಪತರ್ಪಣಾದಿಗಳನ್ನು ಕಾಲಕ್ಕೆ ತಕ್ಕಂತೆ ಮಂತ್ರಪೂರ್ವಕವಾಗಿಯೂ ತಂತ್ರಯುಕ್ತವಾಗಿಯೂ ಮಾಡುತ್ತಿದ್ದರು. ಆದರೆ, ಈಗಿನ ಹಲವರು ಅರ್ಥಜ್ಞಾನವಿಲ್ಲದೆ, ಕಾಲನಿಯಮವನ್ನು ಮರೆಯುತ್ತಾರೆ. ಕಾಲನಿಯಮವಿಲ್ಲದೆ, ಮಂತ್ರವೂ ನೆಲೆಗೆಡುತ್ತದೆ. ಸಮಯ ತಪ್ಪಿದರೆ ಪಾಠವು ನೆಲೆಗೊಳ್ಳದಿರುವುದೂ, ಹಸಿವೆ ಕೆಡುವುದೂ ಇದಕ್ಕೆ ದೃಷ್ಟಾಂತವು. ಆ ಮಂತ್ರವಿಲ್ಲದೆ ತಂತ್ರಕ್ಕೂ ಉದ್ಯಾಪನೆಯೆ. ಅಡಿಗಟ್ಟು ತಪ್ಪಿದರೆ ಇಡಿ ಕಟ್ಟೂ ಬೀಳುವುದು ಅಪ್ರಕೃತಿಯಲ್ಲ. ವಸ್ತುಜ್ಞಾನವನ್ನು ಮಾಡಿಕೊಳ್ಳದಿದ್ದರೆ ಪ್ರಪಂಚಕ್ಕೇ ಕೇಡು. ಅದರಿಂದ, ಈ ಮಾತನ್ನು ಮರೆಯಕೂಡದು.

ಒಂದೊಂದೇ ಕೂಡಿ ಕೋಟ್ಯಂತವಾಗಿ ಲೆಕ್ಕವು ನಿಲ್ಬುದು ।
ಒಂದಾದರೂ ಅಡಿಬಿಡಲ್ ತಪ್ಪುಬಪ್ಪುದುಕೋಟಿಗೂ ॥ ೧ ॥]

ಎರಡನೆಯ ಅಂಕ.

ಕತ್ತಲೆ: (ಪ್ರವೇಶಿಸಿ)

ಅನುಷ್ಟುಪ್ ॥ ಭಾರವನ್ನತ್ತ ಬಿಸುಟಾಮೇಲೆ ಸಂತಸದಿಂದಲಿ ।
ಕೈಬೀಸಿ ನಡೆವಂತಾಯ್ತು ಪಾರತಂತ್ರ್ಯಂ ಮಹಾಭಯಂ ॥ ೧ ॥

ಬಂಡಿಯನ್ನೆತ್ತಿ ಬೇಸತ್ತ ಎತ್ತಾಗುತ್ತೇಟುತಿಂದೆನ್ನೆ ।
ಕಾಲನಾ ಕಪ್ಪುಗಣ್ಣನ್ನು ಮುಚ್ಚಲಾರ್ಯಂ ಸಮರ್ಥನೆ? ॥ ೨ ॥

ನಾನು, ಕಾಲನ ಸವರ್ಣದವಳೆಂದೂ[೧], ಅದರಿಂದ, ಕಾಲನು ನನ್ನ ಹಿತ ಚಿಂತಕನೆಂದೂ ಈಗಲಾದರೂ ಲೋಕಕ್ಕೆ ಗೊತ್ತಾಗಿರಬಹುದು. ನೋಡೋಣ. ಆದರೆ, ಫಕ್ಕನೆ, ಮೇಲೇರುವುದೆಂದರೆ ಅಪಾಯಕರವು. 'ಮಗನನ್ನಾದರೂ ಮುಟ್ಟಿನೋಡು' ಎಂದಲ್ಲವೆ ಎಚ್ಚರಿಕೆಯ ಮಾತು.

[ಹೀಗೆ ಎಣಿಸುತ್ತ ಗವಿಗಳೆಂಬ ತಾಯ್ಮನೆಯಲ್ಲಿ ಕಾಲೂರಿ, ಮರೆಗಳಲ್ಲಿ

೧. ಸವರ್ಣ = ಸಮಾನಜಾತಿ, ಒಂದೇ ಬಣ್ಣ.

ಮರೆಯಾಗಿ, ಮರದ ಅಡಿಯಲ್ಲಿ ವಿಶ್ರಮಿಸುತ್ತ, ನೀಟಿಲೆಗಳಲ್ಲಿ ಕಡೆಗಣ್ಣಿಕ್ಕಿ, ಆ ಅಜ್ಞಾನದ ಕತ್ತಲೆ, ಹಾದಿಬೀದಿಗಳಲ್ಲಿಯೂ, ನಾಡುಬೀಡುಗಳಲ್ಲಿಯೂ, ಮೆಲ್ಲಮೆಲ್ಲನೆ, ತನ್ನ ಕರಿತಲೆಯನ್ನು ಎತ್ತಿ, ತನ್ನ ಅಕ್ಕನಾದ ನಿಶಾದೇವಿಯೊಡನೆ ಸೇರಿತು. ಕಂಡಕಂಡವರ ಕಣ್ಣುಗಟ್ಟಿ ದಾರಿ ತಪ್ಪಿಸತೊಡಗಿತು. ಅತ್ತಕಡೆ ಗತನಾದ ಆರ್ಯ್ಯನ ಅಪ್ಪಣೆಯಂತೆ, ಎಲ್ಲರೂ ತೇಜಸ್ವಿಗೆ ಪಟ್ಟಗಟ್ಟಿ, ಅವನು ತೋರಿದ ದಾರಿಯಲ್ಲೆ ಕಾಲಿಡುತ್ತಿದ್ದರು. ಆದರೇನು? ನಾಡಿಗಿಂತ ಕಾಡೇ ಹೆಚ್ಚಾಗಿರುವಂತೆ, ತಿಳಿವಿನ ಬೆಳಕಿಗಿಂತಲೂ ಗಾಂಪತನದ ಕತ್ತಲೆಯೇ ಅಧಿಕವಾಗಿತ್ತು. ಮುಂದಿನ ಕತ್ತಲೆಯ ಕಾಡನ್ನು ಕಡಿದು, ನಾಡನ್ನಾಗಿಸುವೆನೆಂದು, ತೇಜಸ್ವಿ ಕೈಹಾಕಿದರೆ, ಹಿಂದಿನ ನಾಡೂ ಕಾಡಾಗುತ್ತಿತ್ತು. ಕೆಲವು ಸರ್ತಿ ಸದಾಗತಿಯ ಬಿರುಸೂ, ಒಮ್ಮೊಮ್ಮೆ ಜಲಧರನ ಮೇಲಾಳುತನವೂ, ತೇಜಸ್ವಿಯ ಮೋರೆಯನ್ನು ಕಪ್ಪುಮಾಡುತ್ತಿದ್ದುವು. ಇದಕ್ಕೆ, ಕತ್ತಲೆಯ ಭೇದೋಪಾಯವೇ ಕಾರಣವಾಗಿರಬಹುದೊ ಏನೊ? ಏನೂ ಇರಲಿ, ಮೇಲಿನವರ ಅಧಿಕಾರವು ಮಿತಿಮೀರಿದರೆ, ಎಲ್ಲೆಲ್ಲಿಯೂ ಹಾಗೆಯೆ. ಪರರಿಗೆ ಹಕ್ಕುಗಳ ನಿಯಮಗಳನ್ನು ಕಲಿಸುವಾಗ, ತಮ್ಮ ಹಕ್ಕುಗಳೆಷ್ಟೆಂಬ ತಿಳಿವು, ಅವರ ಮನಸ್ಸಿನಿಂದ ಜಾರಿಹೋಗುವುದೊ ಏನೊ?

ಕಂದ || ನೀರನ್ನೊಂದುಗಡಿಗೆಯಿಂ
ಬೇರೊಂದಕ್ಕೆರೆಯೆ ಮೊದಲಿನದು ಬೋಳಾಗಿ |
ತೋರುತ, ಸಿಡಿಯಲು, ಠಣ್ಣನೆ
ಕೀರುವ ಪರಿ ಕೆಲವು ಬೋಧಕರೊಳಿಹುದಕಟ || ೧ ||

ಇರಲಿ, 'ನಮಗೆ, ನಮ್ಮ ಆರ್ಯ್ಯನ ಅಪ್ಪಣೆಯೆ ಹಾಗೆ' ಎಂದು ಸದಾಗತಿ ಮೊದಲಾದ ಆ ಮೇಲಿನವರು ಹೇಳಬಹುದು. ಆದರೆ, ತೇಜಸ್ವಿಯ ಸದ್ಬೋಧನೆಗೂ ಅಡ್ಡಿಬರಬೇಕೆಂದು, ಆರ್ಯ್ಯನ ಅಪ್ಪಣೆಯುಂಟೆ? ಮಾಡುವುದೇನು? 'ನನ್ನ ಎತ್ತಿಗೆ ಮೂರು ಕೊಂಬು' ಎಂಬ ಕೆಲವರು, ಪ್ರತಿಯೊಂದು ಪಂಗಡದಲ್ಲಿಯೂ ತಲೆಯೆತ್ತಿರುತ್ತಾರೆ. 'ಚಂದವಿದ್ದವನೆ ತಂದೆ' ಎಂಬುದು ಅವರ ಪ್ರಕೃತಿ. ಆಗಲಿ; ಅಂತೂ, ಭೇದೋಪಾಯದಿಂದ, ಕತ್ತಲೆ ಎತ್ತಲೂ ಹಬ್ಬಿತು.

ಆದರೇನು? ಧೀರರು ಮುಂದಿಟ್ಟ ಹಜ್ಜೆಯನ್ನು, ಎಂದೂ, ಏನಾದರೂ, ಹಿಂದೆಗೆವರೆ? '*ನನಿಶ್ಚಿತಾರ್ಥಾದ್ವಿರಮಂತಿಧೀರಾಃ' ಎಂಬುದು, ಅವರಿಗಾಗಿಯೆ ಕಟ್ಟಿಟ್ಟ ಗಂಟು. ತೇಜಸ್ವಿ, ಕಂಗೆಡದೆ, ಅಲ್ಲಲ್ಲಿ ಹರಿಯುತ್ತಲೆ ಇದ್ದನು. ಮನೆಮನೆಗಳಲ್ಲಿಯೂ, ದಾರಿಕೇರಿ ಸಂದುಗೊಂದುಗಳಲ್ಲಿಯೂ, ದಾರಿಹೋಕರ ಕೈಗಳಲ್ಲಿಯೂ ಅವನ ಹೆಸರಿನ ದೀಪಧ್ವಜಗಳೇರಿದುವು. ಜನರ ಊಟಉಪಚಾರಗಳನ್ನೂ, ತಾನೆ ಕೈಗೊಟ್ಟು ನಡೆಯಿಸುತ್ತಿದ್ದನು. ಏನಾದರೂ, ನೀಲಾಚಲದಂತೆ, ಮೇಲೇರಿರುವ ಕತ್ತಲೆಯೆಡೆಯಲ್ಲಿ, ತೇಜಸ್ವಿಯ ಜ್ಯೋತಿರ್ಲತೆಯ ಮಿಣುಕು ಎಷ್ಟಾದರೂ ಅಷ್ಟೆ.

ಈ ಸುದ್ದಿಯೆಲ್ಲವೂ, ರಾಜತ್ವದಲ್ಲಿ ಆಸೆಪಡುತ್ತಿದ್ದ ನಕ್ಷತ್ರಪತಿಯ ಕಿವಿಗೆ ಮುಟ್ಟಿತು. ಒಡನೆಯೆ, ಒಳಮನೆಯಿಂದೆದ್ದು, ಮುಖಮಂಟಪಕ್ಕೆ ಕಟ್ಟಿದ ೧ನೀಲಾಂಬರದ ಪರದೆಯೆಡೆಯಲ್ಲಿ ಅಣಕಿಸಿದನು. ತಂಗಿಯಾದ ಕತ್ತಲೆಯೊಡನೆ, ಮನಬಂದಂತೆ ನಡೆಯುತ್ತಿದ್ದ ನಿಶಾದೇವಿಯೆಂಬ ರಾಣಿಯ ಮೋರೆ ಬೆಳುಬೆಳ್ಳಗಾಯಿತು. ತನ್ನ ಸ್ವೇಚ್ಛಾಚಾರಕ್ಕೆ, ವರನು ಸಿಟ್ಟಾಗುವನೆಂಬ ಹೆದರಿಕೆಯಿಂದಲೆ, ನಿಶಾದೇವಿಯ ಮೋರೆ, ಹಾಗೆ ಮಾರ್ಪಾಡಾಗಿರಬಹುದು. ಪ್ರಿಯನಿಗೆ, ಯಾವ ಅಲಂಕಾರದಲ್ಲಿ ಪ್ರೀತಿಯೊ, ಅದನ್ನೆ ಧರಿಸುವುದು, ಹೆಂಗುಸರ ಸ್ವಭಾವವಷ್ಟೆ. ನಿಶಾದೇವಿಯೂ, ಮುಖಕ್ಕೆ ಬಿಳಿ ಬಣ್ಣವನ್ನು ಬಳಿದಳು. ತನ್ನ ಕಾಂಗಿನ ಬಟ್ಟೆಯಂತಿದ್ದ ಕತ್ತಲೆಯನ್ನು ಅತ್ತಿತ್ತಣ ಕಾಡುಗಳಿಗೆ ಒಗೆದು, ತನ್ನಿನಿಯನ ಕೈಯ ತಳತಳಿಸುವ ಬೆಳುದಿಂಗಳ ಪಟ್ಟೆಯನ್ನುಟ್ಟಳು. ಇದನ್ನೆಲ್ಲ ನೋಡಿದ ಕತ್ತಲೆಯ ಹೊಟ್ಟೆಗೆ ಕತ್ತಿಹಾಕಿದಂತಾಯಿತು.]

ಕತ್ತಲೆ:—(ತನ್ನಲ್ಲಿ) ಅಕ್ಕನೆಂದು ಮರೆಹೊಕ್ಕುದಕ್ಕೆ, ಈ ಮರೆಯನ್ನೇ ಹೊಗಿಸಿಬಿಟ್ಟಳು. ಈ ಮರೆಯಲ್ಲಿ ನಾನೆಷ್ಟರವರೆಗೆ ಕಾಯುತ್ತಿರಲಿ. ಕೆಳಗಿನವರು, ದೊಡ್ಡವರನ್ನು ಸೇರಿ, ದೊರೆಯನ್ನು ಆಶ್ರಯಿಸುವುದೆಂದರೆ ಇಷ್ಟೇ ಸರಿ. 'ಕೆಳಗಿನವರೂ ರಾಜಾಶ್ರಯದಿಂದ ಮೇಲೆಬಂದರೆ, ತಮ್ಮ ಮೇಲುತನವೆಲ್ಲಿ?' ಎಂದು ಅವರ ಎಣಿಕೆ ಇರಬಹುದು. ಇರಲಿ, ಆದರೆ, ನಾನೀಗ ಹೀಗೆ ಬಂಧನದಲ್ಲಿ ಬಿದ್ದಂತೆ ಇದ್ದರೆ ಫಲವಿಲ್ಲ.

---

* ಧೀರರು ಕೈಕೊಂಡ ಕೆಲಸವು ಫಲಿಸದೆ ವಿಶ್ರಮಿಸುವದಿಲ್ಲ.

೧. ನೀಲಾಂಬರ = ಕಪ್ಪಾದ ಆಕಾಶ, ಕಪ್ಪು ಬಟ್ಟೆ.

[ಹೀಗೆ ನುಡಿನುಡಿಯುತ್ತ, ಕತ್ತಲೆ, ಬೆಳುದಿಂಗಳ ಎಡೆಯಲ್ಲಿ, ತನ್ನ ಕೈಯನ್ನು ನುಸುಳಿಸಿತು. ಆದರೆ, ಮದುವೆಮಂಟಪದ, ವೇದವಾದ್ಯಘೋಷಗಳ, ಎಡೆಯಲ್ಲಿ, ಹೊರಗಿನ ಹೊಲೆಯರ ಚೀರಾಟವು ಕೇಳದಂತೆ, ಕತ್ತಲೆಯ ಸನ್ನೆ ವ್ಯಕ್ತವಾಗಲಿಲ್ಲ. ಆದರೂ, ಆಸನ್ನೆಯ ಕೈ ಮೇಲೇರಿ, ಬೆಳುದಿಂಗಳೆಂಬುದು, ಬಿಳಿಬಣ್ಣವಳಿದು, ಕತ್ತಲೆಯ ಎಣ್ಣೆಬಣ್ಣಕ್ಕೆ ಬಂತು. ಅದರಿಂದಲೆ, ಈಗಲೂ ಬೆಳುದಿಂಗಳಲ್ಲಿ, ಯಾರಾದರೂ ಮಾರೆರಡುಮಾರು ದೂರದಲ್ಲಿದ್ದರೆ, ನಡುವೆಯೊಂದು ಪರದೆಯಂತೆ ಮಸುಕುಬಣ್ಣವು ವಿಸ್ತರಿಸಿ, ಪರಿಚಿತನನ್ನಾದರೂ ಗುರುತುಹಿಡಿಯಲಾಗುವುದಿಲ್ಲ. ಅದರಿಂದಲೆ, ಕತ್ತಲೆ, ಹೊರಹೊರಗೆ ಹೇಗಿದ್ದರೂ, ಒಳಗೊಳಗೆ ಆ ನಕ್ಷತ್ರಪತಿಯ ಪ್ರೇಮಕ್ಕೆ ಪಾತ್ರವಾಗಿದೆಯೆಂದೂ, ಆ ಪ್ರೇಮವು ಹೃದಯದಲ್ಲಿ ಬೇರೂರಿರುವುದರಿಂದಲೆ, ನಕ್ಷತ್ರಪತಿಯ ಎದೆಯಲ್ಲಿ, ಕತ್ತಲೆಯ ಕಳಂಕವು ಈಗಲೂ ಕಾಣಬರುವುದೆಂದೂ ವರಕವಿಗಳ ಹೇಳಿಕೆ. ಅದನ್ನು ನಂಬಲೇಬೇಕು. ಯಾಕೆಂದರೆ—

ಚೌಪದಿ || ಮೆರೆಯುವಾ ಕಾವ್ಯವೆಂದೆಂಬ ಯಂತ್ರದಲಿ |
ತರತರದ ಸತ್ಯಮಿಥ್ಯಗಳನಿಕ್ಕುತಲಿ |
ಸರಸಸತ್ವದ ಸಾರವನ್ನೆ ಪಡೆಯುವರು |
ವರಕವಿಗಳಂದವನು ಪರಿಕಿಸುವುದೆಂತು ?

ಆದಿರಲಿ, ನಕ್ಷತ್ರಪತಿಯಲ್ಲಿ, ತನಗೆ ಎಡೆಯುಂಟೆಂದು ತಿಳಿದೇ, ಕತ್ತಲೆ, ಅವನ ಬೆಳಕಿನ ಬಟ್ಟೆಯಲ್ಲಿ, ತನ್ನ ಕಪ್ಪುದಾರದ ಸೂಜಿಯಿಂದ ನುಲಿಯುತ್ತಿರುವುದೆಂದರೆ ಹೆಚ್ಚಾಗದು. ಈತರದ ಕುಯುಕ್ತಿಗೆ ಎಡೆಗೊಡುವುದು ಯಾರಿಗೂ—ಅದರಲ್ಲಿಯೂ ರಾಯರಿಗೆ—ಎಂತೂ ಯುಕ್ತವಲ್ಲ. ಅರಸು ಕೆಟ್ಟರೆ ಊರೇ ಕೆಡುವುದಲ್ಲವೆ? ಒಬ್ಬ ವ್ಯಕ್ತಿ, ಎಷ್ಟು ವಿದ್ಯಾವಂತನಾದರೂ, ಅವನ ಮನಸ್ಸೂ ವಿದ್ಯಾವಂತವಾಗುವುದೆಂದು ಹೇಳಲಾಗುವುದಿಲ್ಲ. ತಾನು ವಿದ್ಯಾಭ್ಯಾಸಮಾಡುವ ಬಾಲ್ಯದಲ್ಲೆ, ಮನಸ್ಸನ್ನೂ ಸನ್ಮಾರ್ಗಕ್ಕೆ ತಿರುಗಿಸಿಕೊಳ್ಳಬೇಕಲ್ಲದೆ, ಆ ಮೇಲೆ ಸಾಧ್ಯವಲ್ಲ. ಅದರಿಂದಲೆ, ಅಂಥವರು, ಹೊರಗಿಂದ ಹೊರಗೆ ಲೋಕೋದ್ಧಾರತತ್ವವೆಂಬ ಎತ್ತರದ ಉಪ್ಪರಿಗೆಗೆ ಏರಿದರೂ, ಒಳಗಿಂದೊಳಗೆ, ಘಾತುಕವಾದ ಸ್ವಾರ್ಥದ ಕಪ್ಪಿನ ಉಗ್ರಾಣಕ್ಕೆ ಹೊಕ್ಕುಬಿಡುವರು.]

ನಕ್ಷತ್ರಪತಿ:—ನನ್ನ ನಚ್ಚಿನ ನಂಟರಾದ ನಕ್ಷತ್ರಗಳೆ, ಹೇಗಾದರೂ, ಸದ್ಯಕ್ಕೆ, ಆ ಪರಂತಪನಾದ ಆರ್ಯನ ಪೀಡೆ ಅಳಿಯಿತು. ಆದರೆ, ಅದೊಂದು ತೃಪ್ತಿಕರವಲ್ಲ. ಅಪಥ್ಯದಿಂದ, ವಾಸಿಯಾದ ರೋಗವು ಪುನಃ ನರಗಳಲ್ಲಿ ತಲೆಯೆತ್ತುವಂತೆ, ಜನರು ನಮ್ಮಲ್ಲಿ ವಿಷಮದೃಷ್ಟಿಯನ್ನಿಟ್ಟರೆ, ಆರ್ಯಮತವು ಇನ್ನೊಮ್ಮೆ ಹಬ್ಬಿ, ಇಡಿ ಲೋಕವನ್ನೆ ಹುರಿಯೆಬ್ಬಿಸಿಬಿಡುವುದು. ಆ ಅಪಥ್ಯದ ತಿನಿಸಿನಂತಿರುವ ತೇಜಸ್ವಿ, ಅದೊ, ಊರಲ್ಲಿ ಎಲ್ಲರ ನೋಟಕ್ಕೂ ಕೈಗೂ ಬೇಕಾದವನಾಗಿದ್ದಾನೆ. 'ಅವನು ಅಲ್ಪನು, ಲೋಕವು ತುಂಬ ದುರ್ಬಲವಾಗಿದೆ' ಎಂದೆಣಿಸಬೇಡಿರಿ. ಸೊನ್ನೆಗಳೆಂದರೆ, ಟೊಳ್ಳುಗಳಾದರೂ, ಅವುಗಳ ಆಧಾರದಿಂದ ನಿಂತ ಒಂದು, ಸಾವಿರಲಕ್ಷಕೋಟಿಸಂಖ್ಯೆಗಳನ್ನು ಹಬ್ಬಿಸುವುದೆಂಬ ಹಿರಿಯ ಹೇಳಿಕೆ ಪ್ರತ್ಯಕ್ಷ ಸಿದ್ಧವು. ಆದರಿಂದ ಲೋಕವನ್ನು, ನಮ್ಮ ಪಕ್ಷಕ್ಕೆ ಎಳೆಯಬೇಕಾದರೆ, ಮೊದಲು ಆ ತೇಜಸ್ವಿಯನ್ನು ನಾಶಿಸಬೇಕು. ಆ ಮೇಲೆ, ಕಡಿಯಣಬಿಗಿದ ಹುಚ್ಚುಗುದುರೆಯಂತೆ, ಲೋಕವು ನಮ್ಮ ಅಂಕೆಯಲ್ಲಿ ನಿಲ್ಲುವುದು. ಆದರೆ, ಆ ಲೌಕಿಕರಿಗೆ, ದೇಶದಲ್ಲಿಯೂ ಅರಸನಲ್ಲಿಯೂ ಅಪಾರವಾದ ಭಕ್ತಿ. ಅವರ ಆ ಭಕ್ತಿಯ ಬೇರನ್ನು, ಕಿತ್ತುಬಿಡುವುದು ಸುಲಭವಲ್ಲ. ಅವರು, ಊರುದೊರೆಗಳಿಗಾಗಿ, ತಮ್ಮ ಮೆಯ್ಯನ್ನೆ ಒಪ್ಪಿಸುವುದುಂಟು. ಆದರಿಂದಲ್ಲವೆ, ಜ್ವಾಲಾಮುಖಿಪ್ರದೇಶಗಳಲ್ಲಾದರೂ, 'ಇದು ನಮ್ಮ ಹುಟ್ಟೂರು' ಎಂಬ ಕುರುಡುನಂಬಿಕೆಯಿಟ್ಟು, ಇರುಳು ಕಂಡ ಬಾವಿಯಲ್ಲಿ ಹಗಲು ಬಿದ್ದು, ಹಲವರು ಹಾಳಾಗುವುದು? ಆದರೂ, ಅವರ ದೃಢವ್ರತವೆಂಬುದು ಶ್ಲಾಘ್ಯವೆ. ಆದರೆ, ಅದು, ವಿಧವೆಯ ಸೌಂದರ್ಯದಂತೆ, ಬರಿದಾಗುವುದೆಂಬುದು ಶೋಚನೀಯವು. ಅವರನ್ನು, ಚತುರೋಪಾಯಗಳಿಂದ, ಮೆಲ್ಲನೆ ನಮ್ಮೆಡೆಗೆ ಎಳೆದುಕೊಂಡರೆ, ಅವರ ಮನಶ್ಶಕ್ತಿಯನ್ನು, ತಕ್ಕೆಡೆಗಳಲ್ಲಿ ತಕ್ಕಂತೆ ಉಪಯೋಗಿಸಿ, ನಮ್ಮ ಗುರಿ ಹಿಡಿಯಬಹುದು. ವೈರಿಯ ಕೈದುವಾದರೂ, ಸೆಳೆದು ನಮ್ಮ ಕೈಯಲ್ಲಾದರೆ, ಅವನ ಎದೆಯನ್ನೇ ಭೇದಿಸುವುದಲ್ಲವೆ?

ಗುರು:—ರಾಜನೆ, ನಿನ್ನ ಮಾತೇ ಮಣಿಯೆಂಬುದರಲ್ಲಿ ಸಂದೇಹವಿಲ್ಲ. ನಮ್ಮ ಪ್ರಯತ್ನವಾದರೂ, ಅದರಂತೆಯೆ ಇದೆ. ಆದರೇನು? ತೇಜಸ್ವಿಯ ಮುಂದಾ

ಳುತನವು ಲೋಕದಲ್ಲಿ ಬಲವಾಗಿದೆ. ಅವನ ಧ್ವಜವೆ, ಎಲ್ಲೆಲ್ಲಿಯೂ ಸ್ಥಾಪಿತವಾಗಿದೆ. ದಾರಿಹೋಕರಿಗೂ, ಅವನೆ ಒಂದು ಕೈದೀಪವಂತೆ. ಅದೆ ಆರ್ಯಮತಾಭಿಮಾನದ ಲಕ್ಷಣವಂತೆ. ನಮ್ಮ ನಕ್ಷತ್ರಸಮೂಹವು, ಮುತ್ತು ವಜ್ರಗಳಂತೆ ತಳತಳಿಸುತ್ತಿದ್ದರೂ, ಅದು ಅವರ ದಾರಿಯನ್ನು ಪ್ರಕಾಶಪಡಿಸುವುದಿಲ್ಲವಂತೆ. ರಾಣಿರಾತ್ರಿಯು, ಮೈದುನಿಕತ್ತಲೆಯು, ಹಿತಬೋಧೆಗಳೆಲ್ಲವನ್ನೂ, ನೀಚರು ನಿರಾಕರಿಸಿದರು. ಅದಂತಿರಲಿ, ನೀನು ಹೀಗೆ ಪ್ರಕಾಶಿಸುತ್ತ ಸರ್ವಸಮವಾಗಿ, ಲೋಕವನ್ನು ಬೆಳಗುತ್ತಿರುವೆಯಷ್ಟೆ! ಆದರೂ, ಅದೋ ನೋಡು! ಹಲವರು ಆಉರಿದೀಪಗಳನ್ನೆ ಹಿಡಿದುಕೊಂಡು ನಡೆಯುತ್ತಾರೆ. ಇದಕ್ಕಿಂತಲೂ ರಾಜದ್ರೋಹವಿನ್ನೇನು?

ನಕ್ಷತ್ರಪತಿ:—ಇರಲಿ, ಆದಿಯಲ್ಲಿ, ಯಾವ ಜನಾಂಗದಲ್ಲಿಯೂ, ಅಂಥ ಆಗ್ರಹವಿರುವುದು ಪ್ರಕೃತಿ. ಕಾಲಗಳೆದಂತೆ, ವಿಷಯಜ್ಞಾನವಾಗಿ ದಾರಿಗೆ ಬರಬೇಕು. ಒಬ್ಬ ವಿದ್ಯಾರ್ಥಿ ವಿದ್ಯಾಭ್ಯಾಸವೆಂಬ ಮದ್ದನ್ನು ಸಂಪೂರ್ಣವಾಗಿ ಸೇವಿಸಿದರೂ, ಅವನ ದುರ್ಗುಣರೋಗದ ಅಶಕ್ತಿ ವಾಸಿಯಾಗದು. ಅದು ಕಾಲಕ್ರಮದಿಂದಲೆ ಗುಣವಾಗಬೇಕು. ಮೊಳೆವಾಗಲೆ ಮೊಗ್ಗೆ ಹಣ್ಣೀವುದೆ?

ಮೊದಲು, ನಯಭಯಗಳಿಂದ, ಅವರಿಗೆ ತಿಳಿಸಬೇಕು. ಸಾಕಾಗದಿದ್ದರೆ ಅವರ ಒಳಗೊಳಗೆ ಭೇದದ ಬಿತ್ತನ್ನು ಬಿತ್ತಬೇಕು. ಅದೂ ಗುರಿಮುಟ್ಟದಿದ್ದರೆ 'ಹಾವು ಸಾಯಬಾರದು, ಕೋಲು ಮುರಿಯಬಾರದು' ಎಂಬಂತೆ ಶಿಕ್ಷೆಯ ಬಿಸಿಮುಟ್ಟಿಸಬೇಕು. ಕಡೆಗೆ, ಕುಣಿಯಲ್ಲಿ ಬಿದ್ದ ಆನೆಯಂತೆ ತಾವೇ ಪಳಗುವರು.

ಕವಿ:—ನಿನ್ನ ಈ ದೀರ್ಘಾಲೋಚನೆ, ನಮಗೂ ಸಮ್ಮತವೆ. ನಾವಾದರೂ, ಈ ವರೆಗೆ ಸುಮ್ಮನಿರಲಿಲ್ಲ. ಆ ತೇಜಸ್ವಿಯ ಒಡನಾಡಿಯಾದ ಸದಾಗತಿಯನ್ನು ಕುರಿತು, ಬಹಳವಾಗಿ ಹೀಗೆ ಬೋಧಿಸಿದೆವು. "ಆರ್ಯನ ಅನುಚರನಾಗಿ, ಬೆವರುಬಿಚ್ಚಿಸಿಕೊಂಡು ಕೆಲಸಮಾಡುವುದು ಬಹಳ ಕಷ್ಟ. ನೋಡು, ನಿನ್ನ ಅಂದಿನ ಮೈಯ್ಯುಸೂಡಿನ ಉಗುರುಬಿಸಿ ಇನ್ನೂ ಆರಲಿಲ್ಲ. ನಮ್ಮೊಡೆಯನೊಳಗಾದರೆ, ಎಷ್ಟು ತಂಪಾಗಿ ಬಾಳಬಹುದು! ಇದಕ್ಕೆ ನಾವೆ ದೃಷ್ಟಾಂತವು.

*ಕವಿ= ಶುಕ್ರ, ಕವಿ.

ಆ ಆರ್ಯನ ರೀತಿಯು ಗುಟ್ಟನ್ನು ಬಿಚ್ಚುವ ಮಾತು ಇನ್ನೊಂದು. ಈನಮ್ಮ ಶನ್ಯೈಶ್ಚರನೆಂದರೆ, ನಿಮ್ಮ ಆರ್ಯನ ಪುತ್ರನೆಂಬುದು ಎಲ್ಲರಿಗೂ ತಿಳಿದ ಸಂಗತಿಯಷ್ಟೆ. ಇವನು, ಆ ತಂದೆಯ ಪೋಷಣೆಯಲ್ಲಿಯೆ ಇದ್ದು, ಬೇಸತ್ತು ಮಂದನಾಗಿದ್ದರೂ,[೧] ಕಡೆಗೆ, ಹೇಗೋ ಅಲ್ಲಿಂದ ಹೊರಟು ಇಲ್ಲಿಗೆ ಬಂದಂದಿನಿಂದ, ನಮ್ಮ ಈ ರಾಜಹಿತನಾಗಿ ಬಹಳ ಪ್ರಸಿದ್ಧನಾಗಿದ್ದಾನೆ. ಮಗನ ಮೋರೆಯನ್ನೆ ನೋಡದವನಿಗೆ ಮುಂದಿಯಲ್ಲಿ ಮಮತೆಯೆ? ಇದು ಸುಳ್ಳೊ, ಬದ್ಧವೊ ಎಂಬುದನ್ನು ಇವನಲ್ಲೆ ಕೇಳಿ ತಿಳಿದುಕೊಳ್ಳಬಹುದು. ಬೇರು ಬಲ್ಲವರಿರುವಾಗ ಎಲೆ ಮೂಸುವುದೇಕೆ? ಹೆಚ್ಚೇನು, ಆ ತೇಜಸ್ವಿಗೆ ಟಕ್ಕಿನ ಹರಳಿನಂತೆ ಮೇಲಿಂದಮೇಲೆ ಕಣ್ಣುಗಟ್ಟುವ ಹೊಳಪಲ್ಲದೆ ಒಳಗಿಂದೊಳಗೆ ಹಾಗಿಲ್ಲ. ಆತನ ನಡತೆಯನಿರೀಕ್ಷಣೆಗಾಗಿ ಹಿಂದಕ್ಕೆ ತಿರುಗಿ ನೋಡು. ಅವನು ಹೋದಲ್ಲಿ ಕಪ್ಪು, ಬಂದಲ್ಲಿ ಕಪ್ಪು. ಆದರಿಂದಲೆ ಅವನಿಗೆ ಆದಿಯಿಂದಲೆ ಕೃಷ್ಣವರ್ತ್ಮನೆಂಬ[೨] ಹೆಸರು. ಅವನೊಡನೆಯೆ, ಇನ್ನೂ ಇದ್ದರೆ, ಬರಿಗಲ್ಲಿಗೆ ನಿರರ್ಥಕವಾಗಿ ಬೆಲೆಗೊಟ್ಟು ತಲೆಗೆಟ್ಟಂತಾಗುವುದು. ನಿನ್ನ ಹಿತಕ್ಕಾಗಿಯೆ ಇಷ್ಟೆಲ್ಲ ಹೇಳುತ್ತೇವೆಯಲ್ಲದೆ, ಇದರಿಂದ ನಮಗೇನೂ ಲಾಭವಿಲ್ಲ."

[ಇದು ಅವನ ಕಿವಿದುಂಬಿಸಿದ ಮಾತಿನ ಪಟ್ಟಿ. ಅವನ ಎಣಿಕೆಯೂ ಈಗ ಅತ್ತಿತ್ತ ಒಯ್ದೊಳೆಯಹತ್ತಿದೆ. ಆದರೇನು? ಲೋಕದ ಮನಸ್ಸು ಒಂದಿಷ್ಟೂ ಕದಲಲಿಲ್ಲ.]

ನಕ್ಷತ್ರಪತಿ:—ನಿಮ್ಮ ಉಪಾಯವು ಬಹಳ ಅಚ್ಚುಗಟ್ಟಿನದು. 'ತಲೆಹೊಕ್ಕರೆ ತಾನೇ ಹೋಗಬಹುದು' ಎಂಬುದು ಹಲವುಕಡೆಗಳಲ್ಲಿ ಅನುಭವಕ್ಕೆ ಬಂದ ಸಂಗತಿ. ಸೆರೆಯಲ್ಲಿ ಹೊಕ್ಕ ನೀರು, ಹಡಗನ್ನೆ ಮುಳುಗಿಸಿ ತನ್ನ ಒಳಪಡಿಸಿಬಿಡುವುದಲ್ಲವೆ? ಆದರೆ, ಈಗ ನಮ್ಮ ಗುಟ್ಟಿನ ಆಳವನ್ನು ಮಾತ್ರ ಅಂಥವರಿಗೆ ಕಾಣಿಸದೆ ಗಂಭೀರವಾಗಿರಬೇಕು. ಅಲ್ಲವಾದರೆ ಅಪಾಯವು ಆವರಿಸಿಬಿಡುವುದು. ನೋಡು, ನೀರು ಮಾತ್ರವೆ ಸೆರೆಗಳಲ್ಲಿ ಮೇಲೊ

---

೧ ಮಂದ = ಶನಿ, ಮೂಢ. ೨ ಕೃಷ್ಣವರ್ತ್ಮ = ಅಗ್ನಿ, ದುರ್ಮಾರ್ಗಿ.

ಸರುವುದಲ್ಲದೆ, ಸಮುದ್ರದ ತಿಮಿತಿಮಿಂಗಿಲಗಳೂ ರತ್ನಹೊನ್ನುಗಳೂ, ಆ ಹಡಗದಲ್ಲಿ ನುಸುಳುತ್ತವೆಯೆ? ಸಫಲಪ್ರಯತ್ನಗಳೆಲ್ಲವೂ ಮೆಲ್ಲಮೆಲ್ಲನೇ ಮೇಲೇರುವವು. ಬಿತ್ತು, ಮರವಾಗಿ, ಹಣ್ಣಾಗಿ ತುತ್ತಾಗುವುದಲ್ಲವೆ? ಆದರೆ,-

(ಒಬ್ಬ ನಕ್ಷತ್ರದೂತನು ಒಳಹೊಕ್ಕು ನಮಸ್ಕರಿಸಿ)

ದೂತ:—ಬುದ್ಧೀ, ಸದಾಗತಿಯೂ ಜಲಧರನೂ ಬಂದು ಸಮಯನಿರೀಕ್ಷೆಯಲ್ಲಿದ್ದಾರೆ.

ನಕ್ಷತ್ರಪತಿ:—ಅ:! ಸುಶಕುನವಿದು. ಹುಡುಕುವ ಮದ್ದಿನ ಬಳ್ಳಿಯೇ ಕಾಲಿಗೆ ಸುತ್ತಿತು. ಆನುಕೂಲ್ಯವಾಗಲಿ ಪ್ರಾತಿಕೂಲ್ಯವಾಗಲಿ, ಬರುವುದೂ ಹೋಗುವುದೂ ಕಪೋತಪಕ್ಷಿಗಳ ಒಡ್ಡಿನಂತೆ ಒಟ್ಟೊಟ್ಟಿಗೆ; ಎಂದರೆ, ಮುಂಗಣ್ಣನೊಡನೆ ಮುನ್ನೂರು. ಆಗಲಿ, ಅವರನ್ನು, ಮನ್ನಣೆಯಿಂದ ಒಳಬರಿಸು.

(ಅಪ್ಪಣೆಯೆಂದು ದೂತನು ಹೋಗುವನು. ಸದಾಗತಿ ಜಲಧರರು ಪ್ರವೇಶಿಸಿ ತಕ್ಕಂತೆ ಕುಳಿತುಕೊಳ್ಳುವರು.)

ನಕ್ಷತ್ರಪತಿ:— ಪ್ರಿಯರೆ, ನಿಮಗೂ, ನಿಮ್ಮ ಪರಿವಾರಕ್ಕೂ ಸುಖವೆ?

ಜಲಧರ:—ಹಿರಿಯರ ದಯದಿಂದ, ಈ ವರೆಗೂ ಹಾಗೆಯೆ. ಆದರೇನು, ನಾವು ಕಾಲಾನುಸಾರಿಗಳು. 'ರಾಜಾಕಾಲಸ್ಯ ಕಾರಣಂ' ಎಂಬುದು ನಿಯಮವಾದುದರಿಂದ, ಇನ್ನು ಮುಂದೆ ಆ ಕಾಲವೂ ನಿನ್ನನ್ನು ಅನುಸರಿಸುವ ಸಂಭವವಿದೆ. ಅದರಿಂದ ನಮ್ಮ ಆಗುಹೋಗುಗಳಿಗೆಲ್ಲ ನೀನೇ ಅಡಿಗಟ್ಟಾಗಬೇಕಲ್ಲವೆ?

ನಕ್ಷತ್ರಪತಿ:—(ಆನಂದದಿಂದ) ಜಾಣತನದ ಮಾತಿದು. ಕೇಳು, ನನ್ನ ಸಹಾಯವೇ ಮುಖ್ಯವೆಂದೇನು? ಅದು, ಸಂಕದಂತೆ, ಎರಡು ಕಡೆಯವರೂ ಹೋಗಿಬಂದು ಬಳಕೆಯಲ್ಲಿರುವ ಬಂಧುಪ್ರೇಮದ ನಂಬಿಕೆಯನ್ನು ನೆಲೆಗೊಳಿಸಬೇಕು. ಆ ಅನ್ಯೋನ್ಯಪ್ರೀತಿ ಇಲ್ಲದೆ, ಲೋಕಾಭಿವೃದ್ಧಿಕಾರ್ಯವು, ಯಾಕೆ—ಒಂದು ಹುಲ್ಲಿನ ಚಲನೆಯಾದರೂ ಸಾಗದು. ಈ ಗುಟ್ಟು ತಿಳಿದವರಿಗೊಂದು ಹೊಸತಲ್ಲ. ಆದರೆ, ಈಗಲೂ, ಆ ನಡುಹಗಲೆಂದು ವಾದಿಸುವ ಕಡುಮೂರ್ಖರಿಗೆಲ್ಲ ಹೇಗೆ ಗೊತ್ತಾಗಬೇಕು?

ಜಲಧರ:—ಎಲ್ಲರಿಗೂ ಕ್ರಮಕ್ರಮವಾಗಿಯೇ ಮನವರಿಕೆಯಾಗುವುದು. ಆಗ ಬಿತ್ತಿ, ಈಗ ಹಣ್ಣುಕೊಯ್ಯಬೇಕೆಂದರೆ, ಹೇಗಾದೀತು? ಆ ಮೂಢತೆ ನಮ್ಮಲ್ಲಿ ಮಾತ್ರವೆಂದಲ್ಲ; ಎಲ್ಲೆಲ್ಲಿಯೂ ಒಂದೇ ರೀತಿ. 'ಮೂಢತೆಯೇ ರೂಢಿಯ ನೆಲೆಗಟ್ಟು' ಎಂಬ ಮಾತೂ, ಅದರಿಂದಲೆ ಹುಟ್ಟಿತು. ಹೊಸಸುಧಾರಣೆ ಮೇಲೆ ಬಂದು ರೂಢವಾಗಬೇಕಾದರೆ, ಆ ಕಾಲಕ್ಕೆ ಸಲ್ಲದ ಹಳೆನಡತೆಗಳ ಮೂಢಭಕ್ತಿ ಎಲ್ಲವೂ ಅಡಿಗೆ ಬೀಳಬೇಕು. ಪ್ರಕೃತಿಹಿತವಾದ ಹೊಸ ಕಟ್ಟೋಣವು, ಲೋಕಕ್ಕೆ ತನ್ನ ತಲೆತೋರಿಸಬೇಕಾದರೆ, ತತ್ಕಾಲಕ್ಕೆ ಸಮ್ಮತವಾಗದೆ ವಿಕೃತವಾದ ಹಳೆಮನೆಯ ಕಲ್ಲುಮಣ್ಣುಗಳೂ, ಕಸಕಡ್ಡಿಗಳೂ ತಳಗಟ್ಟಾಗಬೇಕಾಗುವುದಲ್ಲವೆ? ಇದೊಂದು ಸುಧಾರಣೆಯೆಂದು, ಎಲ್ಲವನ್ನೂ ಬದಲಿಸಬೇಕೆಂದು ಚಲಹಿಡಿದರೆ, ಅದು, ಆ ಮುಂದಾಳುಗಳ ಸ್ವಾಭಿಮಾನಶೂನ್ಯತೆಯನ್ನೂ, ಲೋಕಹಿತವಿಘಾತ, ಕತೆಯನ್ನೂ ಬಯಲುಪಡಿಸಿ, ಮಂಜುಗಡ್ಡೆಯ ಮನೆಯಂತೆ, ಬಿಸಿಗೆ ಪ್ರತಿಯಾಗಿ ಬೀಳಿಕೆಯನ್ನೆ ಹೊಂದುವುದು. ಹೇಗೆಂದರೆ,—ಹಳೆಯದೆಲ್ಲವನ್ನೂ ಬಿಟ್ಟರೆ, ನಮ್ಮದೆಂಬುದು ಏನೂ ಇಲ್ಲವೆಂದಾಯಿತು. ಅದಿಲ್ಲವಾದರೆ, ಆತ್ಮಗೌರವವೂ ಇಲ್ಲ. ಬೇಡವೆಂದರೆ, ಸ್ವಧರ್ಮವಾದ ಕರ್ತವ್ಯವೂ ಇಲ್ಲ. ಆ ಧರ್ಮವನ್ನು ಅಲಕ್ಷಿಸಿದರೆ, ಆತ್ಮವಿಶ್ವಾಸವೂ ಇಲ್ಲದೆ, ತಾನು ತಾನೇ ಅಲ್ಲವೆಂದಾಗುವುದು. ಆದರೆ ಲೋಕವು ಇನ್ನೂ ತಾನುತಾನಾಗಿಯೆ ಇದೆ. ಈ ಮುಂದಾಳು ಮಾತ್ರ ಬೇರೆಯಾಗಿ ಲೋಕವೆಂದರೆ, ಬೀಗದಕ್ಕೆ ಬಿಸುಟ ಪೆಟ್ಟಿಗೆಯಂತಾದೀತು. ಆ ಕೈಯನ್ನು ಕಳೆವಾಗ, ಬಾಗಿಲುತೆರೆದಿದ್ದರೆ, ಒಳಗಿನ ಸೊತ್ತು, ಕಂಡವರ ಕೈಗೆ; ಮುಚ್ಚಿದ್ದರೆ, ಹುಗಿದಿಟ್ಟ ಹಣದಂತೆ, ಕತ್ತಲೆಕೋಣೆಗೆ. ಹಾಗಾದರೆ ಎಲ್ಲವೂ ನಿರರ್ಥಕವಾದೀತು. ಆದರಿಂದ, ಮಾಸಿಹೋದರೂ, ಯೋಗ್ಯವಿದ್ದರೆ, ಆ ಹಳೆಯಪದ್ಧತಿಗಳಿಗೆ, ಒಂದಿಷ್ಟು ಹೊಸಬಣ್ಣಗೊಟ್ಟರಾಯಿತು. ನಿರರ್ಥಕಗಳಾದವುಗಳನ್ನು, ಲೋಕಕ್ಕೆ ತಿಳಿಸಿಯೆ ತೆಗೆದುಹಾಕಬೇಕು. ಉದ್ದು ಉಬ್ಬಿದರೂ ಮದ್ದಳೆಯಾಗದೆಂದು ಬೋಧಿಸಿದರೆ, ಆ ಲೌಕಿಕರೂ ಅಲ್ಲಗಳೆಯಲಿಕ್ಕಿಲ್ಲ. ಆದರಿಂದ ಎಲ್ಲವನ್ನೂ, ಅವರಿಗೆ ನ್ಯಾಯರೀತಿಯಿಂದ ತಿಳಿಸಿ, ಹೊಸಸುಧಾರಣೆಯನ್ನು ತಕ್ಕಂತೆ ಹಬ್ಬಿಸಬೇಕಲ್ಲದೆ, ಕೂಡಲೆ ನೆಲವನ್ನು ಸ್ವರ್ಗಕ್ಕೆ ಏರಿಸಬೇಕೆಂದು ಕೈಹಾರಿಸಬಾರದು. ಮೊಗೆದು ಮಿಾಯಲಿಕ್ಕೆ

ಎಡೆಯಿರುವಾಗ, ಇಳಿದು ಕಲಕಬಹುದೆ? ಇಲಿಹೆಗ್ಗಣಗಳ ಕಾಟಕ್ಕಾಗಿ ಮನೆಗೇ ಬೆಂಕಿಗೊಡಬಾರದೆಂದು ನನ್ನ ಎಣಿಕೆ. ಒಟ್ಟಿಗೆ ಹೇಳುವುದಾದರೆ, ತಂದೆಯ ರಕ್ತವೆ ಮಕ್ಕಳಾಗಿ, ಕಾಲಾನುಸಾರವಾಗಿ, ಧರ್ಮವಿರುದ್ಧವಲ್ಲದ ಕೆಲವು ರೀತಿಗಳನ್ನು ಮಾತ್ರವೆ ಬದಲಿಸಿಕೊಳ್ಳುವಂತೆ, ಸುಧಾರಣೆಯೆಂಬುದು, ಹಿಂದಿನದನ್ನೆಲ್ಲ ಕಡಿವುದಾಗಬಾರದು. ಕಡಿದರೆ, ಅದು ಧರ್ಮವೊ ಅಧರ್ಮವೊ? ಆರ್ಯಮತವಾದರೂ ಇದಕ್ಕೆ ವಿರುದ್ಧವಲ್ಲ. ಇದೆಲ್ಲ ನಿನಗೆ ಗೊತ್ತಿದ್ದ ಸಂಗತಿಯೆ. ಆದರೂ, ಸಂದರ್ಭಾನುಸಾರವಾಗಿ ಹಗ್ಗವು ಹಾವಾಗಿ ತೋರುವುದುಂಟೆಂದು ಸೂಚಿಸಿಕೊಂಡುದಕ್ಕೆ ಕ್ಷಮಿಸಬೇಕು.

ಮಂಗಳ:—ಜಲಧರನೆ, ಭೂಮಿಯ ಒಳ್ಳಿತದ ಸಲುವಾಗಿ, ಮಾತುಬಂದುದರಿಂದ, ನಾನೀಗ ಎಡೆಯಲ್ಲಿ ಬಾಯಿಹಾಕಬೇಕಾಯಿತು. ಭೂಮಾತೆಯ ಚೊಚ್ಚಲಕೂಸಾದ ಕಾರಣ, ಅವಳ ಏಳಿಗೆಯಲ್ಲಿ ಹೆಚ್ಚಾಗಿ ಆನಂದಪಡುವ ಹಕ್ಕು ನನಗೂ ಇದೆ. ಅದೇ, ನನ್ನ ಮಾಂಗಳ್ಯದ ಪರಮಾವಧಿ. ಆದರೆ, ಆರ್ಯಮತವೂ, ಭೂದೇವಿಯ ಅಭಿವೃದ್ಧಿಯ ಹವಣಿಕೆಯಲ್ಲೆ ಇತ್ತೆಂಬ ನಿನ್ನ ಹೇಳಿಕೆ, ನನಗೆ ಸರ್ವಥಾ ಒಪ್ಪುವುದಿಲ್ಲ. ನಿಮ್ಮ ಆ ಆರ್ಯನ ಕೈಕೆಳಗೆ, ನನ್ನ ತಾಯಿ ಭೂದೇವಿ ಪಟ್ಟ ಕಷ್ಟವೆಂದರೆ, ಹಗೆಗಾರರಿಗೂ ಬೇಡ. ಪಾಪ! ಅವಳ *ಕಾಲೊಣಗಿ ಮರಳಲ್ಲಿ ಹುರಿದುಹೋಯಿತು. ಮಕ್ಕಳ ಜೀವನದ ಪಾಲಿನ ಒರತೆ ಬತ್ತಿತು. ಕೆಂದಳಿರ ನಾಲಗೆ ಆರಿತು. ಬಟ್ಟೆ ಸುಟ್ಟು ಸೀಕರಿಯಾಯಿತು. ನಿನಗಾದರೂ ನಿಗಳದ ಆನೆಯಂತೆ, ಯಾವಾಗಲೂ ಹೊರಗೆ ಬರಲಿಕ್ಕೆ ಅಪ್ಪಣೆ ಇಲ್ಲ. ಅದೇಕೆಂದು ಗೊತ್ತುಂಟೆ? ಬಯಲಿಗೆ ಬಿಟ್ಟರೆ, ಬರಬಂದು ಬಾಯಾರಿದ ಭೂಮಿಯನ್ನು, ದಯಾರ್ದ್ರಹೃದಯನಾದ ನೀನು ಜೀವನವಿತ್ತು ತಣಿಸುವೆಯೆಂದು ಆ ನೀಚಪರಂತಪನಿಗೆ ಮೊದಲೇ ಗೊತ್ತು. ಆದರಿಂದಲೇ ನಿನ್ನನ್ನು ಅಂಕೆಯಲ್ಲಿಟ್ಟದು. ಈಗ ಯಾವ ಲೋಕವು "ಆರ್ಯಮತ, ಆರ್ಯಮತ" ಎಂದು ತಲೆಬಡಿದುಕೊಳ್ಳುತ್ತಿದೆಯೋ, ಅದಕ್ಕೆ ಅಂದು ತಲೆಯೆತ್ತಿ "ಇದೆಂಥ ಅನ್ಯಾಯ!" ಎಂದು ಹೇಳುವ ಹಕ್ಕೂ ಇದ್ದಿಲ್ಲ. ನಾನಂತೂ ಎಳೆಮಗುವಾದ ಕಾರಣ, ಸುಟ್ಟು ಅಂಗಾರವಾಗಿ ಹೋದೆನು. ಹೇಗಾದರೂ, ಈಮಾರಾಯನನ್ನು ಸೇರಿ,

*ಕಾಲು = ಕಾಲುವೆ, ಪಾದ.

ಈಗ ನೆಲಕ್ಕೆಲ್ಲ ಮಾಂಗಳ್ಯವನ್ನುಂಟುಮಾಡುವ ಮಂಗಳನಾದರೂ, ಆರ್ಯಾಭಿಮಾನಿಯಾದ ಲೋಕವು "ಅದೋ ಅಂಗಾರಕ" ಎಂದು ಕೈತೋರಿಸಿ ಹಲ್ಲುಕಿಸಿವುದನ್ನು ಇನ್ನೂ ಬಿಟ್ಟಿಲ್ಲ. ಹೀಗೆ ಹೇಳುವುದಕ್ಕೆ, ಲೋಕದ ಮೂರ್ಖತೆಯೊ—ಮೂಢತೆಯೊ—ಕಾರಣವು ಯಾವುದಿರಬಹುದು? ಮೊದಲನೆಯದಾದರೆ, ಅವರಲ್ಲಿ ಸಾಮಕ್ಕೆ ಎಡೆಯಿಲ್ಲ; ಮೂರ್ಖರಲ್ಲಿ 'ವರ್ಧನಂ ಗುಣವರ್ಧನಂ' ಎಂಬ ನ್ಯಾಯವೇ ತಕ್ಕುದು. ಇನ್ನು, ಎರಡನೆಯದಾದರೆ, ಬಿಚ್ಚಿಬಿಡಿಸಿ ಹೇಳಿದ ಮೇಲಾದರೂ ಕಣ್ತೆರೆಯಬೇಕಲ್ಲವೆ? ಯೋಚಿಸಿನೋಡು. ಎಳಮೆಯಲ್ಲಿ ನನ್ನನ್ನೊಮ್ಮೆ, ಅಂಗಾರ (ಮಸಿ)ವನ್ನಾಗಿ ಮಾಡಿದವನೆ ಆ ಆರ್ಯನೆಂದ ಮೇಲೆ, ಅಂಗಾರಕನೆಂಬ ಹೆಸರು, ಅವನಿಗೇ ಅಲ್ಲದೆ ನನಗೆ ಹೇಗೆ ಸಲ್ಲುವುದು? ನನ್ನನ್ನಿರಲಿ, ಆ ತಪನನ್ನು, ಆರ್ಯನೆಂಬ ಗಂಭೀರವಾದ ಹೆಸರನ್ನಿಟ್ಟುಕೊಂಡು, ಗೋಚರ್ಮವನ್ನು ಹೊದೆದು ಮುಂದೆಯಲ್ಲಿ ಎಡೆಗೊಂಡ ಹುಲಿಯಂತೆ, ಸಾಧುಪ್ರಾಣಿಗಳನ್ನೆಲ್ಲ ಸುಟ್ಟು ತಿನ್ನಲಿಕ್ಕುಂಟು. ನೋಡು, ಅವನ ಹತ್ತಿರ ಹೋದವರಿಗೆಲ್ಲ ಮೌಢ್ಯಾವಸ್ಥೆಯೆ ಗತಿಯಲ್ಲದೆ, ಸ್ವಪ್ರಕಾಶಶಕ್ತಿ ಇಲ್ಲವೇ ಇಲ್ಲ. ಇದು ಯಾವ ನ್ಯಾಯವು? ಇದರಿಂದ, ಅವನು ಹೇಳಿಕೊಳ್ಳುವ ಲೋಕಾಭಿವೃದ್ಧಿಯಾದರೂ ಹೇಗಾದೀತು? ದೊರೆಯೆಂದರೆ, ಎಲ್ಲರಲ್ಲಿಯೂ ದೊರೆ (ಸಮಾನ)ಯಾಗಿರಬೇಕು. ಹೀಗೆ ಕಂಡುದನ್ನು ಕಂಡಂತೆ ಹೇಳುವುದರಿಂದಲೆ, ಕೆಂಡದ ಸಿಟ್ಟು ಬಂದು ಮೂಢರು 'ಅನಿಷ್ಟಕ್ಕೆ ಅಂಗಾರಕ'ನೆಂದು ಮತ್ತಷ್ಟು, ನನ್ನನ್ನು ನಿಂದಿಸುವುದು. ಹುಂ, ಈ ಕಣ್ಣು ಕಿವಿಗಳಲ್ಲಿ, ಏನೆಲ್ಲ ಕಂಡು ಕೇಳಿ ಆಯಿತೊ, ಇನ್ನೇನೆಲ್ಲ ಉಂಟೋ? ಇರಲಿ, ಹತ್ತರ ಮೇಲೆ ಹನ್ನೊಂದು. ನನ್ನಲ್ಲಿ, ಆರ್ಯನ ಒಳ್ಳೆಡತೆಯ ವಿಷಯವಾಗಿ, ನೀವು ಏನು ಹೇಳಿದರೂ, ಬೇರು ಬಲ್ಲವನಿಗೆ ಎಲೆ ತೋರಿಸುವಂತೆಯೆ ಸರಿ.

ನಕ್ಷತ್ರಪತಿ:—ಪ್ರಿಯನೆ, ಆರ್ಯನ ಆಪ್ತರಾಗಿರಬೇಕಾದವರ ಅಭಿಪ್ರಾಯವೇ ಹೀಗಿರುವಾಗ, ನಮಗೆ ಇನ್ನು ಬೇರೆ ಸೂಕ್ಷ್ಮದರ್ಶಕಯಂತ್ರವೇಕೆ? ನನ್ನೊಬ್ಬನ ಸಲುವಾಗಿ ಹೇಗಾದರೂ ಚಿಂತೆಯಿಲ್ಲ. ಲೋಕಹಿತಕಾರ್ಯದಲ್ಲಿ ಕೈಹಾಕುವಾಗ ಬಲ್ಲವರೆಲ್ಲರ ನಿಜವಾದ ವಿಚಾರವನ್ನು ತಿಳಿದುಕೊಳ್ಳಬೇಕು.

ನೀನೆಂದರೆ, ಆ ಕಡೆಗೂ ಹಿತಚಿಂತಕನು. ನಮ್ಮವರಿಗಾದರೂ, ನಿನ್ನಲ್ಲಿ ನಂಬಿಕೆಯುಂಟು. ಆದರಿಂದ ನಡುವೆ ನಿಂತು, ದಡೆಹಿಡಿದು ತಪ್ಪೊಪ್ಪುಗಳನ್ನು ಅಳೆದುಬಿಡು.

ಕವಿ:—ರಾಯ, ಅವರವನಾದ ಈ ಸದಾಗತಿಯೂ ಮಧ್ಯಸ್ಥನಾಗಿರಲಿ. ಒಬ್ಬನಿಗಿಂತಲೂ ಇಬ್ಬರೆ ಲೇಸು "ದ್ವೇಷ್ಯೋಽಪಿ ಸಮ್ಮತಶ್ಶಿಷ್ಟಃ" ಎಂಬ ಕವಿ ಕಾಳಿದಾಸನ ಮಾತಿನಂತೆ, ಹಗೆಗಳ ಸಾಲಿನವರಾದರೂ ಈ ಶಿಷ್ಟರಿಬ್ಬರಲ್ಲಿಯೂ ನಮಗೆ ಬರವಸೆಯುಂಟಲ್ಲವೆ?

ನಕ್ಷತ್ರಪತಿ:—ಮುಚ್ಚುಮರೆ ಏನು? ಕವಿಯೆಂದುದು ಸವಿಮಾತು.

ಜಲಧರ:—ಸರಿ, ಆದರೆ ಒಂದು ವೇಳೆ ಲೋಕವು ನಮ್ಮ ಮಧ್ಯಸ್ಥಿಕೆಗೆ ಒಪ್ಪದಿದ್ದರೂ, ಅವರ ಜೀವನಕ್ಕೆ ಅಡ್ಡಬರುವುದು ಅಧಿಕಾರದ ಲಕ್ಷಣವಲ್ಲ.

ನಕ್ಷತ್ರಪತಿ:—ಸರಿ. ಓಷಧೀಶನಾದ ನಾನಾದರೂ, ಬೆಳೆಗಳನ್ನೊಣಗಿಸಿ, ಲೋಕದ ಆರೋಗ್ಯವನ್ನೂ ತುತ್ತನ್ನೂ ಮುತ್ತಿಸುವವನಲ್ಲ. ತಪ್ಪಿಗೆ, ಬೆನ್ನಿಗೆ ಬಡಿಯಬೇಕಲ್ಲದೆ ಹೊಟ್ಟೆಗೆ ಹೊಡೆಯಬಾರದು.

ಜಲಧರ:—ಇನ್ನೇನು? ಇಬ್ಬರದೂ ಒಂದೇ ಮನೆಯಾಯಿತು. ಆದರೆ, ಇಕ್ಕಡೆಯವರೂ ಮಧ್ಯಸ್ಥರ ಕೆಳಗಿರುವುದು ತಕ್ಕುದು. ಲೋಕವು, ಹೇಗೂ ಕೆಳಗಿದೆ. ನೀವೂ ಆ ಸಮಯದಲ್ಲಿ ನಮ್ಮೊಳಗಿರಬೇಕಾದೀತು.

ನಕ್ಷತ್ರಪತಿ:—ಒಳ್ಳೆಯದು. ಆದರೆ, ನೀವು ಮಾತುಕತೆ ನಡೆಯಿಸುವಾಗ, ಲೋಕದವರು, ಕೆಳಗಾದರೂ ನಿಮ್ಮೆದಿರಲ್ಲಿಯೆ ಇರುವರು. ನಾವಾದರೊ, ಹಿಂದುಗಡೆ ಮೋರೆಯಡಗಿಸಿಕೊಂಡಿರಬೇಕಾಗುವುದು. ಆದರಿಂದ, ನಮ್ಮ ಪ್ರತಿನಿಧಿಯಾಗಿ, ಕತ್ತಲೆಯೊಂದು ನಿಮ್ಮೆದಿರಲ್ಲೇ ಇರಬೇಕು. ನಿಮ್ಮ ಬರವಸೆ, ನಮಗೆ ಎಷ್ಟರಮಟ್ಟಿಗಿದೆಯೆಂದು, ನಿಮಗೇ ಮನಮುಟ್ಟಿರುವುದಷ್ಟೆ. ಆದರೂ ಇದೊಂದು ನಮ್ಮವರ ಗೌರವಾರ್ಥವಾಗಿ

ಜಲಧರ:—ಆಗಲಿ, ಮನಸ್ಸಿಗೆ ಮತ್ಸರವುಂಟೆ? ನಾನಿನ್ನು, ಲೋಕದ ಒಡನಾಡಿಯಾದ ಈ ಸದಾಗತಿಯನ್ನೆ ಮುಂದೆ ಮಾಡಿ, ಅವರೊಡನೆ ಮಾತಾಡುತ್ತೇನೆ.

[ಅದಕ್ಕೆ ನಕ್ಷತ್ರಪತಿ ಸೈಗುಟ್ಟಿ, ಪರಿವಾರದೊಡನೆ ಜಲಧರನ ಮರೆಹೊಕ್ಕನು. ಮಧ್ಯಸ್ಥರು ಅಡಿದೆಗೆವುದಕ್ಕೆ ಮೊದಲೆ, ಕಣ್ಣುಕುತ್ತಿದರೂ ಕಾಣದ ಕತ್ತಲೆ ಎತ್ತೆತ್ತಲೂ ಮುತ್ತಿಮುಸುಕಿ, ವೇಷಧಾರಿಗಳು ಅತ್ತಿತ್ತ ಸರಿವ ಮೊದಲೆ ಬೀಳುವ ಜವನಿಕೆಯಾಯಿತು. ಸೆರೆಸಿಕ್ಕಿದಲ್ಲಿ ಉಳಿಹೊಗಿಸುವುದು ದುಷ್ಕರ ಕಟ್ಟಳೆ. ಜಲಧರನು ತಿರುಗಿ ಲೋಕವನ್ನು ನೋಡಿದನು. ಎಲ್ಲೆಲ್ಲಿಯೂ ತೇಜಸ್ವಿಯ ಬಾವಟೆಗಂಬಗಳೂ, ಬೇರೆ ಬೇರೆ ಬೆಳಕಿನ ಪತಾಕೆಗಳೂ, ಕಾರ್ಗತ್ತಲೆಗಣಿಯ ಮಣಿಗಳಂತೆ, ಜಳಜಳಿಸುತ್ತಿದ್ದುವು. ಕತ್ತಲೆ ವಿಸ್ತರಿಸಿದಷ್ಟು, ಸಾರಣೆನೆಲದಲ್ಲಿ ಚೆಲ್ಲಿದ ಜಲಬಿಂದುಗಳಂತೆ, ಆ ಧ್ವಜಗಳು ತಳತಳಿಸಿ ನೆಲೆನಿಲ್ಲುತ್ತಿದ್ದುವು. ಎದುರಾಳುಗಳು, ಸಡಿಲಾಗಿ ಹೊಕ್ಕುಹೊರಡುತ್ತ ಕೆಳೆಯುದಂತಿದ್ದರೆ, ನಿಷ್ಕಪಟಿಗಳ ಎಣಿಕೆಯ ಬೆಳಕು, ಮರಳಿಗೆ ಬಿದ್ದ ನೀರಿನಂತೆ ಅರಿಪೋಗುವುದು ಸ್ವಭಾವವು. ದೃಢನಿಶ್ಚಯುದವರ ಬಗೆ ಬಯಲಾಗಬೇಕಾದರೆ, ವಿರೋಧಿಗಳ ಒತ್ತಾಟವೇ ಬೇಕು. ಇರಲಿ, ಜಲಧರನು, ತನ್ನ ಶಾಂತವಾದ ಅಂತರ್ಯನನ್ನು ತಿಳಿಸಿ ಸದಾಗತಿಯನ್ನು ಲೋಕಕ್ಕೆ ಕಳುಹಿದನು. ಆ ಸದಾಗತಿಯ ಬರುವಿಕೆಯನ್ನು ಹೀಗೆ ಬಣ್ಣಿಸಬಹುದು.

ಕಂದ || ಜಲಧರನಂ ತನ್ನವರೊಡ
ನೊಳಹೊಕ್ಕನು ರಾಜನೀಗ ಕತ್ತಲೆಯೆತ್ತಂ ||
ತಲೆದೋರುತವನ ಬಗೆಯೀ
ಬಲವಾಗಿದೆ, ಲೋಕವೆನ್ನ ನುಡಿಗೊಪ್ಪುವುದೆ? || ೧ ||
ಎನ್ನುವ ಸಂದೇಹದ ಚಳಿ
ಯಿಂದನುಗುತ್ತಾವಮಾತನೆತ್ತಲಿ. ನೆಲದಿ ||
ಮುನ್ನಿಂದು ಶಂಕೆಗೊಳ್ಳುತ
ತನ್ನಯ ಕೈಬೀಸಿ ಮೆಲ್ಲಮೆಲ್ಲನೆ ಸುಳಿದಂ || ೨ ||

ಸದಾಗತಿ ಲೋಕಕ್ಕಿಳಿದು, ತೇಜಸ್ವಿಯನ್ನು ಬಿಟ್ಟು, ಮೊದಲು ಊರವರ ಕಿವಿಯನ್ನೆ ಊದಬೇಕೆಂದು ಹವಣಿಸಿದನು. ಆದರೆ, ಅವರು ಸದಾಗತಿಯ ಚಳಿಗೆ ಸಂದೇಹಿಸಿ, ಅದನ್ನೊಲ್ಲದೆ, ತೇಜಸ್ವಿಯೆಡೆಗೇ ಹೋದರು. ದೃಢನಿಶ್ಚಯದ ಹಿಂದಾಳುಗಳು, ನಿಷ್ಠುರಾದ ಮುಂದಾಳುಗಳ ಕಣ್ಮರೆಯಿಸಿ ಈಚೆಯ ಕಡ್ಡಿಯನ್ನಾದರೂ ಆಚೆಗೆ ಇಡಲು ಸಮ್ಮತಿಪರೆಂಬುದು ಆಶ್ಚರ್ಯವಲ್ಲ. ಉಪಾಯವಿಲ್ಲದೆ, ಸದಾಗತಿಯೂ ತೇಜಸ್ವಿಯ ಸಮ್ಮುಖಕ್ಕೇ ಪರಿಯಬೇಕಾಯಿತು.]

ತೇಜಸ್ವಿ:—(ಸದಾಗತಿಯನ್ನು ಇದಿರ್ಗೊಂಡು ತಲೆಯನ್ನೊಲೆಯುತ್ತ) ಪ್ರಿಯನೆ, ಇದೇನು? ಈಗ ನಿನ್ನ ಮೆಯ್ಯ ಬಗೆಯೇ ಬದಲಾಗಿ ಹೋಗಿದೆ. ಅಲ್ಲಲ್ಲಿ ಅಲೆಯುತ್ತಿರುವುದರಿಂದಲೇ ಹೀಗೆ ಚಳಿ ಹಿಡಿದಿರಬಹುದೆ?

ಸದಾ:—ಉ: ಅದೇನೂ ಇಲ್ಲ. ನನ್ನ ಪ್ರಕೃತಿಯೆ ಹಾಗೆ.

ತೇಜಸ್ವಿ:—ಪ್ರಕೃತಿ, ಹೇಗಾದರೂ ಬದಲಾಗದು. ಆದಂತೆ ತೋರಿದರೆ, ಅದನ್ನು ವಿಕೃತಿಯೆನ್ನಬೇಕು. ಇರಲಿ, ಹೆಚ್ಚಿನ ಸುದ್ದಿ ಏನು?

ಸದಾ:—ಬೇರೇನೂ ಇಲ್ಲ; ಆದರೆ, ನಮ್ಮ ಜಲಧರನ ಉಪಾಯದಿಂದಾಗಿ, ಈಗ ಹಗೆಗಳು ನಮ್ಮ ಬಗಲಿಗೆ ಬರುವಂತಿದ್ದಾರೆ.

ತೇಜಸ್ವಿ:—ಆದುಷ್ಟರು ಹೇಗಿದ್ದರೂ ಹಾಗೆಯೆ. ಹರಡಿದರೂ ಕರಡಿಗೆ ಮುಚ್ಚಿದರೂ ನಾತವೆಂಬುದು ನಾತವೆ. ಆ ವಿಷಯದಲ್ಲಿ 'ದುಷ್ಟಂ ದೂರೇಣ ವರ್ಜಯೇತ್' ಎಂಬುದೇ ಅಚ್ಚುಗಟ್ಟು.

ಸದಾಗತಿ:—ನೋಡು, ಇಂಥ ಬಿರುಸು ಯಾರಿಗೂ ಸಲ್ಲದು. ಅವರ ಕಾಲಡಿಯಲ್ಲಿ ಸಿಕ್ಕಿಬಿದ್ದಿರುವ ನಮಗಂತೂ, ಅದರ ಮೂರಿಯೂ ಬಡಿಯಬಾರದು. ಬಂದಿಯ ಬಾಯಬ್ಬರದಂತೆ, ಈಗಲೂ ನಾವು ಬೊಬ್ಬಿರಿದರೆ 'ಆಃ, ವೈಗೇಣಷ್ಟು, ಮಾತು ಮಾರಷ್ಟು' ಎಂಬ ಮಾತಿಗೆ ತಲೆಬಗ್ಗಿಸಬೇಕಾದೀತು. ಮಾತ್ರವಲ್ಲ, ಈಗಿನ ನಿನ್ನ ಅಲಕ್ಷ್ಯಭಾವವೆಂದರೆ ಹಗೆಗಳಲ್ಲಲ್ಲ; ನಮ್ಮವರಲ್ಲಿಯೆ. ಹೇಗೆಂದರೆ—ಮಾರಾಳುಗಳು ನಮ್ಮ ಬಿರುಸಿಗೆ ಬಗ್ಗುವುದಿಲ್ಲ, ತಂಪಿಗೆ ಹಿಗ್ಗುವುದಿಲ್ಲ. ಆದರೆ, ಇದರಿಂದ, ಹೇಗಾದರೂ ಹಗೆಗಳನ್ನು ಹಿಂಗಟ್ಟು ಮುಂಗಟ್ಟುಮುರಿಯಬೇಕೆಂದು ಪ್ರಯತ್ನಿಸುವ ನಮ್ಮವರ ಉತ್ಸಾಹಬೀಜವು, ಸುಡುನೀರೆರೆದಂತೆ ಕರಿಕಾಗುವುದು.

ತೇಜಸ್ವಿ:—ಇದೇನು, ನೀನೀಗ ಹೊಸಬನಾಗಿರುವಂತೆ ತೋರುವುದಲ್ಲ! ನಮ್ಮವರನ್ನು ನಾವು, ಮೊದಲೆ ಹೊಗಳುವುದೆಂದರೆ, ಕಾರ್ಯಸಾಧನೆಯ ಕತ್ತಿಗೆ ಮಣ್ಣುಹಿಡಿಯಿಸಿದಂತೆಯೆ. ಸ್ತುತಿಸಿದೊಡನೆ, ತನ್ನ ಕೆಲಸಕ್ಕೆ ಮುಗುಳಿ ಇಟ್ಟಾಯಿತೆಂದು ನೆನಸಿ, ಉದ್ಯೋಗದ ಕೈ, ಬೇಡವೆಂದರೂ ಸ್ವಲ್ಪ ಸಡಿಲಾಗುವುದು ಸಾಮಾನ್ಯವಾಗಿ ಪ್ರಕೃತಿ. ಆ ಹೊಗಳಿಕೆ, ಸಫಲವಾದ ಕಾರ್ಯಕ್ಕೆ ಮೇಲುಪುಡಿಯಾದರೆ ಚೆನ್ನಾಗುವುದಲ್ಲದೆ, ಗುಟ್ಟಿನ ಕಾರಣ

ಕ್ಕಲ್ಲ. ಒಪ್ಪವೆಂಬುದು ಬಂಗಾರದ ತೊಡವಿಗೆ; ಕರಗಿಸುವ ಕೋವೆಗಾಗಲಿ, ಅದರೊಳಗಣ ಹೊನ್ನಿನ ರಸಕ್ಕಾಗಲಿ, ಕೊಡತಿಗೆಗಾಗಲಿ ಅದೊಪ್ಪುವುದೆ? ಕಾಲಗತಿಯಿಂದ ಆ ಕಾರಣವು ಸಫಲವಾಗದಿದ್ದಲ್ಲಿ, ನೆರೆಮನೆ ದೋಸೆಗೆ ಕಾಯಿಹಾಲು ಹಿಂಡಿದಂತೆ, ಬರಿದಾಗುವುದಲ್ಲದೆ, ಆ ಹೊಗಳಿಕೆಯು ಮೋರೆಗೆ ತೆಗಳಿಕೆ, ತನ್ನ ಬಣ್ಣವನ್ನು ಬಳಿವುದು. 'ನಾವೀಗ, ಹಗೆಗಳನ್ನು ಸಂಧಿಗೆ ಒಪ್ಪಿಸಿದ್ದೇವೆ. ಅದರಿಂದ, ಅದೊಂದು ಕಾರ್ಯವು ನೆರವೇರಿತಲ್ಲವೆ? ಆ ಕಾರ್ಯಕ್ಕೆ ತಕ್ಕ ಸ್ತುತಿಪಾಠವಾದರೂ ಈಗಬೇಡವೆ?' ಎಂದು ಕೇಳ ಬಹುದು. ಆದರೆ, ಒಪ್ಪಿದ ಮಾತ್ರದಿಂದ ಕಾರ್ಯವಾಗಲಿಲ್ಲ ಅದು ಕಾರ್ಯಾಂ ಗವು ಅಂಥ ಕಾರ್ಯಾಂಗಗಳೂ, ಸಂಪೂರ್ಣಕಾರ್ಯಕ್ಕೆ ಕಾರಣಗಳಾಗುತ್ತವೆ. ಏನು, ಗೋಡೆ ಮೆತ್ತಿದರೆ ಮನೆಗಟ್ಟಿದಂತಾಯಿತೆ? ನಮ್ಮಂಥವರ ಮಾತಿನ ಮೊಗ್ಗೆಗೆ ದೃಢನಿಶ್ಚಯವೆ ಬಿತ್ತು. ದೃಢನಿಶ್ಚಯಕ್ಕೆ ಮನಶ್ಶಕ್ತಿಯೆ ಮೂಲವು. ಮನಶ್ಶಕ್ತಿಗೆ ಆರ್ಯನ ಬೋಧನೆಯೆ ತಿಳಿನೀರು. ಇಷ್ಟು ಅನುಕೂಲತೆ ಯುಳ್ಳ ಆ ಮೊಗ್ಗೆ ಹುಚ್ಚು ಹೂ ಬಿಟ್ಟು ಕೆಲಸದ ಮಿಡಿ ಮೊಳೆಯಲಿಕ್ಕಿಲ್ಲ ವೆಂಬ ನಿನ್ನ ಎಣಿಕೆಗೆ ಏನು ಹೇಳಲಿ!

[ಈಗ ಸದಾಗತಿಗೆ ಮಾತು ಮುಟ್ಟಿತು. ಏನೇನೊ ಯೋಚಿಸುತ್ತ ಅತ್ತಿತ್ತ ಒಲೆದಾಡತೊಡಗಿದನು. ತೇಜಸ್ವಿಯೂ ನಕ್ಕು ಆಲೋಚಿಸಿ ಶಿರಃ ಕಂಪನದೊಡನೆ ಹೀಗೆ ಹೇಳುತ್ತಾನೆ.]

ತೇಜಸ್ವಿ:—ಪ್ರಿಯನೆ, ನನ್ನ ಈ ಮಾತಿಗೆ ಬೇಸರಪಡಬೇಡ. ಗೆಳೆಯರಾಡುವ ಎಳ್ಳಷ್ಟಾದ ಸಿಡಿನುಡಿಯೂ, ತಾವರೆಗೆ ಬಿಸಿಲಿನಂತೆ, ಸಂತಸಕ್ಕೇ ಕಾರಣ ವಾಗುವುದಲ್ಲವೆ? ಹುಂ, ತಿಳಿದವರಲ್ಲಿ ಬಿಚ್ಚಿಬಿಡಿಸಿ ಬಿತ್ತರಿಸುವುದೇಕೆ? ಹೇಳು; ಹಗೆಗಳು ನಮ್ಮ ಬಗಲಿಗೆ ಬರುವಂತೆ, ನೀವು ಹೂಡಿದ ಹೂಣಿಕೆ ಹೇಗೆ?

ಸದಾಗತಿ:—(ಬೇಸರದಿಂದ) 'ಮುಟ್ಟವು ತಿಂದರೆ ಸಾಕು; ಗುಳಿ ಲೆಕ್ಕವೇಕೆ?' ಎಂದಲ್ಲವೆ ನಿನ್ನ ಅಮೌಲ್ಯಾಭಿಪ್ರಾಯವು? ಅದರಿಂದ, ನಮ್ಮ ಆ ಉಪಾ ಯದ ಪರಿಮಳಕ್ಕೆ ಮೂಗರಳಿಸುವುದೇಕೆ?

ತೇಜಸ್ವಿ:—(ನಕ್ಕು) ಓಹೋ, ನಿನ್ನಲ್ಲಿ, ಬೇಸರದ ಬೇರೂರಿ ಹೋಗಿದೆ. ಪ್ರಾಣ ಪ್ರಿಯರಲ್ಲಿಯೂ ಇಂಥ ಮುನಿಸಾದರೆ, ಇನ್ನು, ಸವಿಯೊಸರುವ ಪ್ರೇಮ

ಕಲಹಕ್ಕೂ ಎಡೆಯಿಲ್ಲ. ಅದಿಲ್ಲವಾದರೆ, ಮುಖ್ಯವಾದ ಶೃಂಗಾರರಸದ ಜೀವನವೆ ಆರಿದಂತೆ. ನನ್ನ ಪ್ರೇಮಕಲಹದ ಗುಟ್ಟಾದರೂ ಬೇರೆಯಿಲ್ಲ; ಆ ಉಪಾಯದ ಮೊಗ್ಗೆಯನ್ನು ನಿನ್ನ ಗಾಳಿಯ ಗಂಟಿನಲ್ಲಿ ಹಾಕಿಕೊಂಡರೆ, ಗಂಧವು ಬಯಲಾಗಿ, ಕೆಟ್ಟುಹೋಗುವುದೆಂದು ಮಾತ್ರವೆ. ಇರಲಿ, ಆ ಕೋಪದ ಪರದೆಯನ್ನು ಓಸರಿಸಿ, ಪ್ರೀತಿವಿಶ್ವಾಸದ ಕರಡಿಗೆಯ ಮುಚ್ಚಳವನ್ನು ತೆರೆ.

ಸದಾಗತಿ:—(ಸಂತೋಷದಿಂದ) ಪ್ರಿಯನೆ, ನಿನ್ನ ಎಚ್ಚರಿಕೆ ಸರ್ವಥಾ ಸರಿಯೆ. ಆದರೆ ನಾನಾದರೂ ಆ ಗುಟ್ಟಿನಕಟ್ಟನ್ನು ಮನಸ್ಸಿಗೆ ಮಾತ್ರವಲ್ಲದೆ, ಕೈಗೆ ಕೊಟ್ಟಿಲ್ಲ. ನಿನಗೊಬ್ಬನಿಗೆ ತಿಳಿಸುವುದಷ್ಟೇ ನನ್ನ ಎಣಿಕೆ. ಈಗ ಆ ನಕ್ಷತ್ರಪತಿಯೂ ಅವನ ಪರಿವಾರವೂ ನಮ್ಮ ಜಲಧರನ ಮರೆಹೊಕ್ಕು ಬೆನ್ನುಹಿಡಿದಿದ್ದಾರೆ. ಇಕ್ಕಡೆಯ ಜಗಳದ ತೀರ್ಪಿನ ಹಕ್ಕೂ ನಮ್ಮವನ ಕೈಗೇ ಕಟ್ಟಿಕೊಡೋಣಾಗಿದೆ. ನ್ಯಾಯವಿರುದ್ಧವಾದ ಗೊಡ್ಡುಚಳವಳವು, ನಮಗೆ ಬೇಡವಾದುದರಿಂದ ಸಂಧಿಗೆ ಇದೇ ಒಳ್ಳೆಯ ಸಮಯವು.

ತೇಜಸ್ವಿ:—ಸರಿ, ಸಂಧಿಗೆ ನನಗೂ ಸಂತೋಷವೆ. ಆದರೆ ಅವರಿಗೆ ಜಲಧರನ ನಂಬಿಕೆಯಿದ್ದರೆ, ಈ ಕತ್ತಲೆ ಯಾಕೆ?

ಸದಾಗತಿ:—ಅದರಿಂದೇನು? ಇಕ್ಕಡೆಯವರನ್ನೇ ಇಟ್ಟುಕೊಂಡು ವಾದವನ್ನು ತೀರಿಸುವುದು ತಪ್ಪೆಂದೆಣಿಸಿದ ನಮ್ಮ ಜಲಧರನ ಒಪ್ಪಿಗೆಯಿಂದಲೆ ಕತ್ತಲೆ ಇತ್ತಕಡೆ ಬಂದಿದೆ.

ತೇಜಸ್ವಿ:—(ಉರಿದೆದ್ದು) ಆ:, ಇದೀಗ ಒಳ್ಳೆಯ ಸಂಧಿ. ಯಾವದು ರಾಜಮಾರ್ಗದಿಂದ ಕವಲುದಾರಿಗೆಳೆದು ಕಾಡಿಗೆ ದೂಡುವುದೊ, ಯಾವುದು, ಮಂಕುಮುಸುಕಿ ಬಳಿದು ಕಂಡವರ ಕಣ್ಣನ್ನು ಕುರುಡಾಗಿಸುವುದೊ, ಯಾವುದರ ಸಲುವಾಗಿಯೆ ಲೋಕಕ್ಕೆ ಇಷ್ಟು ಅಸಮಾಧಾನವುಂಟಾಗಿದೆಯೊ, ಆ ಕೆಡುಗತ್ತಲೆಗೆ ಈ ಸಂಧಾನದ ಸಭಿಕತೆಯೆ! ನಕ್ಷತ್ರಪತಿಯಾಗಲಿ, ಪ್ರತಿನಿಧಿಗಳಾಗಿ ಗುರು ಮೊದಲಾದವರು ಯಾರಾಗಲಿ, ಬರುವಂತೆ ಏರ್ಪಡಿಸಬೇಕಿತ್ತು. 'ತಾನು ರಾಜನು; ತನ್ನವರು ರಾಜಸಭೆಯ ಮಹನೀಯರು. ಲೌಕಿಕರೊಡನೆ ಕೂಡಿ ಕೂತುಕೊಳ್ಳುವುದೆಂದರೆ ಮಾನಹಾನಿ' ಎಂಬೆಣಿಕೆಯಿದ್ದರೆ,

ಅದಕ್ಕೂ ತಕ್ಕ ನಿವೃತ್ತಿಯುಂಟು. ಅಧ್ಯಕ್ಷನಾಗುವ ಜಲಧರನ ಸಿಂಹಾಸನವನ್ನು ಸ್ವಲ್ಪ ಚದರಿಸಿ ಆ ಮಹನೀಯರಿಗೆ, ಮೇಲೆಯೆ ಎಡೆಮಾಡಬಹುದು. ಹಾಗಾದರೆ, ಯಾರಿಗೂ ಅಮಾನ್ಯತೆ ಇಲ್ಲವಷ್ಟೆ. ಆ *ದೋಷಾವಿಷ್ಟನಾದ ನಕ್ಷತ್ರಪತಿ ಎದುರಲ್ಲಿ ಬಿಳಿನಗೆ ನಕ್ಕುದು 'ಕಂಕುಳಲ್ಲಿ ದೊಣ್ಣೆ, ಕೈಯಲ್ಲಿ ಸಲಾಂ' ಎಂಬಂತೆಯೆ. ಅಲ್ಲವಾದರೆ ಈ ಕತ್ತಲೆಯು ಪಿಶಾಚಿಯನ್ನು ಕಳುಹಿದುದೇಕೆ? ಇರಲಿ, ಅದು ಆ ದೋಷಿಯ ಲಕ್ಷಣವೆ. ಕುಗ್ಗಿದರೆ, ಕೊಂಕಿನ ಕೋಲಾಗಿ, ಉಬ್ಬಿದರೆ, ಕಳಂಕದ ಕುಂಬಳಕಾಯಿಯಂತಾಗುವುದು ಅವನ ಹುಟ್ಟುಗುಣವು. ಆದರೆ, ಲೋಕದ ಇಂಗಿತವನ್ನು ಅರಿತುಕೊಳ್ಳದೆ, ಜಲಧರನೂ ಈಸ್ವಾಭಿಮಾನಘಾತುಕವಾದ ಹೀನಕೃತ್ಯಕ್ಕೆ ಅಸ್ತುಗೊಟ್ಟುದು ಹೇಗೆ? ಇರಲಿ, ಸಭೆಗೆ ಬರುವ ಪ್ರತಿನಿಧಿಗಳೆಂದರೆ, ಆಮಂತ್ರಣದ ಅತಿಥಿಗಳಂತೆ, ಮನ್ನಣೆಯಿಂದಿರಬೇಕಲ್ಲದೆ, ಈ ಕತ್ತಲೆಯಂತೆ ಅಕ್ರಮಪ್ರವೇಶಮಾಡಬಹುದೆ? ನೋಡು, ಎತ್ತೆತ್ತಲೂ ಕತ್ತಲೆಯ ಕಂಬಳಿಯಿಂದಾಗಿ ನಮ್ಮವರ ಪೀತಾಂಬರಕ್ಕೂ ಎಡೆಯಿಲ್ಲ. ಹೆಚ್ಚೇಕೆ? ಆ ಕತ್ತಲೆ ಸಂಧಾನದ ನಿಯಮವನ್ನು, ತನ್ನ ಮಾನದೊಡನೆ ಬಿಟ್ಟು, ಊರಿಗೆ ಊರನ್ನೆ ಕಣ್ಣುಗಟ್ಟಿ ಸೂರೆಮಾಡುವಂತಿದೆ.

ಸದಾಗತಿ:—ಅಃ, ಹೀಗೆ, ನಮ್ಮವರಲ್ಲೆ ನಂಬಿಕೆ ನಾಸ್ತಿಯಾದರೆ, ಹೇಗೆ ನಡೆದೀತು. ಪ್ರಬಲರಾದ ಹಗೆಗಳ ಎತ್ತಿದ ಕೇನೆದಲೆಗೆ ಕಲ್ಲಿಡಲಿಕ್ಕೆ, ಅಡಿಯಲ್ಲಿ ಹರಿಯುವ ಹುಳುಗಳಂತಿರುವ ನಮಗೆ, ಈಗಲೆ ಸಾಧ್ಯವೆ? ಅದರಿಂದ, ನಾವು 'ಬಗ್ಗಿ ಪೋಣಿಸಿದರೆ, ಕೆಲಸದ ಬಟ್ಟೆ ನೆಗ್ಗಿ ಕಾಣಿಸುವುದು.' ಎಂಬುದನ್ನು ನೆನಪಿನಲ್ಲಿಡಬೇಕು. ತಂತಮ್ಮ ಮನೆಗಲ್ಲದೆ, ಲೋಕಕ್ಕೆ ಬೇಲಿ ಹಾಕಲಿಕ್ಕೆ ಯಾರಿಂದಲೂ ಸಾಗದು. ನಮ್ಮ ಕೆಲಸದ ಕಾಲು, ಇಷ್ಟರ ಮಟ್ಟಿಗೆ ಊರಿದುದೆ ಪುಣ್ಯವೆನ್ನಬೇಕು. ಯಾರು ಬಂದರೇನು? ನಿನ್ನ ಅಮೌಲ್ಯಾಭಿಪ್ರಾಯವನ್ನು ಹೇಳಬಹುದಷ್ಟೆ. ಕಂಬಳಿಯಿಂದಾಗಿ ಪೀತಾಂಬರದ ಬೆಲೆ ತಗ್ಗದು.

ತೇಜಸ್ವಿ:—ಇದೇನು, ನೀನು ಕಂಡೂ ಕಾಣೆನೆನ್ನುತ್ತಿರುವುದು! ನಕ್ಷತ್ರಪತಿಗೂ ಲೋಕಕ್ಕೂ ಇರುವ ವಿರೋಧವೆಂದರೆ, ಈ ಕತ್ತಲೆಯ ವಿಷಯವಾಗಿಯೆ

*ದೋಷ= ರಾತ್ರಿ, ದುರ್ಗುಣ.

ಇದೆ. ಹಾಗಿರುವಾಗ, ಅಪರಾಧಿಯನ್ನೆ ಸಭ್ಯನನ್ನಾಗಿ—ಯಾಕೆ—ಈಗಿನ ಸ್ಥಿತಿಯನ್ನು ನೋಡಿದರೆ, ಅಧಿಕಾರಿಯನ್ನಾಗಿಯೆ—ಆರಿಸುವುದೆಂದರೇನು!! ಸುಶಿಕ್ಷಿತವಾದ ಮನಸ್ಸು, ಎಲ್ಲ ಇಂದ್ರಿಯಗಳ ಹೇಳಿಕೆಯನ್ನರಿತು, ಸನ್ಮಾರ್ಗವನ್ನೆ ಬೋಧಿಸುವಂತೆ, ಸರ್ವ ಪ್ರತಿನಿಧಿಗಳ ಅಭಿಪ್ರಾಯವನ್ನು ತಿಳಿದು ಪಕ್ಷಪಾತವಿಲ್ಲದೆ ಲೋಕಹಿತವನ್ನು ಹಬ್ಬಿಸುವುದೆ ಮಧ್ಯಸ್ಥನ ಗುರಿಯಾಗಿರಬೇಕು. ಅದಿಲ್ಲದೆ 'ಮನೆ ನಿಮ್ಮದೆ, ತಂಬಿಗೆ ಮಾತ್ರ ಮುಟ್ಟಕೂಡದು' ಎಂಬ ವಂಚಕರ ಮಾತಿಗೆ ಬಾಯಿಬಿಡುವುದೆಂದರೆ, ಲೋಕದ್ರೋಹವೆ ಆಗುವುದು. ಅದು ಸಂಧಿಯಲ್ಲ, ಬಂಧವು.

ಸದಾಗತಿ:—ಮಾಡುವುದೇನು? ನಮ್ಮವರೆ ಬಹಳ ಮಂದಿ, ನಕ್ಷತ್ರಪತಿಯು ಸಂಚಿಯಲ್ಲಿರುವುದರಿಂದ, ಅವನಿಗೆ ಇಷ್ಟು ಎದೆಗಟ್ಟು. ಅಷ್ಟೆ ಅಲ್ಲ. ಅದರಿಂದ, ನಮ್ಮ ಅರ್ಯಮನ ಆಡಳಿತಕ್ಕೂ ಇಂತಿಷ್ಟೆ ಬೆಲೆಯೆಂಬ ಅವರ ಹೇಳಿಕೆಯೂ ಕೇಳತಕ್ಕುದಲ್ಲವೆ? ಹಾಗಿರುವಾಗ, ಈ ಮಧ್ಯಸ್ಥತೆಯ ಅಧಿಕಾರವು ನಮ್ಮವರಲ್ಲೊಬ್ಬನ ಪಾಲಿಗೆ ಬಂದುದು, ಹಗೆಗಳ ಸೌಜನ್ಯವನ್ನೂ ನಮ್ಮವರ ಭಾಗ್ಯೋದಯವನ್ನೂ ಸೂಚಿಸುತ್ತದೆ. ಅದನ್ನಷ್ಟೂ ಧಿಕ್ಕರಿಸಿ ತಮ್ಮ ಸ್ಥಿತಿಗತಿಗಳನ್ನೆಣಿಸದೆ 'ನನ್ನ ಎತ್ತಿಗೆ ಮೂರು ಕೊಂಬು' ಎಂದು ಹೇಳುವುದೆಂದರೆ, ಕೆರೆಯಲ್ಲಿ ಕೋಪಿಸಿ ಮುಖಮಜ್ಜನಮಾಡದ ಮೂಢತೆಯೆ ಸರಿ.

ತೇಜಸ್ವಿ:—ನಮ್ಮವರೆ ಕೆಲವರು ಆ ಕಡೆಯಲ್ಲಿದ್ದು ವಾದಿಸುತ್ತಾರೆಂದರೆ ಏನು? ತೇಜಸ್ಸಂಬಂಧವನ್ನು ನೋಡುವುದಾದರೆ, ಅವರೆಲ್ಲರೂ ನಮ್ಮವರೆ. ನಾವೆಲ್ಲರೂ ಒಂದೆ ಮರದ ಕೊಂಬೆರೆಂಬೆಗಳಂತೆ, ಅರ್ಯಮನನ್ನೆ ಹಿಡಿದಿರುವವರು. ಈಗ ಅರ್ಯಮನು ಇಲ್ಲಿಲ್ಲದುದರಿಂದ, ಆ ಕೆಲವರು ಮಾತ್ರ ಕತ್ತಲೆಯ ಮಾಯಕ್ಕೆ ಮರುಳಾಗಿ ಹೀಗೆ ತಲೆಕೆಳಗಾಗಿದೆ. ಹೊಟ್ಟೆ ಒಂದಾದರೂ ಹುಟ್ಟುಗುಣವು ಬೇರೆಂಬುದು ಹೊಳೆದು ಕಾಣುತ್ತಿದೆ. ನಮ್ಮವರಾದ ಮಾತ್ರದಿಂದ ಅವರ ಹೇಳಿಕೆಗೆಲ್ಲ ಸೈಗುಟ್ಟುವುದಾದರೆ, ಮುಂದಣ ನಿಮ್ಮ ತೀರ್ಪನ್ನು ಒರೆಯಲಿಕ್ಕಾದರೂ ಒರೆಗಲ್ಲು ಬೇರೆ ಬೇಡ. ಇರಲಿ, ಅರ್ಯಮನ ಮೇಲೆ ಅವರ ಆಕ್ಷೇಪವಾದರೂ ಏನು?

[ಶನಿಯೂ ಅಂಗಾರಕನೂ, ಆರ್ಯನನ್ನು ಆಕ್ಷೇಪಿಸಿ ವಿವರಿಸಿದ ನಿಂದಾ ಪತ್ರವನ್ನು, ಸದಾಗತಿ ತೇಜಸ್ವಿಗೆ ತೋರಿಸುವನು]

ತೇಜಸ್ವಿ:—(ಪತ್ರವನ್ನೋದಿ) ಆ:, ಈ ಬಿರುಗಾಳಿಯು ಹತ್ತಿಯೂ ಒಂದು ಆಕ್ಷೇಪವೆ? ಕೇಳು, ಶನಿಯೆಂದರೆ, ಪಿತೃದ್ರೋಹಿ. ಮುಂಜಾವದಲ್ಲಿ ಅವನ ಮುಖವನ್ನು ನೋಡಿದ ಮನುಷ್ಯನಿಗೆ ಆ ದಿವಸಕ್ಕೆ ಗಂಜಿಯು ತಿಳಿನೀರೂ ಸಿಕ್ಕಲಾರದು. ಯಾಕಂದರೆ ಅವನ ತಂದೆ ಏನು ಸಾಮಾನ್ಯನೆ? ಲೋಕಹಿತನಾದ ಆರ್ಯನು. 'ಹಂದಿಯೊಂದು ಡುರುಂಕೆಂದರೆ ಸಿಂಗವಂಡಲೆವುದೆ?' ಎಂಬಂತೆ, ಈ ಕಿಡುಕನು ಏನೆಂದರೂ ಆ ಮಹಾತ್ಮನಿಗೆ ಕುಂದುಂಟೆ? ಆ ಲೋಕನೇತ್ರನಾದ ತಂದೆಯು ಮಾತನ್ನು ಗಾಳಿಗೆ ಕಟ್ಟಿ, ಈ ಕಳಂಕಿಯನ್ನು ಸೇರಿದ ಪಾಪದಿಂದಲೆ 'ಸಂಸರ್ಗಜಾದೋಷಗುಣಾಭವಂತಿ' ಎಂಬಂತೆ ನೀಚನಾದನು. ಧಾರ್ಮಿಕನಾದ ನಳ ಚಕ್ರವರ್ತಿಯ ಸತ್ಯಧರ್ಮವನ್ನು ಸೈರಿಸಲಾರದೆ ಕರುಬಿ, ಅಕಟ! ಆ ದೇವತಾ ಸ್ವರೂಪದ ದಂಪತಿಗಳನ್ನು ಊರಿಂದೋಡಿಸಿದನು. ಅಷ್ಟೆ ಅಲ್ಲ; ಪ್ರಿಯ ದಂಪತಿಗಳನ್ನು ಅಗಲಿಸಿ ಮಹಾಪಾಪವನ್ನೂ ಮಾಡಿದನು. 'ಓಡಿ ಸಿಕ್ಕಬಾರದು, ಎಂಬಂತೆ ಆ ಓಟದಲ್ಲಿಯಾದರೂ ಕಡೆಮುಟ್ಟಿದನೆ? ಇಲ್ಲ; ಕಡೆಗೆ ಕಂಗಾಲಾದನೆಂಬುದು ಪ್ರತಿಯೊಬ್ಬನಿಗೂ ಗೊತ್ತುಂಟು. ಅಂಥ ಪಾಪಕರ್ಮದ ಅಭ್ಯಾಸದಿಂದ, ಕಾಲ್ಮುರಿದು, ಗತಿಯುಡುಗಿ ಮತಿಯಡಗಿದ ಕಾರಣದಿಂದಲೆ ಮಂದನಾಗಿರುವುದೂ ಈಗ ಲೌಕಿಕರಲ್ಲಿ ಕಂಡವರು ಕೇಳಿದವರು, ದುಷ್ಟನಾದವನನ್ನು "ಛಿ:, ಶನಿ" ಎಂದು ನಿಂದಿಸುವುದಾದರೂ ಮತ್ತಾವುದರಿಂದ? ಇನ್ನು, ಅಂಗಾರಕನ ಬಣ್ಣವೊಂದುಂಟು. ಅವನ ಮಾತೃಭಕ್ತಿಯನ್ನು ಬಣ್ಣಿಸಿದಷ್ಟೂ ಬಾಯಿ ಮುಚ್ಚದು. ಈ ಮಾತೃಭೂಮಿಯ ಕಷ್ಟವನ್ನು ನೋಡಿ ಊರು ಬಿಟ್ಟೋಡಿ ಹಗೆಗಳನ್ನು ಸೇರಿದ ಆ ಮಹಿಮನಷ್ಟು ಮಾತೃಭಕ್ತಿ ಮತ್ತಾರಿಗಿದೆ? ದಯಾಮಯನಾದ ಆರ್ಯನು, ಎಂದಿನಂತೆಯೆ ಆಗಲೂ ಭೂಮಿಯನ್ನು ಒಣಗಿಸಿದುದು ಯಾಕೆಂದು ಇವನಿಗೆ ಗೊತ್ತುಂಟೆ?

ನೆಲವು ಕೃಷಿಹೊಂದಿ, ಬಿತ್ತು ಮೊಳೆದು, ಗಿಡುವಾಗಿ ಬೆಳೆದು ಫಲವ ತ್ತಾಗಬೇಕಾದರೆ, ಆ ಎಚ್ಚರಿಕೆ ಅವಶ್ಯಕವು. ಬಸಿರಿಯಾದ ಸುವಾಸಿನಿ ಹೆತ್ತು ತಾನೂ ಮಗುವೂ ಪರಿಪುಷ್ಟರಾಗಬೇಕಾದರೆ, ಮೊದಲಿಂದಲೆ ಮದ್ದು ಮಾಡುತ್ತ, ಆಮೇಲೆ ಶೀತನಿವಾರಣೆಗಾಗಿ ಕಡುತರವಾದ ನಂಜಿನ ಮದ್ದುಗ

ಳನ್ನು ಸೇವಿಸಬೇಕೆಂಬುದು ಹಸುರುಹಳ್ಳಿಯ ಹಾಡಿಗೌಡರಿಗೂ ಗೊತ್ತು. ಯಾಕೆ—ಪ್ರತಿಯೊಂದು ತಿರ್ಯಗ್ಜಂತುವೂ ಹೀಗೆಯೆ ನಡೆಯುತ್ತಿದೆ. ಅಷ್ಟೆ ಅಲ್ಲ; ಹೆತ್ತ ಮಗುವನ್ನು ಎತ್ತಿ ಏಳಿಗೆಗೆ ತರುವ ಲೋಕವೃಕ್ಷದ ತಾಯಿ ಬೇರಾದ ಹೆಂಗುಸು, ಆ ಕಷ್ಟವನ್ನು ಸಂತೋಷದಿಂದ ಸೈರಿಸಿಕೊಳ್ಳುವಳು. ಅದೇನು, ಉಮ್ಮು ಬಂದೀತೆಂದು ಊಟವನ್ನೆ ಬಿಡುವುದುಂಟೆ? ಈ ಅಂಗಾರಕನೊಬ್ಬನು ಹಾರಿಹೋದನೆಂದು ಭೂದೇವಿಯಾದರೂ ಕೊರಗಿ 'ಕೋ' ಎನ್ನಲಿಲ್ಲ. ಬಾಲ್ಯದಲ್ಲಿ ಸ್ವಾತಂತ್ರ್ಯವನ್ನೀಯದೆ, ವಿದ್ಯಾಭ್ಯಾಸ ಲೋಕವ್ಯವಹಾರಜ್ಞಾನಾದಿಗಳ ಕಷ್ಟಕ್ಕೇ ಮಕ್ಕಳನ್ನು ಗುರಿಮಾಡಿ ಆ ಸ್ವಾತಂತ್ರ್ಯದ ಗುಟ್ಟನ್ನು ಕಲಿಸುವುದು ಪೋಷಕರ ಕರ್ತವ್ಯವು. ಜ್ಞಾನಾರ್ಜನೆಯಲ್ಲಿ ಮನಸ್ಸಿಲ್ಲದ ಈಗಿನ ಕೆಲವು ಕೆಟ್ಟ ಹುಡುಗರಿಗೆ ಇವೆಲ್ಲವೂ ವಿಪರೀತವಾಗಿ ತೋರುತ್ತದೆ. ಅದರಿಂದಲೆ ಮೂರಕ್ಷರವನ್ನೋದಿ ಮೂರು ಲೋಕವನ್ನೋದಿದೆವೆಂದೆಣಿಸಿ, ವಿದ್ಯಾಭ್ಯಾಸದ ಆವಾಹನೆಯನ್ನು ಉದ್ವಾಹಿಸಿ, ಹಿರಿಯರ ಬುದ್ಧಿಮಾತನ್ನು ಒದ್ದು, ಅಲ್ಲಸಲ್ಲದವರ ಬಿಳಿನಗೆಗೆ ಬಾಯಿಬಿಟ್ಟು, ಆ ಅಲ್ಪರ ರೀತಿಯೆ ನಾಗರಿಕತೆಯ ಲಕ್ಷಣವೆಂದೆಣಿಸಿ, ಅಕಟಾ! ಅನಿಷ್ಟ ಸ್ವರೂಪದ ಅಂಗಾರಕರಾಗಿ ಹೋಗುತ್ತಾರೆ. ಅಂಥವರಲ್ಲಿ ಇವನೂ ಒಬ್ಬನು. ಒಳಗೆ ಪ್ರೇಮವನ್ನೂ ಹೊರಗೆ ನಿಯಮವನ್ನೂ ತೋರದಿದ್ದರೆ, ಹುಡುಗರು ಹಾಳಾಗುವರೆಂಬುದಕ್ಕೆ ಬಹಳ ದೃಷ್ಟಾಂತಗಳಿವೆ. ಅದಿರಲಿ, ಅವನ ದುಷ್ಕಾರ್ಯಗಳಿಂದಲೆ "ಅನಿಷ್ಟಕ್ಕೆ ಅಂಗಾರಕನೆ ಗುರಿ" ಎಂಬ ಮಾತಿಗೆ ಎಡೆಯಾಯಿತು. ಒಬ್ಬೊಬ್ಬನು ಅನ್ಯಾಯವನ್ನೆ ಮಾಡಿದರೂ ಇಡಿ ಲೋಕವು ಬರಿದೆ ಅಪವಾದದ ಆರೋಪವನ್ನು ಹೊರಿಸಲಿಕ್ಕಿಲ್ಲ.

ಅದರಿಂದಲೆ "ಹತ್ತಿದ್ದಲ್ಲಿ ಮುತ್ತುಂಟು" ಎಂದು ಹೇಳುತ್ತಾರೆ. ಇನ್ನು, ಅಂಗಾರಕ ಶನಿಗಳ ಹುಡುಗಾಟದ ಬಿರುಸು, ಒತ್ತಟ್ಟಿಗಿರಲಿ. ಈ ನಕ್ಷತ್ರಪತಿಯೆಂಬ ಅರಸನಾದರೂ ಯೋಗ್ಯನಾಗುತ್ತಿದ್ದರೆ, ತಾಯ್ತಂದೆಯರೊಡನೆ ವಿಚಾರಿಸದೆ, ಈಗಿನ ಕೆಲವು ಸಂಸ್ಥೆಗಳವರಂತೆ, ಈ ಬಾಲಕರನ್ನು ತನ್ನಲ್ಲಿ ಸೇರಿಸಿಕೊಳ್ಳಬಹುದೆ? ಹೋ! ತಪ್ಪಿದೆನು! ಅವನ ಬಣ್ಣವನ್ನು ಒರೆಯುವ ಒರೆಗಲ್ಲೂ ಇಲ್ಲಿಯೆ ಇದೆ. ಒಂದೇ ಮಾತಿನಿಂದ ಹೇಳುವುದಾದರೆ, ಇಷ್ಟೆ ಸಾಕು.

ಕುಸುಮಷಟ್ಪದಿ || ತಂದೆತಾಯ್ಗಳನು ಹಳಿವರೆ ಸಭ್ಯರಸುರಗುರು |
ವೆಂದೆನುವ ಕುರುಡನೇ ಕವಿ, ನಾಸ್ತಿಕಂ ||
ಸಂದಗುರುವೆನ್ನಲಾ ಗುರುಸತಿಯ ರಮಿಸಿದೀ |
ಕುಂದಿನವನಲ್ಲದಿನ್ನಾರರಸನು || ೧ ||

ಸದಾಗತಿ:—(ಬಿರುಸಾಗಿ) ಸಾಕು, ಸಾಕು. ನಿನ್ನ ಈ ವಿಮರ್ಶೆಯನ್ನೆಲ್ಲ ಮುಂದಿನ ಸಭೆಯಲ್ಲಿ ವಿಸ್ತರಿಸಬೇಕಲ್ಲದೆ, ಈಗ ಯಾಕೆ, ಗುಡುಸಿಂದೊಳಗೆ ಸುಳಿದರೆ 'ಕೀ' ಎಂದು ಕಿವಿಯನ್ನು ಕೀಲಿಸುವೆ? ಇನ್ನಾದರೂ ಹೇಳುತ್ತೇನೆ; ಕೇಳು. 'ಗತಿಗೇಣುದ್ದ, ಮತಿಮಾರುದ್ದ' ಎಂಬಂತೆ ಹಾರಾಡಿ, ಬರಿದೆ ಅಪಹಾಸ್ಯಕ್ಕೆ ಎಡೆಯಾಗಬೇಡ. 'ನಮ್ಮದು ಮಣಿ, ಅವರದು ಮಸಿ'ಯಾಗಬೇಕೆಂದು ಹಠಹಿಡಿದರೆ ಹೇಗಾಗುವುದೆಂದು, ಸಮಾಧಾನಚಿತ್ತದಿಂದ ನಿನ್ನಲ್ಲೆ ಒಮ್ಮೆ ಯೋಚಿಸಿ ನೋಡು. ಈಗ ಹೇಗಾದರೂ ಸುಧಾರಿಸಿ, ಹೆಚ್ಚಿನ ಚರ್ಚೆಯನ್ನು ಮತ್ತೆ ನೋಡೋಣ.

ತೇಜಸ್ವಿ:—(ಕೋಪಿಸಿ) ಸರಿ ಸರಿ; ಎಲ್ಲವನ್ನೂ ಮೊದಲೆ ನೋಡಿದ್ದೇನೆ. ನಿನ್ನ ಈಗಿನ ಈ ಬೋಧನೆಯ ಬೋನಕ್ಕೆ ಬಾಯ್ದೆರೆವನಲ್ಲ. ಭಗವಂತನಾದ ಆರ್ಯನು ಅಂದು ಕಟ್ಟಿಕೊಟ್ಟ ಬುತ್ತಿ, ಇಂದಿಗೂ ಅಕ್ಷಯವಾಗಿಯೆ ಇದೆ. ಈ ವಿಮರ್ಶೆಯನ್ನೆಲ್ಲ, ಸಂಧಿಯ ಸಭೆಯಮುಂದೆ ಇಡಬೇಕೆಂದು ಸೂತ್ರಾತ್ಮಕವಾದ ಉತ್ತರವನ್ನು ಕೊಡುವ ಶಾಸ್ತ್ರಜ್ಞರಾದ ನೀವು, ಆ ನೀಚರು ಆರ್ಯನ ಮೇಲೆ ಮಾಡಿದ ಮಿಥ್ಯಾರೋಪಗಳಿಗೆ ಹೇಗೆ ಕಿವಿಗೊಟ್ಟಿರಿ? ದಾರಿಗನ ಹೆಗಲಿಗೆ ಹಿಂದಿನಿಂದ ಹೊರಿಸಿದ ಹೊರೆಯನ್ನು, ಮುಳ್ಳನ್ನು ಮುಳ್ಳಿಂದಲೆ ಕೀಳುವಂತೆ, ಹಿಂದಕ್ಕೆ ನೂಕಿ ಅಲಕ್ಷಿಸುವುದೆ ಧರ್ಮವು. ಶಾಸ್ತ್ರವನ್ನು ಓದುತ್ತ ಗಾಳವನ್ನು ಹಾಕುವುದಕ್ಕೆ ಲೋಕವು ಒಪ್ಪಿದರಲ್ಲವೆ, ನಿಮ್ಮ ಸಂಧಾನದ ಸಭೆ? 'ಸತಿ ಕುಡ್ಯೇ ಚಿತ್ರಂ' ಎಂಬ ಮಾತು ಪ್ರಸಿದ್ಧವಿರುವಾಗ, ಗೋಡೆಯಿಲ್ಲದೆ ಬರಿದೆ ಆಕಾಶದಲ್ಲಿ ಚಿತ್ರಬರೆಯಲಿಕ್ಕೆ ಕೈನೀಡುವ ನಿಮ್ಮ ಮೂಢತೆಯನ್ನು ಕಂಡೇ, ಈಗಲೆ ಉತ್ತರಗೊಟ್ಟಿದ್ದೇನೆ. ಈ ಕತ್ತಲೆ ಬತ್ತಲೆಗುಣಿವ ಅಸಂಧಿಯ ಸಭೆಯನ್ನು, ಒಂದು ವೇಳೆ ನೀವು ಜರಗಿಸಿದರೂ, ಈ ಲೋಕವು ಕಣ್ದೆರೆದು ನೋಡುವಂತಿಲ್ಲ. ಆ ಹಗೆಗಳ ಮಡಿಲಲ್ಲೆ ಆ ಅಂಗಾರಕನು ಬೀಳಲಿ; ಅವರನ್ನೆ, ಶನಿ ಹಿಡಿಯಲಿ.

ಸದಾಗತಿ:—ಹುಂ, 'ಕೆಡುವ ಕಾಲಕ್ಕೆ ಬದ್ಧಿ ಇಲ್ಲ, ಮರಣ ಕಾಲಕ್ಕೆ ಮದ್ದಿಲ್ಲ', ಮಾಡುವುದೇನು? (ಲೋಕವನ್ನು ಉದ್ದೇಶಿಸಿ) ಲೋಕವೆ, ಇಂಥ ತಲೆದಿರುಕರಿಗೆ ಎಷ್ಟು ಹೇಳಿದರೂ ಅಷ್ಟೆ. ಸ್ವಾರ್ಥದಿಂದ ಯಾರು ಹೇಗೆ ನಡೆದರೂ 'ಗೋಡೆ ಬಿದ್ದರೆ ಜಗಲಿಯ ಮೇಲೆ' ಎಂಬ ಹಾಗೆ, ಕಷ್ಟವು ನಿನ್ನ ತಲೆಗೇ ಕಟ್ಟಿದ ಹೊರೆ. ಅದರಿಂದ, ಸಾರಾಸಾರವಿವೇಚನೆಮಾಡಿ, ನಮ್ಮ ಜಲಧರನ ಈಗಿನ ಉದ್ದೇಶಕ್ಕೆ ಸಮ್ಮತಿಗೊಡುವುದು ತಕ್ಕುದಾಗಿದೆ. ಇದು, ಲೋಕಾಭಿವೃದ್ಧಿಯ ಅಡಿಗಟ್ಟೆಂದು, ಮತ್ತೂ ಮತ್ತೂ ಒತ್ತಿ ಹೇಳುತ್ತೇನೆ. ತೆರೆ ನಿಂತ ಮೇಲೆ ಹಾರಿದರೆ ಮರಳನ್ನು ಮುಕ್ಕುವುದೇ ಫಲವು.

ಲೋಕ:—ನಿನ್ನ ಮಾತಿಗೆ ನಮ್ಮದೂ ಒಪ್ಪಿಗೆಯಿರುತ್ತಿತ್ತು. ಆದರೆ, ಆರ್ಯನ ಹಿತಸೂಚನೆಯನ್ನು ಅಲ್ಲೆ ಮರೆತು, ನಮ್ಮ ಮೋರೆಗೆ ಮಸಿ ಹಚ್ಚುವುದು ನಮಗೆ ಸಮ್ಮತವಲ್ಲ. ಆ ನಕ್ಷತ್ರಪತಿಯೆ ಬಯಲಿಗೆ ಬಂದನೆಂದರೆ, ಅವನೆದುರಲ್ಲಿ ಈ ಕತ್ತಲೆ ಇರಬಾರದಂತೆ. ಎಂದ ಮೇಲೆ, ಅವನಿಗೇ ಅವಲಕ್ಷಣವಾದ ಈ ಪ್ರೇತಸ್ವರೂಪವನ್ನು, ನಮ್ಮ ಮೇಲೆ ಆರೋಪಿಸುವುದೇಕೆ? ಅವನು ರಾಜಮರ್ಯಾದೆಯನ್ನು, ನಮ್ಮಿಂದ ಕೈಗೊಳ್ಳಬೇಕಾದರೆ 'ಯಥಾ ರಾಜಾ ತಥಾಪ್ರಜಾಃ' ಎಂಬ ನೀತಿಯನ್ನು ಮರೆಯಬಾರದು. ಜಲಧರನು, ಕತ್ತಲೆಯ ಪೋಷಕನು; ನಿನಗೆ ಅದರ ಕೋಲುಬೇಲಿಯೆ ಇಲ್ಲ. ಆದರಿಂದ, ನೀವು ಈ ಸಂಧಾನದ ಮುಂದಾಳುತನವನ್ನು ಸ್ವೀಕರಿಸಿದರೂ, ನಾವು ಹುಂ ಗೂಡಿಸಲಾರೆವು. ಒಂದು ವೇಳೆಗೆ, ನಮ್ಮನ್ನು ಅಲ್ಲಗಳೆದು, ಕತ್ತಲೆಯನ್ನು ಮುಂದೆ ಮಾಡಿ ನೀವು ನಿಮ್ಮಷ್ಟಕ್ಕೆ ಸಭೆಗೂಡಿಸಿದರೂ, ಅದರಿಂದ ಒಳ್ಳೆಯ ಪಾಠವನ್ನೆ ಕಲಿಯುವೆವು. ನಾವೆಲ್ಲರೂ ಎಣಿಕೆಯನ್ನು ಬಿಗಿ ಹಿಡಿದು, ಮೈಮರೆತು ಕೆಲಸಮಾಡಿ ನಿದ್ರಾರೂಪದ ಸಮಾಧಿಯಿಂದಲೆ ಆರ್ಯ ಸಾಕ್ಷಾತ್ಕಾರವನ್ನು ಪಡೆಯುವೆವು.

ಸದಾಗತಿ:—ನೀವು ಆಶ್ರಯಾಶನಾದ ಈ ತೇಜಸ್ವಿಯ ಮಾತಿಗೆ ಮರುಳಾಗಿದ್ದೀರಿ. ಜಲಧರನೂ ನಾನೂ, ನಿಮ್ಮ ಜೀವನ ಪ್ರಾಣಾಧಾರರೆಂಬುದನ್ನು ಮರೆತು ಕೆಡುತ್ತೀರಿ. ಆರ್ಯನಾದರೂ, ತೇಜಸ್ವಿಯ ಮೇಲಧಿಕಾರಿಗಳನ್ನಾಗಿ, ನಮ್ಮನ್ನು ನಿಯಮಿಸಿದುದನ್ನು ಗಣಿಸಿರುವುದರಿಂದ, ಆರ್ಯಮತಕ್ಕಾದರೂ ನೀವು ವಿರೋಧಿಗಳೆ ಆಯಿತಲ್ಲವೆ? ಕಾಲಾನುಸಾರಿಯಾದ ಆರ್ಯನ ಮತವಾದರೂ,

ಈಗಿನ ಕಾಲಕ್ಕೆ ತಕ್ಕಂತೆ ಸುಧಾರಿಸಬೇಕೆಂಬುದಾಗಿ ಇದ್ದಿರಲಿಲ್ಲವೆ? ಅದಕ್ಕಾಗಿ ತೇಜಸ್ವಿಯ ಅವಿಚಾರಿತ ಭುರಭುರಾವಣೆಯ ಭುಸ್ಸಿನ ಬೆಂಕಿಯ ಬೂದಿಯನ್ನು ಅರಿತೆ ನಮ್ಮನ್ನು ಅಧಿಕಾರಿಗಳನ್ನಾಗಿ ಆರಿಸಿದುದು.

ಲೋಕ:—ಓಹೊ, ನೀವೂ ಮೇಲಧಿಕಾರಿಗಳೊ? ಈಗಲೆ ಸ್ವಷ್ಟವಾಯಿತು. ಹಾಗಾದರೆ, ಅಂಗಾರಕಾದಿಗಳಂತೆ, ಅಧಿಕಾರಿ (ಬಹುವಿರೋಧಿ) ಯಾದ ನಕ್ಷತ್ರಪತಿಯನ್ನು ಹಿಂಬಾಲಿಸುವವರೆ ಆಯಿತು. ಕೇಳು; ಆರ್ಯನ ಆ ನುಡಿಗಟ್ಟಿನ ಮಟ್ಟು, ನಿನ್ನೊಬ್ಬನ ಒಂದು ಮನಸ್ಸಿಗೆ ಮುಟ್ಟದೆ ಮರೆತು ಹೋದರೂ, ನಮ್ಮ ಕೋಟ್ಯಂತರದ ಮನಸ್ಸಿಗೆ ಗಟ್ಟಿಯಾಗಿ ಅಂಟಿಕೊಂಡೇ ಇದೆ. ನಮ್ಮ ಈ ಲೋಕದ ಎಣಿಕೆಗೆ ಅಡ್ಡಬಂದರೆ ಮಾತ್ರವೆ, ತೇಜಸ್ವಿ ಯನ್ನು ಆತಂಕಿಸುವ ಹಕ್ಕು ನಿಮಗೆ ಇರಬೇಕೆಂದು, ಆರ್ಯನ ಕಟ್ಟು. ನಮ್ಮ ಮತವೆ ತೇಜಸ್ವಿಯ ಮಾತಿನಲ್ಲಿ ಅಚ್ಚಾಗಿರುವಾಗ, ನಿನ್ನ ಈ ಹೊಣೆ ಗಾರಿಕೆಯ ಮಾತಿಗೆ ಬಣ್ಣವೆಲ್ಲಿಂದ? ನೀವು ನಮ್ಮ ಜೀವನಪ್ರಾಣಾಧಾರ ರೆಂಬುದು ಸರಿಯಾದರೂ, ನಿಮ್ಮ ಸ್ವಾಭಿಮಾನ ಧರ್ಮಹೀನತೆಗಳಿಂದಾಗಿ, ಆ ಅನುಕೂಲತೆಗಳನ್ನು ತೃಣವನ್ನಾಗಿ ಭಾವಿಸುತ್ತೇವೆ.

ತೇಜಸ್ವಿ:—ಲೌಕಿಕರೆ, ಈ ಗಾಳಿಯ ಗಂಟು, ಇನ್ನಾದರೂ, ಸಡಿಲಿಹೋಗ ಬಾರದೆಂದು ಇನ್ನೊಮ್ಮೆ ಎಚ್ಚರಿಸಿರಿ. ಯಾವಾಗಲೂ, ಸ್ವಾರ್ಥಿಗಳಾದ ಅಹಂಮನ್ಯರಿಗೆ ಧರ್ಮದ ದಾರಿಯ ಗೊತ್ತು ಕಡಮೆ. ಅದರಿಂದ, ಚರ್ವಿತ ಚರ್ವಣದಿಂದ ಹದಮಾಡಿ ನಯವಾದ ನಮ್ಮ ಎಣಿಕೆಯ ತುತ್ತು, ಇವನ ಬಾಯಲ್ಲಿದ್ದರೆ, ಸುಲಭವಾಗಿ ಗಂಟಲಿಗಿಳಿದು ಇವನ ಈ ರೋಗವನ್ನು ವಾಸಿಮಾಡಬಹುದು. ಈ ಸ್ವಾರ್ಥಿಯ ಹೇಳಿಕೆಯಂತೆ, ಆಶ್ರಯದಾತರಾದ ನಿಮ್ಮ ಏಳಿಗೆಯಲ್ಲಿ ಆಶೆಯಿರುವುದರಿಂದಲೆ ಹೇಳಿಕೊಂಡಿರುವೆ.

ಸದಾಗತಿ:—ಎಲೆ ತೇಜಸ್ವಿ, ಈ ನಿನ್ನ ಈ ಪರಿ, ನಮ್ಮ ಸ್ನೇಹದ ಸೇತುವನ್ನು ಎಂದೆಂದಿಗೂ ಮುರಿದಿಡುವಂತಿದೆ. ನನ್ನ ನಿನ್ನ ಅಭಿಪ್ರಾಯಗಳೆಂಬ ಬಂಧು ಗಳು, ಅನ್ಯೋನ್ಯರ ಕಿವಿಬಾಗಿಲನ್ನು ಒಳಹೊಕ್ಕು, ಮನಸ್ಸಿನ ಮನೆಯಲ್ಲಿ ಸಮ್ಮಾನವನ್ನುಂಡು ಬಳೆದು ಬಾಳುವ ಏಳಿಗೆಯನ್ನು ಕಳೆದುಕೊಳ್ಳುವಂತಿವೆ. ಹೆಚ್ಚೇನು? ಮೂರು ಮೂರು ಬಾರಿಗೂ ಸಾರಿಹೇಳುತ್ತೇನೆ. ಇಂಥ ಅಹಂಕಾ ರವು ಸಲ್ಲದು. ದಾರಿಗಿಂತ ಅಗಲವಾದ ತೇರು ಮುಂದುವರಿಯದು.

ಲೋಕ:—ಸದಾಗತಿಯೆ, ನೀನಿನ್ನು ಆಗಾಗ ಕಿರಿಕಿರಿ ಗುಟ್ಟಿ, ನಮ್ಮ ದೊರೆಯಾದ ತೇಜಸ್ವಿಗೆ ಉಪದ್ರವಮಾಡಬೇಡ. ನಿನ್ನ ಸ್ನೇಹದಸಂಕ ಮುರಿದಲ್ಲಿ ಸ್ನಾನಮಾಡಿ ನಾವು ಶುದ್ಧರಾಗುವೆವು. ನಿನ್ನ ಮಾತು 'ಅದೇಹತ್ತಿ' ಅದೆ ನೂಲು, ಆದರೆ, ನಮ್ಮದೂ 'ಅದೆ ಬಟ್ಟೆ, ಅದೆ ಬಣ್ಣ'ವು.

ಈ ಮಾತನ್ನು ಕೇಳಿದೊಡನೆಯೆ ಸದಾಗತಿಯ ಗತಿ ಬಿರುಸಾಯಿತು. ಗಡಿಯಾರದ ಮುಳ್ಳನ್ನು ಮುರಿದರೆ ಗತಿನಿಲ್ಲುವುದೆಂದು ನಿಶ್ಚೈಸಿ, ಲೋಕದ ಹಾರಾಟದ ಚಾಲಕನಾದ ತೇಜಸ್ವಿಯಲ್ಲೆ, ಅವನ ಕೋಪವೇರಿತು. ಆ ತೇಜಸ್ವಿಯ ತಲೆಗೆ ಒಂದೇಟುಗೊಟ್ಟನು. ಬಾಯಿಯಲ್ಲಿ ಸಾಗದಿದ್ದರೆ, ಕೈಮೀರುವುದು ದುಷ್ಟರ ಹುಟ್ಟುಗುಣವು. ಎಷ್ಟು ಓದಿದರೂ ಲೋಕವ್ಯವಹಾರವನ್ನು ಅರಿತರೂ, ಸ್ವಭಾವವು ಮರೆಯಾಗಲಾರದೆಂದು ಬೇರೆ ಹೇಳಬೇಕೆ? ಪ್ರಾಣಪ್ರಿಯರಾದರೂ ಕೆಲವರು, ತಮ್ಮ ಕೈ ನಡೆಯದಿದ್ದಾಗ, ಆ ಕೆಳೆಯರ ಪ್ರಾಣವನ್ನೆ ತೆಗೆದುಬಿಡುತ್ತಾರೆಂಬುದಕ್ಕೆ ಇದೂ ಒಂದು ದೃಷ್ಟಾಂತವೆ. ಅಬಲನಾದ ತೇಜಸ್ವಿ, ಅಭಿಮಾನರಕ್ಷಣಕ್ಕಾಗಿ ಮೈಬಿಟ್ಟನು. 'ನಿಮ್ಮ ದೊರೆಯ ದೊರೆತನವೇನಾಯಿತು? ವಿನಾಶಕಾಲೆ ವಿಪರೀತ ಬುದ್ಧಿ' ಎಂಬುದು ಬರಿದಾಗುವುದೆ? ಎಂದು ಅತ್ತ ಮೇಲೆ ಹಾರಿದನು. ಇತ್ತ ತೇಜಸ್ವಿಯ ಶೋಚನೀಯಾವಸ್ಥೆಗೆ ಹೊಗೆಯಂತೆ ನಿಟ್ಟುಸಿರೆದ್ದಿತು. ಹಕ್ಕಿನ ಬೆಳಕು ಬತ್ತಿಹೋಯಿತು. ಕತ್ತಲೆಯ ಮೊತ್ತದ ಕಾಲಾಟವನ್ನು ಬೇಕುಬೇಡೆಂಬರಿಲ್ಲ. ಆರ್ಯಧ್ಯಾನಾವಿಷ್ಟವಾದ ಲೋಕವು, ಪ್ರತಿಜ್ಞೆಮಾಡಿದಂತೆ, ನಿದ್ರಾಸಮಾಧಿಯನ್ನು ಅವಲಂಬಿಸಿತು. ಎಲ್ಲೆಲ್ಲಿಯೂ ನಿಶ್ಶಬ್ದ. ಅದು ಎಷ್ಟರಮಟ್ಟಿಗೆಂದರೆ, ಒಂದು ಹುಲ್ಲಾಡಿದರೆ ಸಾಕು; ನೆಟ್ಟಗೆ ಕಿವಿಗೆ ಕೇಳಿಸುವಂತಿತ್ತು. ಈ ಸುದ್ದಿಯನ್ನು ಸದಾಗತಿ ಜಲಧರನಿಗೆ, ಒಂದುಳಿಯದಂತೆ ಹೇಳಿದನು. ಅವನು ಮಿತಿಮೀರಿದ ಸಿಟ್ಟೇರಿ, ಕುಡಿಮಿಂಚಿನ ಕಡೆಗಣ್ಣಿಂದ ನೋಡಿದನು. ಲೋಕದಲ್ಲಿ ಎತ್ತಲೂ ಸಮಾಧಿ, ಶಾಂತ. ಆ ಶಾಂತವು, ಜ್ವರಬಂದವನಿಗೆ ತಣ್ಣೀರೆರೆದಂತೆ, ಜಲಧರನ ಕೋಪವನ್ನೆ ಹುರಿದುಂಬಿಸಿತು. ಈ ಲೋಕವನ್ನು ಕಷ್ಟಸಾಗರದಲ್ಲಿ ಮುಳುಗಿಸಿಬಿಡಬೇಕೆಂದು, ಗುಡುಗುಡಿಸಿ ಗರ್ಜಿಸಿ, ನಿಮಿಷದಲ್ಲೆ ಶರವರ್ಷವನ್ನು ಪ್ರಯೋಗಿಸತೊಡಗಿದನು. ಲೋಕವು, ಮೊದಲೆ, ಮನೆಮಾಡಗಳೂ ಬಾಗಿಲುಮುಚ್ಚುಗಳೂ ಎಂಬ ಅಡ್ಡಣಗಳನ್ನು ಏರ್ಪಡಿಸಿದ್ದರಿಂದ ಅವುಗಳಿಗೆ ನಾಟಿ, ಶರವರ್ಷಗಳು ಚೂರು ಚೂರಾದುವು. ಆದರೂ, ಸೀರು

ಹನಿಗಳ ಈಟಿಗಳು ಮಾಡಸಂದುಗಳಲ್ಲಿಯೂ, ಗಿಳಿಬಾಗಿಲುಗಳ ಎಡೆಗಳಲ್ಲಿಯೂ ನುಸುಳಿ, ಸಮಾಧಿಭಂಗಕ್ಕೆ ಪ್ರಯತ್ನಿಸಹತ್ತಿದುವು. ಅವರಿಂದೇನು? ಮೂಗಿನಲ್ಲಿ ಉಂಡರೆ ಹೊಟ್ಟೆ ತುಂಬುವುದೆ? ಆ ಒತ್ತಾಯವು, ಕುಂಭಕರ್ಣನಿಗೆ ಇರುವೆ ಚುಚ್ಚಿದಂತೆ, ಲವಲೇಶವಾದರೂ ಫಲಕಾರಿಯಾಗಲಿಲ್ಲ. ಹೊರಗೆ ಅಂತೂ, ಜಲಧರನ ವಾಹಿನಿಯು ಕೋಲಾಹಲಕ್ಕೆ ತೆರವೇ ಇದ್ದಿಲ್ಲ. ಗೆರಸೆ ಬಡಿದು ಇಲಿಯನ್ನು ಅಟ್ಟುವ ಆಯೆಣಿಕೆಯಾದರೂ, ಈ ಮಹತ್ಕಾರ್ಯದಲ್ಲಿ ಗುರಿಮುಟ್ಟುವುದು ಹೇಗೆ?

ಕಂದ ॥ ವನಮಧ್ಯದಲಿ ಸಮಾಧಿಯೊ ।
ಳೆಸೆಗೊಂಡಿಹಮುನಿಯ ನಗಲಿಸುವಖಳಜನವು ॥
ದಣಿವುತಘೋಗತಿ ಗಿಳಿವೊಲು ।
ವನವಾಹಿನಿ ಕೀಳುನೆಲೆಗೆ ಹರಿಯುತ್ತಿತ್ತು ॥ ೧ ॥

ಲೋಕದ ಸಮಾಧಿಗೆ ಒಂದಿಷ್ಟೂ ಭಂಗವಾಗಲಿಲ್ಲ. ದೃಢನಿಶ್ಚಯದ ಕೋಟೆಯನ್ನು ಒಡೆಯಲಿಕ್ಕೆ ಯಾವ ಗುಂಡುಗಳಿಗೂ ಸಾಧ್ಯವೆ? 'ಅಹಂಕಾರಕ್ಕೆ ಔದಾಸೀನ್ಯವೆ ಮದ್ದು' ಎಂಬಂತೆ, ಲೋಕದ ಅಲಕ್ಷತೆಯಿಂದಾಗಿ, ಸ್ವಲ್ಪ ಕಾಲದಲ್ಲೆ ಜಲಧರನು ಜೀವನರಹಿತನಾಗುವ ಕಾಲಬಂತು. ನಕ್ಷತ್ರಪತಿಯೂ, ನಿರ್ಧನರನ್ನು ಬಿಟ್ಟುಬಿಡುವ ಆಶ್ರಿತನಂತೆ, ಜಲಧರನನ್ನು ಮೆಲ್ಲನೆ ತೊರೆಯತೊಡಗಿದನು. ಎಲೈ, ಜಗತ್ತೆ, ತಿಳಿವಿನ ಕಣ್ಣನ್ನು ತೆರೆದು, ಒಮ್ಮೆ ಈ ಚಿತ್ರವನ್ನು ನೋಡು.

ಭಾಮಿನಿ ॥ ಜೀವನವು ತುಂಬಿರಲು ಮೋರೆಯೊ । ಳಾವರಿಸಿತ್ಕೆ ಕಪ್ಪು ನಕ್ಷ
ತ್ರಾವಳಿಯಪತಿಗೆಡೆಗೊಡುತ ತನ್ನಡಿಯ ಲೋಕಕ್ಕೆ ॥
ನೋವನೊದಗಿಸಿ ಕಣ್ಣುಕತ್ತಲೆ । ತೀವಿಸಿದ ಮೋಡಕ್ಕೆ ಪಾಪದಿ
ಜೀವನವು ಕಡೆಯಾಗಲಾಶ್ರಿತರೇ, ನಗುವರದಕೊ ॥ ೧ ॥

ಕಷ್ಟಬಂದಿರೆ ಬಗ್ಗಿಬೀಳದೆ । ಇಷ್ಟಚಿಹ್ನೆಗೆ ಹಿಗ್ಗಿಹೆಚ್ಚದೆ
ನೆಟ್ಟ ತನ್ನ ಸಮಾಧಿಯನ್ನಾರ್ಯೋದಯಕೆ ಮುನ್ನ ॥
ಬಿಟ್ಟು ಬಿಡೆನೆನ್ನುತ್ತ ಲೋಕವು । ಕಟ್ಟು ಮಾಡಿದೆ, ನೋಡಿ ಸ್ವಜನರ
ಮೆಟ್ಟಿದಿರ್ರಿ, (ಮರಕೇರಿ ಬುಡವನು ಕಡಿಯಲೆಣಿಸದಿರಿ) ॥ ೨ ॥

'ಸರ್ವೇಜನಾಸ್ಸುಖಿನೋಭವಂತು' ॥
ತನ್ನ ಮನೆ ತನ್ನವರು ನೆರೆಯವ । ರಿನ್ನು ಹುಟ್ಟಿದ ಮಾತೃದೇಶವು
ಎನ್ನುತಲಿ ಅಭಿಮಾನದಡಿಗಟ್ಟಿಂದ ಮೇಲೇರಿ ॥
ತನ್ನ ಬೆಳಕನು ಬೀರಬೇಹುದು । ಮುನ್ನವೇ ನೆಲದಿಂದ ಬಾನಿಗೆ
ಸನ್ನೆಗೈದರೆ ಸಾಗದೆಂಬುದನರಿತು ಕೈಗೊಡಿರಿ ॥ ೩ ॥

ಅ:, ನಕ್ಷತ್ರಪತಿಯೆ, ನಿನ್ನ ಭೇದೋಪಾಯವು, ಸದ್ಯಕ್ಕೆ ಸಫಲವಾಯಿತು. ಏಡಿಯು ಕಾಲನ್ನು ಏಡಿಗೆ ಕುತ್ತುನ ಅಂಬಿಗನಂತೆ, ಹಿಂದೆ ನಿಂತು ಒಡನಾಡಿಗಳನ್ನೆ ಹೊಡೆದಾಡಿಸಿ ಕೃತಾರ್ಥನಾದೆ. ಜಲಧರಪ್ರೇರಿತನಾದ ಸದಾಗತಿಯು ಪೆಟ್ಟಿಗೆ, ತೇಜಸ್ವಿ ಬಲಿಬಿದ್ದನು. ಜಲಧರನೂ, ಶಪಿಸಿದ ಮುನಿ, ಪುಣ್ಯವನ್ನು ಕಳಕೊಳ್ಳುವಂತೆ, ಟೊಳ್ಳಾದನು. ಓಡುವವನಿಗೂ ಅಟ್ಟುವವನಿಗೂ ದಣಿವು ಒಂದೆಯಲ್ಲವೆ? ಸದಾಗತಿ ಒಬ್ಬನು ಕಲ್ಲಿಲ್ಲದ ಗುಳಿಗನಂತೆ, ಅತ್ತಿತ್ತ ಅಲೆಯುತ್ತಿದ್ದಾನೆ. ಅಹೋ, ನಿನ್ನ ಕಲಿಕೆಗೆ ಕಣ್ಣಿಲ್ಲ. ಮೇಲು ಹಂತಿಯ ಉದ್ದೇಶವು, ತನ್ನಂತೆಯೆ ಕೀಳುಹಂತಿ ಬರೆಯೋಣಾಗಬೇಕೆಂಬುದು ಸರಿ. ಆದರೆ, ಇನ್ನು ನಿನ್ನ ಈ ರೀತಿಯ ಕೌಳಿಕಕ್ಕೆ, ಕಣ್ಣಾರೆ ಕಂಡುದರಿಂದ, ಯಾರೂ ಮರುಳಾಗಲಿಕ್ಕಿಲ್ಲವೆಂಬುದು ನಿಶ್ಚಯವು. ಹೊಂಡವೆಂದು ತಿಳಿದೂ, ಆನೆ ಕಾಲಿಡುವುದೆ? ಅದಿರಲಿ, ಮುಗುಳ್ನಗೆಯ ಬಾಯ ಬಿನ್ನಣಕ್ಕೆ ಮರುಳಾಗಿ, ಪರರನ್ನು ನಂಬಿದರೆ, ಜಲಧರನಂತೆ, ಆತ್ಮನಾಶವೆ ಫಲವಾಗುವುದು. ಅದರಿಂದ, ಪರೀಕ್ಷಿಸಿಯೆ, ಪ್ರತಿಯೊಬ್ಬನಲ್ಲಿಯೂ ನಂಬಿಕೆ ಇಡಬೇಕು. ಹೇಗೆಂದರೆ:—

ಚೌಪದಿ ॥ ನೋಡುತ್ತಲೊರೆದು ಹೆಟ್ಟುತ ಕರಗಿಸುತ್ತ ।
ಕೂಡೆ ಚಿನ್ನವ ಪರೀಕ್ಷಿಸಿ ಕೆಲಸಗೆಯ್ವ ॥
ಪಾಡಿಂದ ಕುಲಶೀಲ ನುಡಿನಡತೆಗಳನು ।
ನೋಡಿ ಜನರನ್ನು ನಂಬುವುದು ತಿಳಿದವನು ॥ ೧ ॥

ನಂಬಿಕೆಯೆನಲ್ಕೆ ಸಾಮಾನ್ಯವೆನಬೇಡ ।
ನಂಬಿದವನಲ್ಲಿ ಸಂದೇಹವಿಹುದಿಲ್ಲ ॥
ನಂಬಿ ದೋಣಿಯನೇರೆ ಗಾಳಿಯಿಂ ಮಗುಚೆ ।
ನಂಬಿದವನನು ಮುಳುಗಿಸಿದ ದೋಣಿಯಾಚೆ ॥ ೨ ॥

ನಂಬಿಕೆಯ ಮೊಗ ಹೊನ್ನುರನ್ನಗಳಕಟ್ಟೆ ।
ನಂಬಿಕೆಯ ಬೆನ್ನು ಬಿಂಗದ ಬೆಲೆಯ (ಜಗಲಿ) ತಟ್ಟೆ ॥
ನಂಬಿಕೆಯ ದಾರಿಗಂಬಕ್ಕೆರಡು ಕೈಗಳ್ ।
ನಂಬಿನಡೆಯಲ್ಕವುಗಳಕ್ಷರವನೋದಿ ॥ ೩ ॥

ಇದನ್ನು ಮನಗಾಣದೆ, ಕೊಂಬಿನ ಹೆಮ್ಮೆಯಿಂದ ಹಾಯ್ದರೆ ಹದಗೆಟ್ಟು ಹೋಗುವುದು—

ಕಂದ ॥ ತಲೆಯೊಳು ಮುಕುಟದ ಕೊಂಬಿ ।
ನ್ನೊಲಿದಾಡುಗಳೊಂದಕೊರದು ಹಾಯಲು ಕೊಂಬೂ ॥
ತಲೆಯೂ ಫಳ್ಳೆಂದೊಡೆಯಲು ।
ಬಳಲಿಕೆಯಾರ್ಗೆಂಬುದರಿವುದಿಳೆಯಲ್ಲಿಲ್ಲ ॥

ತೃತೀಯಾಂಕ.

ಕತ್ತಲೆ:—(ಪ್ರವೇಶಿಸಿ) ಆಃ, 'ಯಾವ ರಾಯನಿಗೆ ರಾಜ್ಯ ಹೋದರೂ, ನನಗೆ ರಾಗಿ ಬೀಸುವುದು ತಪ್ಪುವುದಿಲ್ಲ' ಎಂಬಂತೆ ನನಗೆ ಇನ್ನೂ ಈ ಗತಿ! ಆರ್ಯನ ಮೈತ್ರ ಅಳಿಯಿತು. ಹಗೆಗಳಲ್ಲಿಯು ಇತ್ತಂಡಕಕ್ಕೂ ಹೊಯ್ಕೈಯಾಗಿ, ಎರಡೂ ನಾಮಾವಶೇಷವಾದಂತೆಯೆ ಆಯಿತು. ಆದರೇನು? ನಮ್ಮವನೆಂದು, ಈ ನಕ್ಷತ್ರ ಪತಿಯನ್ನು ಬಯಸುತ್ತಿದ್ದರೆ, ಎಲ್ಲವೂ ಕನ್ನಡಿಯ ಗಂಟೆ ಸರಿ. ಈಗಿನ ಕಾಲದಲ್ಲಿ ನಮ್ಮವನೆಂದು ಹೊತ್ತರೆ ಹೊರೆಯೆ ಫಲವು. ಅದರಿಂದ, ಇಕ್ಕಡೆಯೂ ಹೊಡೆದಾಡಿಕೊಂಡಿದ್ದರೇ ನನ್ನಂಥವರಿಗೆ ಕೈ. 'ಇಬ್ಬರ ನ್ಯಾಯ, ಮೂರನೆಯವನ ಆಯ' ಎಂಬ ಸೂತ್ರವನ್ನೆ ಇಲ್ಲಿ ಸುರಿಯ ಬೇಕು. ಆದರೆ, ಇನ್ನಾದರೂ, ಎಡೆಯರಿತೆ ಸುರಿಯತಕ್ಕದ್ದು. ಹೀಗೆ ಯೋಚಿಸುತ್ತ ಕತ್ತಲೆ ಹೊರಟಿತು. ಎಲ್ಲೆಲ್ಲಿಯೂ ಬೆಳಕಿನ ಸಂಚಿಕೆಯ ಮಿಂಚೂ ಇಲ್ಲ. ಲೋಕವಂತೂ, ಮೂರು ಮುಕ್ಕಾಲು ಪಾಲು ಇಹಲೋಕದ ವ್ಯಾಪಾರವನ್ನು ಮರೆತು ಬಿಟ್ಟಿದೆ. ಅದರಿಂದ ಎತ್ತೆತ್ತಲೂ ಶಾಂತತೆಯೆ ತಾನು ತಾನಾಗಿದ್ದು, ಒಂದು ಕಡ್ಡಿ 'ಮಿಟ್ಟೆ'ಂದು ಮುರಿದರೂ ಕಿವಿಗೆ ಕೇಳಿಸುವಂತಿತ್ತು. ಆದರೆ, ನೀಚನಾದ ಸದಾಗತಿಯನ್ನು ನಿಶ್ವಾಸಮೂಲಕವಾಗಿ, ಲೋಕವು ಹೊರದೂಡುತ್ತಿದ್ದುದರಿಂದ, ಆ ಗಾಳಿಯ ಬಸಬಸಾವಣೆ ಮಾತ್ರ ಆ ಶಾಂತತೆಗೆ ಅಷ್ಟಿಷ್ಟು ಭಂಗ ಮಾಡುತ್ತಿತ್ತು. ಹೊರಹೊರಗೆ, ಹಾದಿಬೀದಿಗಳಲ್ಲಿ ಮಾಡಮ್ಮೈದಾನುಗಳಲ್ಲಿ, ನಕ್ಷತ್ರಪತಿಯ ಕೈಯಾಟ, ಒಳಗೊಳಗೆ, ಓಣಿಕೋಣೆಗಳಲ್ಲಿ ಮರೆಮೂಲೆಗಳಲ್ಲಿ ಕತ್ತಲೆಯ ಮುಸಿಮಾಟ. ಒಟ್ಟಿಗೆ ಹೇಳುವುದಾದರೆ, ಊರು, ವಂಚಕನಂತೆ, ಒಳಗೊಂದು ಹೊರಗೊಂದು. ಸುಳ್ಳಿನ ನಾಣ್ಯಕ್ಕೆ ಸತ್ಯದ ಮುದ್ರೆ. ಇಲಿಗಳು ದಾರಿಯಲ್ಲೆ ತಲೆಯೆತ್ತಿ ಹರಿದಾಡುತ್ತಿದ್ದವು. ಬೆಕ್ಕುಗಳು 'ಮ್ಯೊ' ಎಂಬ ಸಿಳ್ಳಿನೊಡನೆ, ಅಲ್ಲಲ್ಲಿ ತಳವಾರಿಕೆಯ ಸೋಗಿನಿಂದ ಹೊಂಚುಹಾಕುತ್ತಿದ್ದುವು. ಹಕ್ಕಿಯೊಂದು 'ಟ್ರಿಂಕು ಟ್ರಿಂಕು' ಎಂದು ಏನೋ ಒಂದು ಲಕ್ಷಣವನ್ನು ಹೇಳಿ ವಾಯುಮಂಡಲದಲ್ಲಿ ತೇಲಿಕೊಂಡು ಹೋಯಿತು. ಅದಕ್ಕೆ ಗೂಗೆ 'ಹೂಂ ಹೂಂ' ಎಂದುದು ನರಸಣ್ಣನ ಚಿಟ್ಟಗನ 'ಹೌದಣ್ಣ ಹೌದು' ಆಗಿರಬಹುದು. ಆಗ ನಡುವಿರುಳ ಕೋಳಿ 'ಕೋ ಕೋ' (ಯಾರು ಯಾರು) ಎಂದು ಕೇಳಿತು. ಅದಕ್ಕೆ ಮತ್ತೊಂದು ಗೂಗೆ 'ಅಹಂ ಅಹಂ'

(ನಾನು ನಾನು) ಎಂದು ಮರು ಮಾತುಗೊಟ್ಟಿತು. ಆಗ ಎಚ್ಚರಿತ ದನವೊಂದು 'ಹುಂ ಮಾ' (ಹುಂ, ಬೇಡ) ಎಂದು ಕೂಗಿ ಹೇಳಿತು. ಒಡನೆ ಕರು 'ಅಂಬೇ' (ಅಮ್ಮಾ, ಏನು?) ಎಂದು ಕೇಳಿತು. ಕೂಡಲೆ 'ಉಂ, ಮಾ. (ತಾಳು, ಸೌಭಾಗ್ಯ ದೇವತೆಯಾದ ಲಕ್ಷ್ಮೀದೇವಿಯ ಪ್ರಕಾಶವು, ಬೇಗನೆ ತಲೆದೋರುವುದು) ಎಂದು ಹೇಳಿತು. ಹೀಗೆ ನಾನಾ ಸಂಜ್ಞೆಯ ಪ್ರಶ್ನೋತ್ತರಗಳು ಅಸ್ಪಷ್ಟವಾಗಿ ನಡೆಯುತ್ತಿದ್ದುವು. ಹೀಗಿರುವಾಗ, ಕತ್ತಲೆ ಮನೆಸಾಲುಗಳನ್ನು ಹೊಕ್ಕು, ಪರೀಕ್ಷಿಸತೊಡಗಿತು. ಬಹಳ ಮಂದಿ, ನಿದ್ರಾಸಮಾಧಿಯಲ್ಲಿ ಮೈಮರೆತು, ತಮ್ಮ ನೆಡುನೋಟದಲ್ಲೆ ಇದ್ದರು. 'ಮಹಾಜನೋ ಯೇನಗತಸ್ಸಪಂಥಾ:' ಎಂಬ ಮೂಢಭಕ್ತಿಯವರಲ್ಲಿ ಕೆಲವರು ಮಾತ್ರ ಆ ದಾರಿತಪ್ಪಿ ಅತ್ತಿತ್ತ ನೋಡುತ್ತಿದ್ದರು. ಆದರೂ, ಕತ್ತಲೆಗೆ, ಹಲವರನ್ನು ತನ್ನ ದಾರಿಗೆ ಎಳೆಯಲಾಗಲಿಲ್ಲ. ಹಾಗೆಂದು ಕೆಲವರು ಮಾತ್ರ ಅದರ, ಬಲೆಗೆ ಬಂದಿಗಳಾಗದೆಯೂ ಇರಲಿಲ್ಲ. ಭೂಕಲ್ಪವೃಕ್ಷವಾದರೂ ತೆಂಗಿನ ಮರವು, ತಲೆಯಲ್ಲಿ ಹೊತ್ತು ಸಾಕಿದುವುಗಳೆಲ್ಲ ಫಲಗಳೂ ಎಳೆನೀರಿಂದ ತುಂಬಿರುವುವೆ? ಕೆಲವು ಬೋಡಾಗಿ ಬರಿಗತ್ತಲೆಯಿಂದಲೆ ತುಂಬಿರುತ್ತವೆಯಲ್ಲವೆ? ಕೆಲವು ದುಷ್ಟರು ಎಚ್ಚರಿಕೆಯಿಂದಿದ್ದರು. ಕತ್ತಲೆ ಅವರ ಬಳಿಸಾರಿತು. ತಾತ್ಕಾಲಿಕವಾದ ಸತ್ಕಾರಗಳೆಲ್ಲವೂ ಕಳೆದುವು.]

ಕತ್ತಲೆ:—ಪ್ರಿಯರೆ, ಹೇಗೆ, ಸರ್ವಸಮದೃಷ್ಟಿಯ ಕಾಲನ ದಯದಿಂದ ನಿಮಗೆಲ್ಲರಿಗೂ ಸುಖವೆ?

ಈ ಪ್ರಶ್ನೆಗೆ, ಏನೆಂದು ಉತ್ತರಗೊಡಲಿ? ಮೇಲಾಗಿ, ಸರ್ವಾಧಾರನಾಗಿರುವ ಈ ಕಾಲನನ್ನು ಸಮದೃಷ್ಟಿಯುವನೆಂದು ಹೇಳುತ್ತಿರುವೆ. ನೀನೇನೊ ಅವನ ದಯಕ್ಕೆ ಪಾತ್ರಳಾದರೂ, ನಾವೂ ಆ ಸುಖಕ್ಕೆ ಆಸ್ಪದರೆಂದೆಣಿಸುವುದು,ಬಾನಿನ ಬಳ್ಳಿಯೆ ಸರಿ.

ಕತ್ತಲೆ:—ಅದೇನು? ಕಾಲನು, ಸರ್ವಾಶ್ರಯನಾದರೂ, ಪ್ರಯತ್ನಾನುಸಾರವಾಗಿಯೆ ಫಲವನ್ನು ಒದಗಿಸುವುದು, ಅವನ ರೀತಿ. ನೀವಾದರೂ, ಪ್ರಯತ್ನಿಸುತ್ತಿದ್ದಿರಬಹುದೆಂದು ನನ್ನ ಎಣಿಕೆ ಇತ್ತು. ಹಾಗೆ ಕೈಯನೆ ಹಾಕದೆ ಕಹಿಯೆನ್ನುವುದು ಚೆನ್ನಾಗಿಲ್ಲ.

"ಅದೇನೆಂದು ಹೇಳಲಿ? ಮೇಲೆ ನೋಡಿ ಉಗುಳಿದರೆ ಮೋರೆಗೇ ಬೀಳುವುದಲ್ಲವೆ? ಆದರೂ, ನೀನು, ನಿರ್ವಂಚನೆಯಿಂದ ವಿಚಾರಿಸಿದುದಕ್ಕಾಗಿ ಹೇಳುತ್ತೇನೆ. ಕಾಲನ ಇಚ್ಛೆ ಸರ್ವಸಮಾನವಾಗಿಯೆ ಇರಬಹುದು. ನಾವೂ ಹಾಗೆಯೆ. ಆದರೆ, ಏಕೋದ್ದೇಶದ ಬಡವರಾದ ನಮ್ಮ ಮತ್ತು ಅವನ ನಡುವೆ ಒಂದು ಅಡ್ಡಿಯ ಪರದೆಯುಂಟು. ಅದೇ ನಮ್ಮಲ್ಲಿಯ ಧನಿಕ ಸಮಾಜವು. ಕೆರೆಯ ತೂಬು, ಎಡೆಯ ತೂತುಗಳಲ್ಲಿ ನೀರನ್ನು ಒಳಗೊಳಗೆ ಸೆಳೆವಂತೆ, ಆ ದುಷ್ಟಮಂತ್ರಿಗಳಾದ ಧನಿಕರು, ಕಾಲನ ಕರುಣಾಕಟಾಕ್ಷದ ಫಲವನ್ನು ತಂತಮ್ಮೊಳಗೇ ಹಂಚಿಕೊಳ್ಳುತ್ತಾರೆ. ಆದರಿಂದ ನಾವು ಬಾವಿಯ ಕಪ್ಪೆಗಳೇ ಆಗಿರುತ್ತೇವೆ."

ಕತ್ತಲೆ:—ಅ:, ಕಷ್ಟ, ಇದು ಬಹಳ ಕಷ್ಟ. ಮೊದಲಿನ ನನ್ನ ಮನಸ್ಸಿನ ಮಂಡಲವೆಲ್ಲವು ಈಗ ಟೊಳ್ಳಾಗುತ್ತ ಬರುತ್ತದೆ. ಭೂದೇವಿಗೆ ಸ್ಥಾವರ ಜಂಗಮಗಳೆಂಬ ಎರಡು ತರಗತಿಯ ಮಕ್ಕಳು. ಅವುಗಳಲ್ಲಿ, ಸ್ಥಾವರಗಳು ಅಂಗವಿಕಲರಾಗಿಯೂ ದಡ್ಡರಾಗಿಯೂ ಇರುವುದರಿಂದ, ಎಂದೆಂದೂ ತಾಯಿಯು ತಾನೆ ಆನುಕೂಲ್ಯಗಳನ್ನು ಒದಗಿಸಿ, ಅವುಗಳನ್ನು ರಕ್ಷಿಸುತ್ತಾಳೆ. ಜಂಗಮಗಳಾದರೊ, ಸ್ಥಾವರಗಳನ್ನೆ ತಿಂದು ತೇಗಿ ಓಡಾಡುವವು. ಅಷ್ಟೆ ಅಲ್ಲ. ತಮ್ಮಲ್ಲಿ ಮೂಢರಾದ ಪಶುಪಕ್ಷ್ಯಾದಿಗಳನ್ನೂ, ನೀವು ಮನುಷ್ಯರು, ಶಕ್ತಿಯುಕ್ತಿಗಳಿಂದ ಬಡಿದು ಬಾರಣೆ ಮಾಡುತ್ತೀರಂತೆ. ಈ ಸುದ್ದಿಯನ್ನು, ಆ ಪ್ರಾಣಿಗಳು ಆಗಾಗ ಹೇಳುತ್ತಿದ್ದರೂ, ಸುಳ್ಳಾಗಿರಬಹುದೆಂದೆ ಎಣಿಸುತ್ತಿದ್ದೆನು. ಆದರೆ ಈಗ ಎಲ್ಲವೂ ಸ್ಪಷ್ಟವಾಯಿತು. ಆದರಿಂದ ನಿಮ್ಮ ಈ ಸ್ಥಿತಿಯಾದರೂ ಅಯುಕ್ತವಲ್ಲ. ತಲೆಗೆ ಎರೆದ ನೀರು ಕಾಲಿಗೆ ಇಳಿವುದು ಪ್ರಕೃತಿ. ಮೊದಲು ನೀವೆಲ್ಲರೂ ಒಟ್ಟುಗೂಡಿ ಅಬಲರನ್ನು ಹಿಡಿದು ಹಿಂಡಿ ಕಡಿಯುತ್ತಿದ್ದುದರಿಂದ, ಈಗ ನಿಮ್ಮ ಕೊರಳಿಗೂ ಅದೇ ಕತ್ತಿ ಎತ್ತಿರುವುದು.

"ಸರಿ, ಆದರೆ, ಹಿಂದಿನ ಪಾಪವು, ಬಡವರಾದ ನಮಗೆ ಮಾತ್ರ ತಲೆಹೊರೆಯೊ? ಆ ಅನ್ಯಾಯಾರ್ಜಿತ ಪ್ರಯೋಜನವೆಲ್ಲ ದೊಡ್ಡವರಿಗೆ. ಎಂದಮೇಲೆ, ಅವರು ಸುಖವಾಗಿರುತ್ತಾ ನಾವು ಯಾಕೆ ಈ ಕಷ್ಟಕ್ಕೆ ಈಡಾಕಬೇಕು?

ಕತ್ತಲೆ:—ಒಳ್ಳೆಯ ಪ್ರಶ್ನೆ ಇದು. ಆದರೆ ಕೇಳಿರಿ. ಅವರ ಈಗಿನ ಮಹತ್ವವೆ ತಮಗೆ ಒದಗಬಹುದಾಗಿದ್ದ ಕಷ್ಟವನ್ನು ನೂಕಿದೆ. ಆದರೆ, ಅವರ ಪಾಲಿನ

ಕಷ್ಟವೂ ನಿಮ್ಮನ್ನ ಹಿಡಿಯಬೇಕಾಯಿತು. ಇಬ್ಬರೂ ಒಟ್ಟಿಗೆ ಹೊಣೆ ಬರ ಕೊಟ್ಟಲ್ಲಿ ಸಾಲಗಾರನು, ಅವರೊಳಗೆ ಸಿಕ್ಕಿದವನಿಂದ ಹಣವನ್ನು ವಸೂಲಿ ಮಾಡಬಹುದು. ಅದರಿಂದ ಅವರ ಪಾಪವೂ ನಿಮ್ಮನ್ನ ಹೊಂದಿದೆ.

"ಹಾಗಾದರೆ, ಪಾಲುಗಾರನ ಸಾಲದ ನಷ್ಟದಂತೆ, ನಮಗೆ ಕಷ್ಟವೆ ಗತಿಯೊ?"

ಕತ್ತಲೆ:—ಅಲ್ಲ; ಒಮ್ಮೆ, ಯುಕ್ತಿಯಿಂದ ತಪ್ಪಿಸಿಕೊಂಡರೂ, ಎಂದೆಂದಿಗೂ ಸಾಗದು. ಆ ಮೇಲೆ, ನಷ್ಟ ಹೊಂದಿದ ಪಾಲುಗಾರನು, ಆ ತಪ್ಪಿಸಿಕೊಂಡವ ನಿಂದ ವಸೂಲಿ ಮಾಡಬಹುದು. ಹಾಗೆಯೆ, ನೀವಾದರೂ ಪ್ರಯತ್ನಿಸಿ ಸುಖದ ಬಾಗಿಲನ್ನು ತೆರೆದುಕೊಳ್ಳಬೇಕು. ನೀವು ಮನಮುಟ್ಟಿ ಹೆಣಗುವು ದಿದ್ದರೆ, ತಕ್ಕ ಉಪಾಯವನ್ನೂ ತಿಳಿಸುತ್ತೇನೆ. ಸುಮ್ಮನೆ 'ಆಟನೋಡಿದುದೂ ಅಲ್ಲ. ಮಠಕಾಯ್ದುದೂ ಅಲ್ಲ" ಎಂಬಂತೆ ಆಗುವುದಿದ್ದರೆ ಹೊರಗಿ ನವಳಾದ ನಾನು 'ಕಷ್ಟಕ್ಕೆ ಕತ್ತಲೆಯೆ ಗುರಿ' ಎಂಬ ಇನ್ನೊಂದು ಗಾದೆಯನ್ನು, ಯಾಕೆ ಹುಟ್ಟಿಸಿಕೊಳ್ಳಬೇಕು?

'ದಯವಿಟ್ಟು ಹೇಳು. ಮೈಗೊಟ್ಟು ಹೆಣಗುತ್ತೇವೆ. "ತಲೆ ಮೆಟ್ಟು ವಾಗ ಬಾರದ ಕೋಪ ಬೆನ್ನುತಟ್ಟುವಾಗಳೆ?"

ಕತ್ತಲೆ:—ಆದರೆ ಕೇಳಿರಿ. ಈ ಭೂಮಾತೆಯ ಮಡಿಲಲ್ಲಿ ಬಳೆದುದರಿಂದ, ಎಲ್ಲರೂ ಅಣ್ಣತಮ್ಮಂದಿರಂತೆ, ಸುಖದುಃಖಗಳಿಗೆ, ಒಂದೆ ತರದ ಹಕ್ಕು ದಾರರು. 'ಒಬ್ಬನಿಗೆ ಹಾಲು ಒಬ್ಬನಿಗೆ ನೀರು' ಎಂಬ ಪಕ್ಷಪಾತ ಬುದ್ಧಿ ಭೂಮಾತೆಗೂ ಇಲ್ಲ. ಕೆಲ ಮಂದಿ ಬಡವರು, ಸಾವಿರ ಬೊಟ್ಟು ನೆತ್ತರನ್ನು ಒಂದು ಬೊಟ್ಟು ಮಾಡಿ ಬೆವರಿಳಿಸಿ ಕೆಲಸಮಾಡುವುದು! ಕೆಲ ದೊಡ್ಡವ ರೆಂಬವರು ಮಾತ್ರ ಕಾಲುನೀಡಿ ಕೂತುಕೊಂಡು ಡೊಳ್ಳುಬಾರಿಸುವುದು!! ಊರು ಸೂರೆಯಾದಾಗ, ಯುದ್ಧವೆದ್ದಿರುವಾಗ, ಮುಂದಾಗಿ ಮೈ ಮಾರ ಬೇಕು, ಈ ಬಡಜನರು! ಅದರ ಪ್ರತಿಫಲವಾದ ಸೌಭಾಗ್ಯ ಸಂಪತ್ತನ್ನು, ಸುಖಶಾಂತಿಯನ್ನು ಅನುಭವಿಸುವುದು ಈ ದೊಡ್ಡವರು!! ಇದೇನು ಅನ್ಯಾಯ! ಇಂಥ ವಕ್ರಬುದ್ಧಿ, ಸರ್ವತಂತ್ರನಿಯಂತ್ರಿಣಿಯಾದ ಪ್ರಕೃತಿದೇವಿಯಲ್ಲಿ ರುವುದೆ? ಆ ಪವಿತ್ರವಾದ ಪರಲೋಕದಿಂದ ಇಲ್ಲಿಗೆ ಬರುವಾಗ ಒಬ್ಬನಿಗಾದರೂ, ತಂದ

ಮ್ಯೆಯೊಂದಲ್ಲದೆ, ಬೇರೇನಾದರೂ ಮೂಲಧನವಿತ್ತೆ? ಇಲ್ಲ. ಈ ಧನಿಕರೆಲ್ಲರೂ ಭೂಮಾತೆಯ ಮಡಿಲಿನಿಂದ ಕಸುಕೊಂಡಿರುವರು. ಅದು ನ್ಯಾಯಾರ್ಜಿತವಾಗಿದ್ದರೆ, ಈ ಸಹೋದರರೆಲ್ಲರಿಗೂ ಸರಿಯಾಗಿ ಹಂಚಬೇಕು. ಹಂಚುವುದಿರಲಿ, 'ಸೂಚಿ ಮಾತ್ರೇಣ ಮಾಧವ' ಎಂದ ಕೌರವನಂತೆ, ಎಳ್ಳಿನ ಜಳ್ಳನ್ನಾದರೂ ತೋರಿಸುವಂತಿಲ್ಲ. ಆದರಿಂದ ಮುಳ್ಳನ್ನು ಮುಳ್ಳಿಂದಲೆ ತೆಗೆವಂತೆ, ಆ ಕಳ್ಳರನ್ನು ಕಳ್ಳತನದಿಂದಲೆ ಗೆಲಬೇಕು. ಈ ಉಪಾಯವನ್ನು ಚೌರ್ಯವೆಂದೂ ಹೇಳಲಾಗುವುದಿಲ್ಲ. ಹಲವರ ಹಕ್ಕಿಗೆ ಆ ಕೆಲವರೆ ಕೈ ಹಾಕುವುದು ನ್ಯಾಯವೆಂದಾದ ಮೇಲೆ, ನಿಮ್ಮದನ್ನು ನೀವೆ ಪಡಕೊಂಡರೆ ಹೇಗೆ ತಪ್ಪಾಗುವುದು? ಕಾಲವಂತೂ ಅನುಕೂಲವೇ ಆಗಿದೆ. ನಕ್ಷತ್ರಪತಿಯ ಭೇದೋಪಾಯದಿಂದಾಗಿ, ಲೋಕವೆಲ್ಲವೂ ಮೈಮರೆತಿದೆ. ತೇಜಸ್ವಿ ಕಣ್ಣು ಮುಚ್ಚಿರುತ್ತಾನೆ. ಕಲಿಯುಗಕ್ಕೆ ಮಾಂಡವ್ಯ ಮತದಂತೆ ಪಯಣಕ್ಕೆ, ದೃಢ ನಿಶ್ಚಯವೆ ಸುಮುಹೂರ್ತವಾಗಿರುವುದರಿಂದ, ಕ್ಷಣಕಾಲವಾದರೂ ತಡೆಯದೆ ಹೊರಡಿರಿ. ಆ ಧನಿಕರ ಮನೆಗಳಿಗೆ ಗನ್ನಹಾಕಿ ಬೇಕಾದಷ್ಟು ನಗನಾಣ್ಯಗಳನ್ನು ಬಾಚಿಕೊಂಡು ಬನ್ನಿರಿ. ದಾರಿಕೇರಿಗಳಲ್ಲಿಯೂ ಬಯಲು ಬಟ್ಟೆಗಳಲ್ಲಿಯೂ ರಾಜನಾದ ನಕ್ಷತ್ರಪತಿಯು ಕೈಯಾಡುತ್ತಿರುವುದರಿಂದ, ನಿಮಗೆ ಅಂಜಿಕೆಯಾಗಬಹುದು. ಆದರೆ, ರಾಜಮುದ್ರೆಯ ನಾಣ್ಯವು ಬಡವರಲ್ಲಿಯೂ ಭಾಗ್ಯವಂತರಲ್ಲಿಯೂ ಏಕಪ್ರಕಾರವಾಗಿ ನಡೆವಂತೆ ಈ ರಾಜನ ಕೈಗೂ ಪಕ್ಷ ಪರಪಕ್ಷವೆಂಬ ಭೇದವಿಲ್ಲ. ನಿಮ್ಮ ಮುಖ್ಯಸ್ಥಾನವಾದ ಅಂಕಡೊಂಕಿನ ಮರೆ ಮೂಲೆಗಳಲ್ಲಿ ನಾನೆ ಇದ್ದು ಸಹಾಯಮಾಡುತ್ತೇನೆ. ನಾನು ಹೊರಗಿನವಳಾದರೂ ಇಷ್ಟೆಲ್ಲ ಹೇಳಿದುದು ಕವಲೆಣಿಕೆಯಿಂದಲ್ಲವೆಂಬುದನ್ನು, ನಿಮಗೆ ಹೇಳುವ ಅವಶ್ಯವಿಲ್ಲ. ನನಗೆ ಇಕ್ಕಡೆಯೂ ಒಂದೆ. ಅವರು ಕಣ್ಣು ಕುತ್ತಲಿಲ್ಲ; ನೀವು ಹಾಲೆರೆಯಲಿಲ್ಲ. ಆದರೂ, ಧನ ಪ್ರವಾಹವು, ದೊಡ್ಡವರು ಬಡವರೆಂಬ ಕೃತ್ರಿಮವಾದ ಮರಳಿನ ದಿಣ್ಣೆಕಣಿವೆಗಳನ್ನು ಕೊಚ್ಚಿಕೊಂಡು ಹೋಗಿ ಅಡಿಗಟ್ಟು ಸರಿಯಾದರೆ, ಮೇಲಿನ ಹೊಯ್ಲಿನ ಹೊಡತವೂ ಹೋಗಿ ಸಂಸಾರವೆಂಬ ನದಿ ಸುಗಮವಾಗುವುದು. 'ಸರ್ವೆಜನಾಸ್ಸುಖಿನೊ ಭವಂತು' ಎಂಬುದೆ ನನ್ನ ಕೋರಿಕೆ.

ನಾವು ಈ ವರೆಗೂ ಹತಾಶರಾಗಿ, ನಮ್ಮಕಡೆಯ ದೈವವೆ ನಿದ್ರಾವಸ್ಥೆಯಲ್ಲಿದೆ ಎಂದು ಎಣಿಸುತ್ತಿದ್ದೆವು. ಆದರೆ, ಈಗಿನ ನಿನ್ನ ಮಾತನ್ನು ಕೇಳಿ

ದರೆ, ಕಾಲವೆ ನಮಗೆ ಅನುಕೂಲವಿದೆಯೆಂದು ತೋರುವುದು. ಹೆಚ್ಚೇನು ಹೇಳಲಿ. ಈ ನಮ್ಮ ಮಕ್ಕಳ ಬೆನ್ನಿಗೆ ಅಂಟಿದ ಹೊಟ್ಟೆ ತುಂಬುವ ಈ ಸೂಚನೆಗೆ ತುಂಬ ಕೃತಜ್ಞರಾಗಿರುವೆವು. ಅದಕ್ಕಾಗಿ, ಈಗಲೆ ಹೊರಡುತ್ತೇವೆ.

[ಆಗ ವೈಮೆರತು ನಿರಾಶವಾದ ಕತ್ತಲೆಯ ಎಣಿಕೆಗಣ್ಣಿಗೆ ನೀರು ಮುಟ್ಟಿಸಿದಂತಾಯಿತು. ಅದರಿಂದ, ಹೀಗೆ ಹೇಳಿತು.]

ಕತ್ತಲೆ:—ಪ್ರಿಯರೆ, ನಿಮಗೆ, ನನ್ನ ಅದೃಶ್ಯಶಕ್ತಿಯ ಕತ್ತಲೆಯ ಕಂಬಳಿಯನ್ನು ಹೊದೆಯಿಸುತ್ತೇನೆ. ಇದರಿಂದ, ನಿಮ್ಮನ್ನು ಎಚ್ಚತ್ತರೂ ಯಾರೂ ಕಾಣಲಾರರು. [ಆ ಮೇಲೆ, ಕತ್ತಲೆಗೆ ಕೃತಜ್ಞತೆಯನ್ನು ಒಪ್ಪಿಸಿ, ಆ ಪಂಗಡವು ಹೊರಟಿತು. ಅವರಲ್ಲಿ ಅನೇಕ ತರಗತಿಯವರಿದ್ದರು. ಕಳ್ಳರ ಗುರುವೆಂಬವನು ಒಂದು ಸಮಾಜದ ಮುಂದಾಳು. ಹೆಂಡದಗಂಡನೆಂಬವನು ಬೇರೊಂದು ನೆರವಿಯ ಮೇಲಾಳು. ಜೂಜಿನ ಓಜನೆಂಬವನು ಬದಲೊಂದು ಸಂದಣಿಯ ಮೊದಲಿಗನು. ಇವರೆಲ್ಲ, ಒಂದು ಗಿಡುವಿನ ಮೂರು ಶಾಖೆಗಳು. ಎಲ್ಲರೂ ಇಂದು ಒಂದೆ ಕೆಲಸದಲ್ಲಿ ಕೈಹಾಕಿದ್ದರು. ಒಂದು ಹುರಿಗೆ ಮತ್ತೆರಡು ಸೇರಿದರೆ ಮುಪ್ಪುರಿಯಾಗಿ ಮತ್ತಷ್ಟು ಬಲವಾಗುವುದಿಲ್ಲವೆ? ಆದರೆ, ಹಲವು ಸಮ್ಮಗಾರರು ಸೇರಿ ಚರ್ಮದ ಹದಗೆಟ್ಟಿತು, ಎಂಬ ಮಾತೂ ಇದೆ.]

ಧನಕೋಟಿನಾರಾಯಣಸೆಟ್ಟಿಯ ಮಾಳಿಗೆಮನೆ

ಕಳ್ಳರ ಗುರು:—ಅ:, ಈ ಮನೆಯ ಗಂಭೀರತೆಯನ್ನು ಏನೆಂದು ಬಣ್ಣಿಸಲಿ! ಒಂದಕ್ಕೊಂದು ಸೇರಿ ಎರಡಾಗಿ, ಮೆಲ್ಲಮೆಲ್ಲನೆ ಹತ್ತು ನೂರು ಸಾವಿರ ಲೆಕ್ಕದಿಂದ ಕೋಟ್ಯಂತರವಾಗುವಂತೆ ಇದೂ ಇಷ್ಟು ಎತ್ತರವಾಗಿದೆ. ಇದರ ಈ ಮಹತ್ವವು ನೆಲೆಗೊಳ್ಳಲಿಕ್ಕೆ ನಮ್ಮಂಥವರ ಎಷ್ಟು ಮನೆಗಳಿಗೆ ಮುಳ್ಳ ಕಟ್ಟೆಗಳು ಬಿದ್ದಿವೆಯೊ? ಎಷ್ಟು ಸಂಸಾರಗಳು ಹಾದಿ ಬೀದಿಗಳಲ್ಲಿ ಅಲೆಯುತ್ತಿರುವವೊ? ಇನ್ನೆಷ್ಟು ಮಂದಿಗೆ 'ಕಾಡಸೊಪ್ಪು ತೋಡನೀರು' ಆಗಿದೆಯೋ? ಮತ್ತೆಷ್ಟು ಜನರು 'ಹೇಳಿದ ಕೆಲಸ, ಹಾಕಿದ ಕೂಳು'ಗಳಿಗೆ ಕೈಯೊಡ್ಡಿ ಎದೆ ಮುರಿದು ಕೆಲಸಮಾಡುತ್ತಿರುವರೊ? ಹಾ! ಲೋಕವನ್ನೆ 'ಪ್ರಾಣಾಯ: ಸ್ವಾಹಾ' ಎಂದು ನೀರುಗುಡಿದು ತಿಂದು ತೇಗುವ ಈ ದೊಡ್ಡವರನ್ನು ನಿರ್ಮಿಸಿದ ಸ್ವಾರ್ಥಿಯಾದ ಹಿರಣ್ಯಗರ್ಭನ ಸ್ವಾರ್ಥವು ಇವರಲ್ಲಿಯೂ

ಹೊಳೆದು ಕಾಣುತ್ತಿದೆ. 'ತಂದೆಯಂತೆ ಮಗ'ನೆಂಬ ಮಾತು ಇಲ್ಲಿಯೆ ಅನ್ವಿತವಾಗಿದೆ.

ಹೆಂಡದ ಗಂಡ:—ಪ್ರಿಯನೆ, ನಿನ್ನ ಮಾತು ಸರಿ. ಇಂಥ ದೊಡ್ಡವರು, ಕೈತೋಡು ಗಳಂತಿರುವ ಸಣ್ಣ ಸಣ್ಣ ಭೂಭಾಗಗಳನ್ನು ತಮ್ಮ ವಶಮಾಡಿ ಹರಿವ ಹೆದ್ದೊರೆ ಯಂತಿದ್ದರೆ, ಲೋಕ ಹಿತವೆ ಆಗುತ್ತಿತ್ತು. ಆದರೆ, ಎಲ್ಲವಕ್ಕೂ ಬಾಯಿದೆರೆ ವರಲ್ಲದೆ, ಅದರಿಂದೇನೂ ಪ್ರಯೋಜನವಿಲ್ಲ. ಊರಿಗೂ ತಮಗೂ ಕಷ್ಟವೆ: ಈ ಮನೆಯೆ, ಅದನ್ನು ಸೂಚಿಸುತ್ತಿದೆ. ಮೂಗು ಮುಟ್ಟುವಂತೆ ಉಂಡು, ತಲೆಬಗ್ಗಿಸಲಾರದ ಹೊಟ್ಟೆಬಾಕನ ಊರ್ಧ್ವದೃಷ್ಟಿಯಿಂದ ಮೇಲೆ ನೋಡುತ್ತಿದೆ. ಮಿತಭೋಜನವನ್ನು ಮಾಡಿದರೆ, ಆ ಅನ್ನರಸವು ನಾಡಿ ನಾಡಿಗಳಲ್ಲಿಯೂ ಸರಿದು ಶರೀರಕ್ಕೂ, ಅದರಿಂದ, ತನ್ನನ್ನು ಹೊಂದಿದವರಿಗೂ ಉಪಕಾರ ವಾಗುವುದು. ಆದರೆ, ಅದು ಮಿತಿಮಿಾರಿದರೆ, ಅರಗದೆ ತನಗೂ ಇತರರಿಗೂ ಉಪದ್ರವವೆ ಸರಿ. ನೋಡು ಅದಕ್ಕಾಗಿಯೆ ನಾನು ಸಾರದ ಅಂಗಡಿಯನ್ನು ಎಲ್ಲರಿಗಾಗಿ ತೆರೆದಿರುವುದು. ಆ ಸಾರವನ್ನು ಸೇವಿಸಿದರಲ್ಲವೆ ಸಂಸಾರವು ಸಾರ್ಥವಾಗುವುದು? ಆದರೇನು ಈ ದುಷ್ಟರು, ಆ ಸಾರಕ್ಕೆ ಹೆಂಡವೆಂದು ಹೆಸರಿಟ್ಟು, ನನಗೂ, ನನ್ನಲ್ಲಿ ಹೊಕ್ಕು ಹೊರಡುವ ಸಾರಜ್ಞರೆಲ್ಲರಿಗೂ ಕಪ್ಪು ಕರೆಯಿಡತೊಡಗಿದ್ದಾರೆ. ಸಾರವೆಂದರೆ ಸಾಮಾನ್ಯವೆ? ಸರಸ್ವತೀ ಭಕ್ತ ನಂತೆ, ನನ್ನ ಸಾರಸೇವಕನು, ಮೊದಲು ಚಾರಕನಾಗಿದ್ದರೂ ಎರಡನೆ ನಿಮಿ ಷಕ್ಕೆ ಚಕ್ರವರ್ತಿಯಾಗುತ್ತಾನೆ. ಅಂಥವರು, ಯಾವಾಗಲೂ ಸರ್ವಸಮದೃಷ್ಟಿ ಯವರು. ಅವರಿಗೆ, ಯೋಗಿಗಳಂತೆ, ಕಾಡೂ ನಾಡೂ, ಹುಂಚವೂ ಮಂಚವೂ, ಇರುಳೂ ಹಗಲೂ, ಒಂದೇ ರೀತಿ. ಅವರು ಶಕ್ತಿದೇವಿಯನ್ನು ಆರಾ ಧಿಸಿ, ಮಹಾಶಕ್ತಿಸಂಪನ್ನರಾಗಿದ್ದರು. ಶಂಕರಾಚಾರ್ಯನೆಂಬ ದುಷ್ಟನೊಬ್ಬನು ಹುಟ್ಟಿ, ಆ ಶಾಕ್ತೇಯರ ಬೇರನ್ನೆ ಕಿತ್ತುಬಿಟ್ಟನು. ಆ ಹಿಂದಿನ ವೈಭವವನ್ನು ನೆನೆದರೆ ಹೊಟ್ಟೆಗೆ ಕತ್ತಿಗುತ್ತಿದಂತಾಗುತ್ತಿದೆ. ಆದರೆ, ಆ ತುಂಡಾಗಿ ಉಳಿದ ನಮ್ಮ ಮತದ ಕಿರುಬೇರುಗಳು, ಈಗಿನ ಮಳೆಯಿಂದ ನಮ್ಮವರ ಆಶಾ ತಂತುವಿನೊಡನೆ ಅಲ್ಲಲ್ಲಿ ಚಿಗುರುತ್ತಿರುವುದೊಂದು ಶುಭಚಿಹ್ನೆ. ಆದರೆ, ಈ ದುಷ್ಟರ ಮೂಗಿಗೆ ಬಳ್ಳಿ ಸುರಿಯದಿದ್ದರೆ, ಎಲ್ಲವೂ ಗೊಡ್ಡಾಕಳಿನ ಹಾಲೆ ಸರಿ.

ಜೂಜಿನ ಓಜ:—ನಮ್ಮ ಮತಗಳಲ್ಲಿ 'ಅದು ಇದು' ಎಂದೇನು? ಎಲ್ಲವೂ ಮೇಲಾಗಿಯೇ ಇದ್ದುವು. ಪುಷ್ಕರ ಶಕುನಿ ಮೊದಲಾದ ದ್ಯೂತವಿದ್ಯಾ ಶಿರೋಮಣಿಗಳೆಂದರೆ ಸಾಮಾನ್ಯರೆ? ಐಶ್ವರ್ಯಬಲದಿಂದ ಉಚ್ಚನೀಚ ಭಾವನೆಗಳುಂಟಾಗಿ ಲೋಕವೆ ಕೆಟ್ಟುಹೋಗುವ ಪ್ರಸಂಗವನ್ನು ನಿವಾರಿಸ ಲಿಕ್ಕಾಗಿ, ಆ ದ್ರವ್ಯವನ್ನು ತೂಗಿಕೊಡುವಂತಿರುವ ದ್ಯೂತ್ಯವಿದ್ಯೆಯನ್ನು ಹಬ್ಬಿಸಿದ ಆ ಆಚಾರ್ಯರ ಕಲಿಕೆಗೆ ಕಣ್ಣುಂಟೆ? ದುರದೃಷ್ಟದಿಂದ ಆ ಮಹ ನೀಯರು ಮರೆಯಾದರು. ಈಗ ಈ ನೀಚರು ಕಾಲ್ನೀಡಿ ಕುಳಿತು ಕಂಡು ಕೇಳಿದವರನ್ನು 'ಏಳುಕೂರು' ಮಾಡುತ್ತಾರೆ. ಅದರಿಂದ ಕೊರಳಿನ ತೂಣ ದಂತಿರುವ ಇವರನ್ನು ಮುರಿದಿಡಲೆಬೇಕು.

ಕಳ್ಳರ ಗುರು:—ಎಲ್ಲವೂ ಸರಿಯೆ. ಆದರೆ, ಈಗ ಮಾತಾಡುತ್ತಿರಲಿಕ್ಕೆ ಎಡೆ ಯಿಲ್ಲ. ಮನೆಗಟ್ಟಿದ ಮೇಲೆ ಸಾರಣೆ ಎಂಬಂತೆ, ಕೆಲಸವನ್ನು ಮೊದಲು ಮಾಡೋಣ. ನಾನೀಗ ಗನ್ನಹಾಕಿ ಒಳಹೋಗುತ್ತೇನೆ. ನಗನಾಣ್ಯಗಳನ್ನು ಆರಿಸುವುದಕ್ಕಾಗಿ ಜೂಜಿನ ಓಜನು ನನ್ನೊಟ್ಟಿಗೆ ಇರಬೇಕು. ಈ ಸಾರಜ್ಞನು, ಯಾರಾದರೂ ಕಾವಲಿಗರ ಸುಳಿವು ಸೋಂಕನ್ನು ಇದಿರುನೋಡುತ್ತ ಹೊರಗೆ ಇರಲಿ.

[ಎಲ್ಲರೂ ಒಪ್ಪಿದರು. ಕಳ್ಳರಗುರುವಿನ ಗನ್ನಗತ್ತರಿಗೆ ಮನೆಗೋಡೆ ಒಡೆಯಿತು. ವಾತಕಫಗಳಂತೆ, ಮನೆಯೆಂಬ ಮೆಯ್ಯನ್ನು ಹೊಕ್ಕರು. ಪಿತ್ತ ದಂತೆ, ಹೆಂಡದಗಂಡನು ಆ ತೂತಿನ ತಲೆಬಾಗಿಲಲ್ಲಿ ಕಾಯುತ್ತಿದ್ದನು. ರೋಗ ಬಾಧೆಯಿಂದ ನರಳುವಂತೆ, ಮನೆನಾಯಿ 'ಬೊಬ್ಬೋ' ಎಂದು ಬಗುಳಿತು. ನರಗಳ ಬಟಿದಾಟದಂತೆ ಕೆಲ ಹೆಂಗಸರು, ಎಚ್ಚತ್ತು ಅತ್ತಿತ್ತ ತಿರುಗಾಡಿದರು. ಮದ್ದುಮಾಟಗಳಂತೆ, ಆಯುಧಗಳೊಡನೆ, ಒಳಗೆ ಸದ್ದಾದ ಕಡೆಗೆ ಮನೆ ಗಂಡ ಸರು ಬಂದರು. ಕಳ್ಳರ ಗುರುವಿಗೂ ಜೂಜಿನ ಓಜನಿಗೂ ಔಷಧದ ಗದಾ ಪ್ರಯೋಗವೂ ಆಯಿತು. ಬಂದ ದಾರಿಗೆ ಸುಂಕವಿಲ್ಲವೆಂದು ಭಾವಿಸಿ ಇಬ್ಬರೂ ಹೊಕ್ಕಲ್ಲೆ ಹೊರಡಲು ಆರಂಭಿಸಿದರು.]

ಹೆಂಡದಗಂಡ:—(ಗಾಬರಿಗೊಂಡರೂ ವಿಮರ್ಷಾಪೂರ್ವಕವಾಗಿ) ಇದೊ, ನಮ್ಮಾವ ರಿಬ್ಬರೂ ಕಣ್ಣು ಮುಚ್ಚಿಕೊಳ್ಳಿರಿ. ಮರಳು ಚೆಲ್ಲುತ್ತೇನೆ. ಜಾಗ್ರತೆ, ಜಾಗ್ರತೆ; [ಎಂದು ಚೆಲ್ಲಿದನು. ಇಬ್ಬರ ಕಣ್ಣೂ ಮರಳು ತುಂಬಿಹೋಗಿ

ಮರಳಿ ತೆರೆಯುದಂತಾಯಿತು. ಹೇಗಾದರೂ ಹೊರಬಿದ್ದು, ಎಡವಿತಡವರಿಸುತ್ತ ಓಡಿಹೋದರು. ಒಂದೆ ಹೊಟ್ಟೆಯಿಂದ ಇಳಿದವರೂ, ಅಲ್ಲಲ್ಲಿ ಚೆದರಿ ಮಡಿದುಹೋಗುವಂತೆ, ಒಂದೆ ದಾರಿ ಹಿಡಿದು ಬಂದರೂ, ಎಲ್ಲೆಲ್ಲಿಯೊ ಕಂಡ ಬಟ್ಟೆ ಹಿಡಿಯಬೇಕಾಯಿತು. ಇಂಥ ನೀಚರಲ್ಲಿಯೂ ಕೆಲವು ಯೋಚನೆಗಳು ಯೋಗ್ಯವಾಗಿವೆ. ಆದರೆ, ಸಮುದ್ರಕ್ಕೆ ಸಕ್ಕರೆ ಹಾಕಿದಂತೆ, ಅವು ಅಲ್ಪವಾಗಿರುವುದರಿಂದ, ದುರ್ಭಾವನೆಗಳೆ ಮಿತಿಮೀರಿರುತ್ತವೆ. ಆದರಿಂದ, ಈಗಿನ ಏಕಸತ್ತಾವಾದಿಗಳ ಸಭೆಯಂತೆ, ಎಲ್ಲವೂ ಲೋಕವಿರುದ್ಧವಾಗಿಪರಿಣಮಿಸಿ, ಕೆಟ್ಟುಹೋಗುತ್ತಿದೆ.

ನಾಲ್ಕನೆಯ ಅಂಕ.

ಕತ್ತಲೆ:—ಆ:, ಮಾಡಿದ ಮಾಟಗಳೆಲ್ಲ, ಹಿಂದೊದೆವ ಕೋವಿಯಂತೆ, ನನಗೇ ಅನಿಷ್ಟಕರವಾಗುತ್ತಿವೆ. ಕೈಗೆ ಬಂದುದು ಬಾಯಿಗಿಲ್ಲದೆ ಮಾಯವಾಗುತ್ತಿದೆ. ಆದರೆ ಈಗ, ನಕ್ಷತ್ರಪತಿ ನನ್ನ ಕಡೆಗೆ, ಒಂದಿಷ್ಟು ಕೊಂಕಾಗಿದ್ದರೂ ಈ ರಾತ್ರಿಯಲ್ಲಿಯೂ ಆ ಹಗಲಿನಲ್ಲಿಯೂ ನನಗಿರುವ ಅನುಕೂಲತೆಗಳನ್ನು ಹೋಲಿಸಿದರೆ, ಅಜಗಜಾಂತರದ ವ್ಯತ್ಯಾಸವಿರುವುದು. ಆದರಿಂದ, ಈಗಲೆ, ಏಳಿಗೆಗಾಗಿ ಕೈಲಾಗುವ ಪ್ರಯತ್ನಮಾಡಬೇಕು. [ಮನೋರಥವನ್ನು ಏರಿದರೆ, ಅದು ಎಲ್ಲೆಲ್ಲಿಗೆ ಹೋಗಿ, ಆರಾರೊಡನೆ ಮಾತಾಡಿ, ಎಂಥೆಂಥ ಉಪಾಯಗಳನ್ನು ಹೂಡುವುದಿಲ್ಲ! ಆದರೆ, ಆ ಹೂಟವು ಬಾನಿನ ಬಳ್ಳಿಯಾಗದೆ ತೋಟದ ತೆಂಗಾಗಬೇಕಾದರೆ, ಹಿನ್ನೋಟ ಮುನ್ನೋಟಗಳೂ ತನ್ನಾಟದ ತಿಳಿವೂ ಚೆನ್ನಾಗಿ ಇರಬೇಕು. ಆ ರಥಕ್ಕೆ, ವಿಚಾರವೆಂಬ ಪಳಗಿದ ಕುದುರೆಯನ್ನು ಕಟ್ಟಿದರೆ, ರಾಜಬೀದಿಯಲ್ಲೆ ನೇರಾಗಿ ಗರಗರನೆ ಹರಿದು ಗುರಿ ಮುಟ್ಟುವುದು. ಆ ತೇರಿನ ನೊಗವನ್ನು, ಭ್ರಮವೆಂಬ ವಾಜಿಯ ಹೆಗಲಿಗೆ ತಗಲಿಸಿದರೆ, ಅದು ಕಾಡುಗುಡ್ಡಗಳಿಗೊ ಕಣಿವೆಕಂದಕಗಳಿಗೊ ಹಾಯ್ದು; ತನ್ನನ್ನು ನಂಬಿ ಹಿಂಬಾಲಿಸುವ ಗಾಡಿಗೂ ಅದರೊಳಗಿನವರಿಗೂ ದುರ್ಗತಿಯನ್ನೆ ಒದಗಿಸುವುದು. ಈ ಸಂದರ್ಭದಲ್ಲಿ, ಬೆನ್ನುಹಿಡಿದ ಮಡದಿಮಕ್ಕಳನ್ನು ದುರ್ದಶೆಯ ತುತ್ತಾಗಿಸಿ ಪಾರಾದ ಕೆಲವು ಪಂಡಿತರು ಕಣ್ಣೆದುರಿಗೆ ಬಂದು

ಬಿಡುವರು. ಇರಲಿ, ಆ ಮನೋರಥವು ಮೂರು ಲೋಕದಲ್ಲೂ ಹರಿದು ಎಲ್ಲವನ್ನೂ ವಶಮಾಡುವುದು. ಮಹಾರಾಜರ ಹಾಗೂ ಮಹೇಂದ್ರನ ಏಕಾಂತಮಂದಿರಕ್ಕೂ ಹೋಗುವುದು. ಶೇಷನ ಹೆಡೆಮಣಿಯೂ, ಅದಕ್ಕೆ ಅಂಗೈನೆಲ್ಲಿಯಂತಾಗುವುದು. ಆದರೆ, ಈ ಮನೋರಥವನ್ನು, ಕಾರ್ಯ ರಥವು ಹಿಂಬಾಲಿಸಬೇಕಾದರೆ, ಮೇಲೆ ಹೇಳಿದಂತೆ ಮೊದಲಿನದಕ್ಕೆ ವಿಚಾರಾ ಶ್ವವನ್ನು ಕಟ್ಟದೆ ಸಾಗದು. ಈಗ ಕತ್ತಲೆ ತನ್ನ ರಥಕ್ಕೆ ಯಾವುದನ್ನು ಕಟ್ಟಿದೆಯೋ, ನೋಡೋಣ. ತನ್ನ ಮನಸ್ಸಿಗೆ ಏನೋ ಒಂದು ಕಲ್ಪನೆ ಕಚ್ಚಿ ಹಿಡಿದುದರಿಂದ, ಕತ್ತಲೆ ಹೊರಟಿತು. ಪಂಚವಟಿಯಿಂದ ಅಣ್ಣರಾವಣ ನಲ್ಲಿಗೆ ಓಡಿಹೋದ ಶೂರ್ಪಣಖಿಯಂತೆ ಗಾಢಾಂಧಕಾರನ ಕಾಡಿಗೆ ಧಿಂಕಿಟ್ಟಿದು. ಆ:, ಅದೆಂಥ ಅರಮನೆ; ಸುತ್ತಲೂ ಮುಳ್ಳಿನಕೋಟೆ. ಹೊರಗಿನ ಮನುಷ್ಯಮಾತ್ರಕ್ಕೆ ದಾರಿ ಇಲ್ಲದಿದ್ದರೂ ದುರ್ಬುದ್ಧಿಗೆ ಹೆಬ್ಬಾಗಿಲು ತೆರೆದೇ ಇದೆ. ಮನೆಗಂಬಿಗಳಿಗಾಗಿ ಹೆಮ್ಮರಗಳೆ ಕೈಗೊಟ್ಟಿವೆ. ಕೊಂಬೆ ಗಳೆ, ಉಪ್ಪರಿಗೆಯ ಜಂತೆಮುಚ್ಚಳಗಳು. ರೆಂಬೆಸೊಪ್ಪುಗಳೆ, ಗಳಮಾಡುಗಳು. ಆ ಜಂತೆಗಳ ಬದಿಯಲ್ಲಿ ಕೋಟರಗಳ ಕಪೋತಪಾಲಿಕೆಗಳು. ಒತ್ತಟ್ಟು, ಲತಾಮಂಟಪಗಳ ರಚನೆ ನೇರಾಗಿದೆ. ತರತರದ ಕಲ್ಲುದಿಣ್ಣೆಗಳ ಮಣೆ ಮಂಚ ಜಗಲಿಗಳೂ, ಗುಡ್ಡೆಗಳ ಮುಖಶಾಲೆಗಳೂ ಕಂಗೊಳಿಸುತ್ತಿವೆ. ಉಪ್ಪ ರಿಗೆಯಿಂದ ಮುಖಶಾಲೆಗಿರುವ ದಾರಿಗಾಗಿ, ಕೆಲ ಕೊಂಬೆಗಳು ಗುಡ್ಡಗಳಿಗೆ ನೀಡಿರುತ್ತವೆ. ಆಯಾವ್ಯಕ್ತಿಗಳಿಗೆ ತಕ್ಕಂತೆ, ಪೊದರುಗವಿಗಳ ಕೋಣೆಗಳು ಭದ್ರವಾಗಿವೆ. ಈ ಗೂಢವಾದ ಬೀಡಿಗೆ, ಅಂಧಕಾರನೆಂಬವನೆ ದೊರೆ. ಹುಲಿ, ಸಿಂಹ ಮೊದಲಾದವರೆ ಅವನ ಸಭ್ಯರು. ಅವರ ಜೀವನ ಕ್ರಮವೆಂದರೆ ಅನಿರ್ವಚನೀಯವು. ಮತ್ಸ್ಯನ್ಯಾಯದಂತೆ ಅಬಲಪ್ರಾಣಿಗಳು ಬಲವಿದ್ದವು ಗಳಿಗೆ ಬಿಸಿರೊಟ್ಟಿ. ಅರಸಾದ ಅಂಧಕಾರನಿಗೂ ಇದೆ ಇಷ್ಟವಂತೆ. ಇದೆ ಪ್ರಕೃತಿಯೆಂದೂ, ಆಯಾ ವ್ಯಕ್ತಿಗಳ ಬಾಯಿಗೆ ಅಡ್ಡ ಬರುವುದೆ ವಿಕೃತಿ ಯೆಂದೂ ಎಣಿಸಿ, ಅವನು ಆಪ್ರಕೃತಿಹಿತವಾಗಿರಬೇಕೆಂದು ಅಪ್ಪಣೆಮಾಡಿರು ತ್ತಾನಂತೆ. ಅಂಗವಿಕಲರಾಗಿ ಅಲ್ಲವೆ ರೋಗಗ್ರಸ್ತರಾಗಿ, ಬರಿದೆ ಅಶನಧ್ವಂಸಿ ಗಳೆಂದೆನಿಸಿ ಇರುವುದಕ್ಕಿಂತ, ಬಲವಂತರಿಗೆ ಅನ್ನದ ಜೀಮೂತವಾಹನರಾಗ ತಕ್ಕುದೆ ಧರ್ಮವೂ ರಾಜ್ಯಹಿತವೂ ಆಗುವುದೆಂದು, ಆ ಆಜ್ಞೆಗೊಟ್ಟಿರಬಹುದೊ ಏನೊ? ಆದರೆ, ಪ್ರತಿಯೊಂದು ಪ್ರಾಣಿಯ ಅಂತರದಲ್ಲಿರುವ ಪ್ರಕೃತಿ ಗುಣವು

ಪ್ರಾಯವೇರಿದಂತೆ ಹೊರಗಣ ವಿಕೃತಿಗುಣದಿಂದ ಮಿಶ್ರಿತವಾಗಿ ಮಾಸಿಹೋಗುವುದು; ಆ ಮಿಶ್ರಿತಗುಣವು ಪ್ರಕೃತಿಗೆ ಭಿನ್ನವಾಗಿ ಅದರಲ್ಲಿ ವಿಕೃತಿಯೆ ಪ್ರಬಲವಾಗಿರುವುದು; ಅದರಿಂದಲೇ ಅದು ಅಬಲವಾದ ವ್ಯಕ್ತಿಗಳನ್ನೆಲ್ಲ ತೃಷ್ಣೆಯ ಗಾಳದಿಂದ ಸೆಳೆಯಹತ್ತುವುದು. ಆ ಮಿಶ್ರಣವೆ ಪ್ರಕೃತಿಯಾದರೆ, ಅಬಲಪ್ರಾಣಿಯ ಪ್ರಕೃತಿಗೆ ವಿರುದ್ಧವಾಗಿ ಅದನ್ನು ಬಡಿದು ಬಾಯ್ತುಂಬಿಸುವ ಎಣಿಕೆ, ಆ ಬಲಿಷ್ಠಪ್ರಾಣಿಯಲ್ಲಿ ಮೊಳೆಯಬಹುದೆ? ಶುದ್ಧವಾದ ಬಂಗಾರದ ಪ್ರಕೃತಿ ಮೆದುವಾಗಿ ಕೆಲಸಕ್ಕೆ ಬರುವುದಿಲ್ಲವೆಂದು, ಮನ ಬಂದಂತೆ ಕಣ್ಮುಚ್ಚಿ ಚೆಂಬನ್ನು ತುಂಬಿದರೆ ಯಾಕಾದೀತು? ಇರಲಿ, ಇದಕ್ಕೆ ಬೆರಗಾಗಿ ಬರಿದೆ ಮರುಕಪಡುವುದೇಕೆ? ನಮ್ಮ ನಾಗರಿಕತೆಯ ನಾಡಿನಲ್ಲಿ ಯಾದರೂ, ಆ ಅನ್ಯಾಯವು ಕಾಲ್ದೆಗೆದಿರುವುದಿಲ್ಲ. ಹಲವರು, ಹೊರ ಹೊರಗೆ ಮಾತ್ರ ಪರೋಪಕಾರದ ಬಣ್ಣವನ್ನು ಬಳಿದಿರುವರಲ್ಲದೆ, ಒಳಗೊಳಗೆ ಸ್ವಾರ್ಥದ ಹೆಬ್ಬಾವಿನ ಹೆಬ್ಬಾಯನ್ನೆ ತೆರೆದಿರುತ್ತಾರೆ. ಹೋಗಲಿ, ಅಂಥವರ ಮಾತೇಕೆ? ಅವರನ್ನು ದಾರಿಗೆ ತರಲಿಕ್ಕೆ ದೇವರಿಗೂ ಅಸಾಧ್ಯವು. ಬೇರೊಣಗಿದ ಮರಕ್ಕೆ ನೀರೆರೆದು ವಸಂತನನ್ನು ಕಾಯುತ್ತಿದ್ದರೂ ಅದು ಹೂಬಿಡುವುದೆ? ಮುಂದಿನ ಮೊಳಕೆಯ ಜನಾಂಗವಾದರೂ ಕಣ್ದೆರೆದು, ಲೋಕಹಿತಕಾರಿಯಾಗಿ ಏಳ್ಗೆಗೆ ಬರಬೇಕೆಂಬುದು ಮಾತ್ರ ನಮ್ಮ ಉದ್ದೇಶವು. ಇರಲಿ, ಕತ್ತಲೆಯ ಕೆಲಸವೇನು, ನೋಡೋಣ.]

ಕತ್ತಲೆ:—(ಅಳುತ್ತ) ಅಣ್ಣ, 'ಲೋಕದಲ್ಲಿ ಸ್ವೇಚ್ಛೆಯಿಂದ ತಾನುತಾನಾಗಿರು' ಎಂದು, ನೀನು, ನನ್ನನ್ನು ನಾಡಿಗೆ ಕಳುಹಿಸಿ, ನಿನ್ನ ಕಾರ್ಯಭಾರದ ಹೊರೆಯನ್ನು ಇಳಿಸಿಕೊಂಡೆಯಷ್ಟೆ. ಆದರೆ...(ಎಂದು ಗೋಳಿಡತೊಡಗಿದಳು).

ಅಂಧಕಾರ:—(ಅಚ್ಚರಿಯಿಂದ) ತಂಗಿ, ಇದೇನು ವಿಕೃತಿ? 'ನಾಡಿನಲ್ಲಿ ನಮ್ಮ ಸಮೀಪಬಂಧುಗಳಾದ ರಾತ್ರಿನಕ್ಷತ್ರಪತಿಗಳಿಗೆ ಪೂರ್ಣಾಧಿಕಾರವು ದೊರೆತಿದೆ. ಅದರಿಂದ ನಾನೂ ಅವರೊಡನೆ ವಿಹರಿಸುತ್ತೇನೆ' ಎಂಬ ನಿನ್ನ ಒತ್ತಾಯಕ್ಕಾಗಿಯೆ ಕಳುಹಿದೆನು. ಈಗ, ಹೆಂಗುಸಾದ ನಿನ್ನ ಸ್ವಾತಂತ್ರ್ಯಪ್ರಿಯತೆಗೆ ಬಡ್ಡಿಸಿಕ್ಕಿತೆಂದು ನನ್ನ ಮೇಲೆ ತಪ್ಪನ್ನು ಹೊರಿಸುವಂತೆ ತೋರುವುದು. ಇರಲಿ, ಈಗಿನ ಸಂಕಷ್ಟವೇನು?

ಕತ್ತಲೆ:—ಅಣ್ಣ, ಅಲ್ಲಿರಲಿಕ್ಕೆ ನನಗೆ ಒಪ್ಪಿಗೆ ಇತ್ತು. ರಾತ್ರಿ ರಾಣಿಯೆ ಅಕ್ಕನು. ನಕ್ಷತ್ರಪತಿರಾಜನೆ ಭಾವನು. ಮತ್ತೇನು, ನನ್ನ ಕೈಯಾಟವೇ ಆಟವೆಂದು ಎಣಿಸಿದ್ದೆನು. ಹಾ! ಎಲ್ಲವೂ ಬಯಲುಬರಗಿದಂತಾಯಿತು. ಆದರೆ, ಭಾವನ ಎದೆಯಲ್ಲಿ, ಇನ್ನೂ ನನ್ನ ಪ್ರೇಮವು ನಾಟಿದ ಕಪ್ಪುಗುರುತು ಇದ್ದೇ ಇದೆ. ಅದನ್ನು ಕಂಡು ಕರುಬಿ, ಲೋಕದ ಮುಂದಾಳಾದ ತೇಜಸ್ವಿ, ಬಹಳ ಹೆಣಗಿ ತಲೆಯಾಡಿಸಿದನು. ಆ ದುರ್ಬುದ್ಧಿಗೆ ತಕ್ಕ ಪ್ರಾಯಶ್ಚಿತ್ತವಾಗಿ ಈಗ ಅವನ ಹೆಸರೂ ಇಲ್ಲದಂತಾಗಿದೆ. ಆದರೇನು? ಈಗ ಲೋಕವೆಲ್ಲವೂ, ಭಾವನನ್ನು, ಬಹಿಷ್ಕರಿಸಿ ತಿರಸ್ಕರಿಸಿಬಿಟ್ಟಿದೆ. ಅದರಿಂದ, ಹೆದರಿ ಅವನೂ ಅಕ್ಕನೂ ನನ್ನನ್ನು, ಊರಿಂದ ಹೊರಡಿಸಿಬಿಟ್ಟರು. ಅಣ್ಣ, ಅವರು ಅದಕ್ಕೆ ಈಗ ಸಾವಿರಕಾರಣಗಳನ್ನು ತೋರಿಸಬಹುದು. ಅಂತೂ, ದೊಡ್ಡವರ—ಅದರಲ್ಲಿಯೂ ಬಂಧುಗಳ ಎಡೆಯಲ್ಲಿ ದಿನದೂಡುತ್ತಿರುವ ಬಡವರ ಬಾಳುವೆಯೆ ಬೇಡ.

ಚೌಪದಿ ॥ ಪರಿಚಯವು ಕಡಿಕಡಿಮೆಯಾದಲ್ಲಿ ಮಾನಂ ।
ಅರೆಗಲ್ಲಿಗೆಣೆಯಾಗಿ ನೋಯದೆಂತೆಂತುಂ ॥
ಪರಿಚಯವು ಹತ್ತಿಹತ್ತಿರಕೆ ಬಂದಂತೆ ।
ಕೊರಗುವುದು ಚಿಗುರಂತೆ ಮುಟ್ಟಲಾಮಾನಂ ॥ ೧ ॥

ಕುಸುಮ ಷಟ್ಪದಿ ॥ ಗುಟ್ಟುಗೊತ್ತಿರದಲ್ಲಿ ಗೌರವವನೊಳಗೊಳಗೆ ।
ಪಟ್ಟಿರಿಸುತಾಳಾಗುವುದುಚಿತ್ರವು ।
ಬಟ್ಟಬಯಲಿನ ಬಂಧುಗಳ ಚೌಕದಲಿ ಮೋರೆ ।
ಗೆಟ್ಟು ಮಾನವನೆಲ್ಲಿ ಬಚ್ಚಿಡುವುದು? ॥ ೨ ॥

ಅಂಧ:—(ಕೋಪಿಸಿ) ತಂಗಿ, ಏನು, ಭಾವನೂ ಹೀಗೆ ಮರೆಮೋಸಮಾಡಿದನೆ? ನಾವು ರಾಜನೆಂದೆಣಿಸಿ ಹಿರಿಯ ತಂಗಿಯನ್ನು ಕೊಟ್ಟು ಅವನನ್ನು ಮನ್ನಿಸಿದರೂ ಅವನ ಕುಟಿಲತೆ ಕುಂದುವುದಿಲ್ಲ. ಆ ರಾತ್ರಿಯ ಕೈಹಿಡಿಯದಿದ್ದರೆ, ಆರ್ಯನ ಬಿಸಿಲಬೇಗೆಯಿಂದ, ಇಷ್ಟರೊಳಗೇ ಅವನ ಗತಿ ಏನಾಗುತ್ತಿತ್ತೊ? 'ಹಾಕಿದ ಅಂಗಿ ಹಾರಿದರೆ ಹೋಗುವುದೆ?' ನಮ್ಮೊಡನೆ ನೆಂಟನಾಗಿದ್ದರೂ ಅವನ ಹುಟ್ಟುಗುಣವು ಹೇಗೆ ಅಳಿವುದು? ಅದಿರಲಿ, ಈ ತಾಯಿಯಾದ ಕಾಡಿನ ಗವಿಯೆಂಬ ಗರ್ಭದಲ್ಲಿ ಒಡಹುಟ್ಟಿ ಒಡನಾಡಿ ಒಬ್ಬಬುದ್ಧಿಯಿಂದ ಬಳೆದ ತಂಗಿ ರಾತ್ರಿ ಬದಲಾದಳು! ಅಷ್ಟೆ ಅಲ್ಲ, ದೊರೆತನದ ಉಬ್ಬಿನಲ್ಲಿ, ಅವಳಿಗೆ ಈಗ ಸಹೋದರಪ್ರೇಮವೂ

ಮಾಸಿಹೋಯಿತು!! ಇದನ್ನು ಲೋಕದ ಒಂದು ಕತೆ ನೆನಪಿಗೆ ತರುತ್ತಿದೆ. ಕೇಳು—'ಇಂದಿಗೆ ಎಷ್ಟೋ ವರ್ಷದಲು, ಕಡೆಹಳ್ಳಿಯೆಂಬಲ್ಲಿ ಒಬ್ಬ ಬ್ರಾಹ್ಮಣನಿದ್ದನು. ಅವನ ಮನೆಯನ್ನು ಹಲವರು ನೋಡದಿದ್ದರೂ ಅವನು ಒಬ್ಬನದನ್ನೂ ಬಿಡಲಿಲ್ಲ. ನಾಲ್ಕು, ತಪ್ಪಿದರೆ, ಐದು ದಿನಕ್ಕೊಮ್ಮೆ ಅವನ 'ಭವತಿಭಿಕ್ಷಾಂದೇಹಿ' ಪ್ರತಿಯೊಂದು ಮನೆಯಲ್ಲೂ ಆವೃತ್ತಿಯಾಗುತ್ತಿತ್ತು. ಅಕ್ಕಿಯು ಕಡಿಕಣ್ಣೊಂದು ಚೆಲ್ಲಿಹೋದರೂ, ಕಾಗೆಯು ಕೊಕ್ಕಿನಂತಿರುವ ಬೆರಳಿಂದ ಹೆಕ್ಕುತ್ತಿದ್ದನು. ಆಗ ನಗುತ್ತ ಅವನು 'ಲೋಕದಲ್ಲಿ ಬಹಳ ಮಂದಿ ಗಣಿತಶಾಸ್ತ್ರಪಾರಂಗತರಿದ್ದಾರೆ. ಆದರೆ, ಈ ಕಡಿಕಾಳಿಗೆ, ಇಂತಿಷ್ಟೆ ಬೆಲೆಯೆಂದು, ನಾನಲ್ಲದೆ ಯಾರೂ ಹೇಳಲಾರರು' ಅದಕ್ಕೆ ಮತ್ತೊಬ್ಬ ವಿದ್ಯಾರ್ಥಿ "ಅಯ್ಯಾ, ವೆಂಕಣ್ಣ, ನಾನು ಅಯ್ಯಗಳ ಮಠದಲ್ಲಿ ಕಲಿಯ ತೊಡಗಿ ಐದಾರು ವರ್ಷಗಳಾದುವು. ನಿನ್ನ ಪ್ರಶ್ನೆಗೆ ಉತ್ತರಗೊಡಲಿಕ್ಕೆ ಮಹಾಶಾಸ್ತ್ರಿಗಳೇನೂ ಬೇಡ. ಅದಿರಲಿ, ಉತ್ತರಹೇಳಿದರೆ, ನನಗೆ ಉಡುಗೊರೆ ಏನು?"

''ಬ್ರಾಹ್ಮಣ:—ಇದೇನು? ಮಜ್ಜಿಗೆಗೆ ಗತಿಯಿಲ್ಲ, ಮೊಸರಿಗೆ ಚೀಟು. ಉತ್ತರದ ಮೇಲಲ್ಲವೆ ಉಡುಗೊರೆ? ಹುಂ, ಚಿಂತೆಯಿಲ್ಲ. ಹುಡುಗರು ನಿಷ್ಕಾಮ ಕರ್ಮಕ್ಕೆ ಕೈಹಾಕುವುದು ಕಡಮೆ. ಸಂಸಾರಿಗಳಾಗತಕ್ಕ ಅವರು ನಿಷ್ಕಾಮಿಗಳಾಗಬಾರದೆಂದೆ ನನ್ನದೂ ಎಣಿಕೆ. ಇರಲಿ, ಉತ್ತರಹೇಳಿದರೆ ಸುಂದರವಾದ ಬಹುಮಾನವನ್ನೆ ಕೊಡುತ್ತೇನೆ. ಆದರೆ, ಅದನ್ನು ಹಾಗೆಹೀಗೆಂದು ತಿರಸ್ಕರಿಸದೆ ತಲೆಬಗ್ಗಿಸಿ ಅಂಗೀಕರಿಸಬೇಕು. ನಿನ್ನಂಥ ಹುಡುಗರೂ ನನ್ನ ವಿದ್ವತ್ತೆಗೆ ಕಪ್ಪುಹಚ್ಚಿ ಉಡುಗರೆಗೆ ಕೈಸೀಡುವುದಿದ್ದರೆ ನೋಡೋಣ." ಹುಡುಗನೇನೋ ಶ್ರೀಮಂತನ ಮಗನು. ಈ ಬಡವನು ಹೆಚ್ಚೇನೂ ಕೊಡಲಾರನೆಂದು ಅವನಿಗೆ ಗೊತ್ತಿತ್ತು. ಆದರೂ, ಹತ್ತಾಗಲಿ, ಒಂದಾಗಲಿ, ಉಡುಗೊರೆಯೆಂದರೆ, ಹುಡುಗರಿಗೆ ಒಂದು ಸಡಗರಿಕೆ. ಬ್ರಾಹ್ಮಣನ ಮಾತಿಗೆ ಹುಂಗುಟ್ಟಿದನು. ಇಬ್ಬರು ಗೃಹಸ್ಥರ ಎದುರಲ್ಲಿ ಹೊಡೆಗೈಯ ಆಣೆಗೈಯ ಪಂತವಾಯಿತು. ಬಾಲಕನು ಉತ್ತರವನ್ನು ನೀರಿನಂತೆ ಹೇಳಿಬಿಟ್ಟನು. ಮಧ್ಯಸ್ಥರು 'ಸೈಸೈ' ಎಂದರು. ಆಗ ಹುಡುಗನು ಕೈಹೊಯ್ದು "ಎಲೆ, ವೆಂಕಣ್ಣ, ಈಗೆಲ್ಲಿ ಉಡುಗೊರೆ" ಎಂದು ಚಾಳಿಸಿದನು. ಆಗ ಬ್ರಾಹ್ಮಣನು ನಗುತ್ತ

"ಊರುರು ಬಿಕ್ಕೆಬೇಡುವ ಬ್ರಾಹ್ಮನನ್ನು ಬೇಡಿಕಾಡುವ ನಿನಗೆ—ಲಕ್ಷಾಧಿಪತಿಗೆ ನಾಚಿಕೆ ಇಲ್ಲವೆ?" ಎಂದು ಕಟಕಿಯಾಡಿದನು.

"ಹುಡುಗ:—ಬೇಡಿದೆನೆ? ಮತ್ತೇಕೆ, ಈ ಪಂತದ ಹೊಂತಗಾರಿಕೆ? ಹೂಗೊಡುವಲ್ಲಿ ಹೂವಿನ ಎಸಳಾದರೂ ಕೊಟ್ಟೇ ತೀರಬೇಕು." ಎಂದು ಕೊನೆಯ ಮರುಮಾತಾಡಿದನು. ಮಧ್ಯಸ್ಥರೂ 'ಸರಿಸರಿ' ಎಂದರು. ವೆಂಕಣ್ಣನು "ಹೌದು, ಮಾತಿಗೆ ಮರೆಯಿಲ್ಲ. ಆದರೆ, ನನ್ನಲ್ಲಿ ಬೇರೆ, ಚೆಂಬಿನ ಕಾಸೂ ಇಲ್ಲವೆಂಬುದು ಎಲ್ಲರಿಗೂ ಗೊತ್ತು. ಈ ವರೆಗೆ ಸಾಕಿ ಸಂರಕ್ಷಿಸಿದ ಕನ್ಯಾರತ್ನವೊಂದುಂಟು. ಅದನ್ನು ಕೊಟ್ಟು ಮಾತಿನ ಮೈಲಿಗೆಯನ್ನು ಮಡಿಮಾಡುತ್ತೇನೆ." ಎಂದನು. ಮಧ್ಯಸ್ಥರು ಅಸ್ತುಗೊಟ್ಟರು. ಹುಡುಗನ ಮಾರುದ್ದದ ಕೈ ಗೇಣುದ್ದಕ್ಕೂ ನೀಡಲಿಲ್ಲ. ಉಕ್ಕುವ ನಾಲಗೆ ಮಿಕ್ಕಿ ಮಿಸುಕಲಿಲ್ಲ. ಕನ್ನಡಿಮೋರೆಗೆ ಇಬ್ಬನಿ ಮುಸುಕಿದಂತಾಯಿತು. ಮಾತಿಗೆ ತಪ್ಪಿ 'ಬರಕೊಟ್ಟ ಒಪ್ಪಿಗೆಯ ಕರಾರು ಎಲ್ಲಿದೆ?' ಎಂದು ಧಿಕ್ಕರಿಸುವ ಈಗಿನ ಲೋಕದ ನವನಾಗರಿಕತೆ ಅಂದು ಬಂದಿಲ್ಲ. ಆದರೆ, ಆ ಭಿಕ್ಷಾಪಾತ್ರದ ಜಲಧಾರೆಯಿಂದ ಮಲಿನವಾಗಿ ತೋರುವ ಕನ್ನೆಯ ಕೈಹಿಡಿಯಲಿಕ್ಕೆ, ಆಗರ್ಭಶ್ರೀಮಂತನಾದ ಆ ಹುಡುಗನಿಗೆ ಹೇಗೆ ಮನಸ್ಸು ಮೆಚ್ಚುವುದು? ಅಃ, ಈ 'ಕುಶಾಲುಕೋಳ'ವು ಯಾಕೆ ಬೇಕಿತ್ತು? ಎಂದು ಚಿಂತಿಸಿದನು. ಕಡೆಗೆ ಹೇಗಾದರೂ ಮದುವೆಯಾಯಿತು. ಹುಡುಗಿ ಗಂಡನ ಮನೆ ಹೊಕ್ಕರೂ, ತಂದೆ ಊರ ಮೇಲೇ ಇದ್ದನು. ಕೆಲಗಾಲವು ಕಳೆಯಿತು. ಒಂದುದಿನ ಮಧ್ಯಾಹ್ನದಲ್ಲಿ ಆ ಶ್ರೀಮಂತನ ಮಗನು ದೇವರ ಪೂಜೆಯಲ್ಲಿದ್ದನು. ಹೊರಗಣಿಂದ ಕೆಮ್ಮುವ ಸದ್ದು ಕೇಳಿಸಿತು. 'ಯಾರು? ನೋಡಿ ಬಾ' ಎಂದು ಹೆಂಡತಿಯನ್ನು ಕಳುಹಿದನು. ಹೆಂಡತಿ ಹೋಗಿ ಬಂದು 'ಯಾವುದೊ ಒಂದು ಬಿಕ್ಕೆಯ ಜೋಗಿ' ಎಂದು ಹೊರಗೆ ಕೇಳುವಂತೆ ಹೇಳಿದಳು. 'ಮಡಿಗೊಟ್ಟು ಬಿಡು ಹೇಳು' ಎಂದು ಗೃಹಸ್ಥನು ಹೇಳಿದೊಡನೆ ಆಕೆ ಹೊರಗೆ ಹೋದಳು. ಈ ಸಂವಾದವನ್ನು ಕೇಳಿದ ಬ್ರಾಹ್ಮಣನು "ಭವತಿ ಭಿಕ್ಷಾಂ ದೇಹಿ" ಎಂದು ಭಿಕ್ಷಾಪಾತ್ರೆಯನ್ನು ನೀಡಿದನು. ಅಷ್ಟರಲ್ಲಿ ಒಳಗಿಂದ ಗೃಹಸ್ಥನೂ ಬಂದು ನೋಡುತ್ತಾನೆ! ಯಾರು? ಮಾವನು! ಅಳಿಯನ ಎದೆ ಹಾರಿದಂತಾಯಿತು. ಕೋಪಿಸಿಕೊಂಡು "ಏನೆ, ಹುಬ್ಬಿನ ಕೂದಲು ಕಣ್ಣಿಗೆ ಅಡ್ಡಾಯಿತೊ? ಹೆತ್ತು ಬಾಲ್ಯವೊದಲ್ಗೊಂಡು ಹೊತ್ತು ಹೊರೆದ ದೈವಸ್ವ

ರೂಪನಾದ ತಂದೆಯನ್ನೆ ಮರೆತ ಮೇಲೆ, ನಿನ್ನ ಎದೆ ಕರಗಿ ಇನ್ನಾವ ಕಡೆಗೆ ಹರಿಯಲಿಕ್ಕಿದೆ? ಅದು ಮಂಜುಗಡ್ಡೆಯೆ ಸರಿ.

ಕುಸುಮ ಷಟ್ಪದಿ || ಇನನೊಡನೆ ಕೂಡಿ ನಗುವಾನಳಿನಿಯೊಂದಿಷ್ಟು
ನೆನೆವುದೇ ಹುಟ್ಟಿದ ಕೆಸರು ನೆಲವನು? ||
ಮನವಿಡದೆ ಬೆನ್ನು ಹಾಕುತ ಮೇಲಿನೋಳ್ಪುದೆಲೆ
ವನಿತೆ, ಅದು ನಿನ್ನಿಂದಲೇ ಕಲಿತುದೆ? || ೧ ||

ಚೌಪದಿ || ಹಡೆದು ಹೊರೆಯುತ ನಡೆಯಿಸುತ ನುಡಿಯ ಕಲಿಸಿ
ಬಡತನದ ಹೇಳಲಾಗದ ಕಷ್ಟ ಸೈಸಿ ||
ಹುಡುಕಿ ಗಂಡನ ಕೈಗೆ ಕೊಡೆ ಪುನರ್ಜನ್ಮ
ಪಡೆದವರವೋಲು ಮರೆತೆಯೆ ನಿನ್ನ ಕರ್ಮ? || ೨ ||

ತನ್ನ ಮನೆಯಲ್ಲಿ ಅಶನಧ್ವಂಸಕಾಗಿ
ಇನ್ನಿಲ್ಲಿ ಬಂದನೆಂದೆಣಿಸಿದೆಯೊ ನೀನು?
ನಿನ್ನನೇ ನಿಷ್ಕಾಮದಿಂ ಸಾಕಿದವಗೆ
ಅನ್ನಕೇಂ ಕಡಮೆ ನಾಡಿನ ಬಟ್ಟಲೊಳಗೆ? || ೩ ||

ಆಗ ವೆಂಕಣ್ಣನು "ಆಕೆಯನ್ನು ಯಾಕೆ ಬರಿದೆ ಬಯ್ಯುವೆ? ನನ್ನ ಬಡತನವನ್ನೊ, ಅಲ್ಲವೆ, ಅವಳಿಗೆ ಸರಿಯಾದ ಬಾಲ್ಯಶಿಕ್ಷಣವನ್ನು ಕೊಡಲಾರದ ನನ್ನನ್ನೊ ಬಯ್ಯಬೇಕು." ಎಂದನು. ಆ ಮೇಲೆ, ಮಗಳು ತಂದೆಯ ಕೈಕಾಲುಹಿಡಿದುಕೊಂಡು ಪಶ್ಚಾತ್ತಾಪಪಟ್ಟಳಂತೆ. ಹಾಗೆಯೆ ನಮ್ಮ ರಾತ್ರಿಯೂ ಈಗ ರೂಪಾಂತರವನ್ನೆ ಹೊಂದಿರುವಳು. ಎಂದಮೇಲೆ, ಲೋಕವು ನಮ್ಮ ಹಗೆಗಟ್ಟುತ್ತಿರುವುದು ಅಷ್ಟಿಷ್ಟೆಂದು ಬಣ್ಣಿಸುವುದು ಹೇಗೆ? "ನಮ್ಮವರೆಲ್ಲರೂ ನೀಚರು. ಅವರು ನಾಡಿಗೆ ಅಡಿಯಿಡಲೆ ಬಾರದು. ಅಷ್ಟೆ ಅಲ್ಲ, ಆಗಾಗ ಈ ಕಾಡಿಗೂ ಬಂದು, ಆ ನಾಡವರು ನಮ್ಮವರನ್ನು ಗುಂಡಿನ ಬಾಯಿಗೆ ಕಟ್ಟುವುದೂ ನ್ಯಾಯಸಮ್ಮತವು!" ಈ ಪ್ರಕೃತಿವಿರುದ್ಧವಾದ, ಅಸಹ್ಯವಾದ, ಅವರ ಉಪಟಳಗಳು ಲೆಕ್ಕಕ್ಕೆ ಸಿಕ್ಕದಷ್ಟು. ಅದು ಹೇಗೂ ಇರಲಿ, ಎಂದು ಸ್ಥೈರಿಸಿಕೊಂಡು ಹೆಣ್ಣುಗೊಟ್ಟು, ಈ ಹೊಸದೊರೆಯಿಂದ ನ್ಯಾಯವನ್ನು ನಿರೀಕ್ಷಿಸುತ್ತಿದ್ದುದು ಬೆಲೆಗೊಟ್ಟು ಹಾಯುವ ಎತ್ತನ್ನು ಕೊಂಡಂತಾಯಿತು. ಇರಲಿ, ಈ ವಿಷಯದಲ್ಲಿ, ಸರ್ವಪ್ರಯತ್ನವನ್ನಾದರೂ ಮಾಡಿ ಒಂದುಕೈ ನೋಡುವುದೆ ಸಿದ್ಧವು. ತಂಗಿ, 'ಕೊಟ್ಟಕೂಸು ಕುಲದಿಂದ ಹೊರಗೆ' ಎಂಬ ಗಾದೆಗೆ, ನಿನ್ನಕ್ಕನಾದ ಕತ್ತಲೆ ಆದರ್ಶವಾ

ದರೂ, ಅವಳಲ್ಲಿಯು ಬೇಸರವನ್ನು ನಿನ್ನಲ್ಲಿಡುವ ಅಲ್ಪಬುದ್ಧಿ, ನನಗೂ ಈ ನನ್ನ ಸಭ್ಯರಿಗೂ ಇರಲಾರದು. [ಒಡನೆಯೆ ಸಿಂಹರಾಜನ ಮುದುರಿದ ಕೇಸರವು ನೆಟ್ಟಗೆ ನಿಂತುದು. ಯಜ್ಞಕುಂಡದ ಎರಡು ಕಿಡಿಗಳೆಂಬಂತೆ ಕಣ್ಣುಗಳು ಮಿಣಿಮಿಣಿಸಿದುವು. ಮೇಲೆ ಹೊಮ್ಮುವ ಹೊಗೆಯಂತೆ ನಿಡುಸುಯ್ಲು ಬುಬ್ಬುಸ್ಸೆಂದಿತು. ದರ್ಭಾದಿಗಳಲ್ಲಿ ಆವರಿಸಿ ಅವ್ವಳಿಸುವ ಸಪ್ತಜಿಹ್ವ (ಅಗ್ನಿ) ನಂತೆ, ಮಿಂಚಿನ ಕೇಸರಗಳು ಚಳಚಳಿಸಿದುವು. ತೇಜಸ್ವಿಯು ದ್ವೇಷಿಗಳಾದರೂ ದಾರಿಗಾಣಬೇಕಾದರೆ, ಅವನ ಸಹಾಯವೇ ಬೇಕೆಂಬಂತೆ ನೋರೆ ಕಿಚ್ಚಿನ ಅಚ್ಚಾಗಿತ್ತು. ಹಗೆಗಳನ್ನು ಹೊಕ್ಕು ಹೊಡೆಯಬೇಕೆಂಬ ಮಾತಿಗನುಸಾರವಾಗಿ, ತೇಜಸ್ವಿ ಆ ಸಿಂಹರಾಜನ ಮುಖವನ್ನು ಸೇರಿರಬಹುದು. ಹಾವಿಗೆ ಹಾಲೆರೆದರೆ ವಿಷವೆ ಏರುವುದು; ನೀಚರಿಗೆ ವಿದ್ಯಾಭ್ಯಾಸದಿಂದ ದುರ್ಬುದ್ಧಿಯೆ ಪ್ರಬಲವಾಗುವುದು; ಹಾಗೆಯೆ, ಆ ಘಾತುಕ ಜಂತುಗಳಿಗೆ ತೇಜಸ್ಸಿನ ಕಣ್ಣಿನಿಂದಲೂ ಕಾಡುದಾರಿಯೆ ಕಾಣವುದು.]

ಸಿಂಹರಾಜ:—ಒಡೆಯನೆ, ತನ್ನ ಶಕ್ತಿಯನ್ನೆಲ್ಲ, ಪ್ರಜೆಗಳಾದ ನಮ್ಮನ್ನು ಕಷ್ಟರೆಯಿಸಿ ನಡೆಯಿಸುವುದಕ್ಕಾಗಿ ಉಪಯೋಗಿಸಿ ತ್ಯಾಗರಾಜನಾಗಿರುವ ನಿನ್ನ ಉದಾರಭಾವವನ್ನು ಎಷ್ಟು ಹೊಗಳಿದರೂ ಕಡಮೆಯೆ. ಇರಲಿ, ಜೀವದ ಬೇನೆ ದೇಹಕ್ಕೆ ತಟ್ಟುವಂತೆ ದೊರೆಯ ಅವಮಾನವು ಪ್ರಜೆಗಳಿಗೂ ಮೊಸಲು. ಈಗ, ಲೋಕದಿಂದಾಗಿ ನಿನಗೆ ಅಪಮಾನವೆಂದರೆ, ಕತ್ತಲೆಯ ಮೂಲಕವಾಗಿ. ಆ ಕತ್ತಲೆಯೆ ನಮ್ಮೆಲ್ಲರ ಕಣ್ಣಿಗೆ ಕಾಡಿಗೆ. ಅದು ಎಷ್ಟೆಷ್ಟು ಅಳಿವುದೊ, ಅಷ್ಟಷ್ಟೂ ನಮ್ಮ ನೋಟಕ್ಕೆ ಕಾಟವು. ಆ ಕಾಟವೆ ಗತಿಗೆಡಿಸುವ ಮಂತ್ರದ ಮಾಟವು. ಹಾಗೆ ಗತಿಗೆಟ್ಟರೆ, ನಮ್ಮ ಇನಿಬರ ಬಾಯಿಯೂ ಕಟ್ಟಿತು. ಆ ಮೇಲೆ, ನಮ್ಮನ್ನು ಒಂದು ನಾಡನಾಯಾದರೂ ಲೆಕ್ಕಿಸದು. ಎಂದಮೇಲೆ, ಈಗಿನ ನಿನ್ನ ಅವಮಾನವೆಂಬುದು, ನಮ್ಮ ಉದ್ಧಾರದ ಉದ್ದೇಶದಿಂದ ಹುಟ್ಟಿದೆಯೆಂದಾಯಿತು. ಈ ತಲೆಹೋಪಾಗ ಬಾರದ ಕೈಯನ್ನು ಕೇಸರವೋಸರಿಸುವಾಗ ನೀಡುವುದೆ? ಬೆನ್ನಿಗೆ ಬಡಿದರೆ 'ಭಳಿರೆ' ಎನ್ನುವ ಮೂಢನೂ 'ಹೊಟ್ಟೆಗೆ ಹೊಡೆದರೆ ಹಿಟ್ಟು' ಎಂದು ಭಾವಿಸುವನೆ? ಆ ಬಿಳಿಮೋರೆಯ ರಾಜತ್ವಕ್ಕೆ ಮರುಳಾಗಿ, ನಮ್ಮ ಕರಿಮಣಿಯ ರಾತ್ರಿಯನ್ನು ಅವನ ಕೈವಿಡಿಸಿದುದೆ ದೊಡ್ಡ ತಪ್ಪು. ಆರ್ಯಮತದವರಾದರೂ, ನಮ್ಮಲ್ಲಿ

ಎದುರೆದುರು ದಂಡೋಪಾಯದಿಂದ ಹೋರಾಡುತ್ತಿದ್ದರು. ಈ ನೀಚನು, 'ಒಳಹೊಕ್ಕುಹೊರಕಡಿವ' ಮರೆಮೋಸದ ಭೇದವನ್ನೆ ಪ್ರಯೋಗಿಸಿದ್ದಾನೆ. ಅದರಿಂದ ಲೋಕಮತವನ್ನೂ, ಈ ರಾಜಮತವನ್ನೂ ಖಂಡಿಸಿ, ನಮ್ಮ ಕತ್ತಲೆಯ ರಾಜ್ಯವನ್ನೆ ಅಖಂಡವಾಗಿ ಸ್ಥಾಪಿಸುವುದು ಆದ್ಯಕರ್ತವ್ಯವು. (ತಿರುಗಿ) ಪ್ರಿಯರಾದ ವ್ಯಾಘ್ರ ಪ್ರಮುಖರೆ, ನಮ್ಮೊಳಗೆ, ಮತಭೇದಗಳು ಇದ್ದರೂ ಇರಬಹುದು. ಅದು ಪ್ರಕೃತಿಯ ಕಟ್ಟಳೆ. ಮರಗಳು, ಕುಂಜಗಳು, ಗವಿಗಳು ಹಲವಾದರೂ, ನಮ್ಮ ನೆಲೆಮನೆಯಾದ ಈ ಕಾಡೊಂದೇ ಅಲ್ಲವೆ? ಅದರಿಂದ, ಎಲ್ಲರೂ ಒಕ್ಕಟ್ಟಾಗಿ ಮೊದಲು ಲೋಕವನ್ನೂ ನಕ್ಷತ್ರಪತಿಯನ್ನೂ ಬಗ್ಗುಬಡಿಯಬೇಕು.

ವ್ಯಾಘ್ರ:—(ಭೂಮಿ ಬಾಯಿಬಿಡುವಂತೆ ಬಾಯಿಬಿಟ್ಟು) ಸಿಂಹರಾಜನೆ, ಅದಕ್ಕೇನು ಸಂದೇಹವು? ಆ ನಾಡವರು, ನಮಗೆ ಕೊಡುತ್ತಿರುವ ಕೋಟಲೆಯೆಂದರೆ ಕೋಟಿ ಕೋಟಿ. ನಮ್ಮ ಮೃಗಜಾತಿಗೆ ಸೇರಿದ, ನಮ್ಮ ಹಲವು ಮಂದಿ ಬಂಧುಬಾಂಧವರನ್ನು, ಮೊದಲೆ ಸೆರೆಯಲ್ಲಿಟ್ಟವರು ಯಾರು? ಪಾಪ ಬಹುಕಾಲ ಮೊದಲ್ಗೊಂಡು ಮನಮೆಚ್ಚಿದಂತೆ ಪಳಗಿಸಿ, ಸ್ವಾತಂತ್ರ್ಯದ ದೈವೀಪ್ರಸಾದವನ್ನೆ ಮರೆಯಿಸಿ, ಅವರನ್ನು ಕೈಮರಿಗಳನ್ನಾಗಿ ಮಾಡಿದವರಾರು!? ಎಲ್ಲ ಆ ನೀಚಲೌಕಿಕರೆ. ಕಡೆಗೆ, ಆ ನಮ್ಮವರಿಗೆ 'ನಾಡಜಂತುಗಳು' ಎಂಬ ಹೆಸರಿಟ್ಟಿದ್ದಾರೆ. ಆದರೆ, ಆ ನಾಡಲ್ಲಿಯೂ ಅವರಿಗೆ ಇನ್ನೂ ಬಿಡುಗಡೆ ಇಲ್ಲ. ದನ, ನಾಯಿ, ಒಂಟೆ, ಕುದುರೆ ಮೊದಲಾದ ನಮ್ಮವರು ಅವರ ಊಳಿಗವನ್ನು ಮಾಡುತ್ತಿರುವುದೆಂದರೇನು! ಇರಲಿ, ಸ್ವಾತಂತ್ರ್ಯವಾದರೂ ಇದ್ದರೆ, ಮೆಣಸಿನ ಕಾರವನ್ನು ಸಕ್ಕರೆಯ ಸಿಹಿಯಿಂದ ಸೈಸುವಂತೆ ಇರಬಹುದಿತ್ತು. ಅದೊಂದಕ್ಕೂ ಎಡೆಯಿಲ್ಲ. ಇನ್ನು ಆ ವಂಚಕರಲ್ಲಿ ಹಲವರು 'ಗೋವುಗಳೆಂದರೆ ನಮ್ಮ ದೇವತೆಗಳು' ಎಂದು ಹೇಳಿಕೊಳ್ಳುತ್ತಾರೆ. ಆದರೆ, ಪಾಲಿನ ವಿಷಯವು ಬಂದೊಡನೆ, ಆ ದೇವತೆಗಳ ಕರುಗಳ ಕೊರಳಿಗೆ ಹಗ್ಗವೆ ದೇವತಾರಾಧನೆ. ಇಷ್ಟಲ್ಲದೆ 'ಗೋಹತ್ಯಕಾರರು' ಎಂದು ನಮ್ಮಲ್ಲಿ ಬೇರೊಂದು ಆಕ್ಷೇಪವಿದೆ. ಅದರಿಂದ, ನಮ್ಮನ್ನು, ಗುಂಡಿನ ಬಾಯಿಗೆ ಕಟ್ಟುತ್ತಾರೆ. ಆಗಾಗ ನಮ್ಮ ಈ ಮನೆಯನ್ನು ನುಗ್ಗಿ ಸೂರೆಮಾಡುವುದಲ್ಲದೆ, ನಮ್ಮ ಮರಿಮಕ್ಕಳನ್ನೂ ಹಿಡಿದುಕೊಂಡು ಹೋಗುತ್ತಾರೆ. ನಮ್ಮ ಈ ಕಾಡೆಂಬ ಮನೆಯನ್ನು ಮುರಿದು ತಮ್ಮ ಮನೆಗಟ್ಟುತ್ತಾರೆ. ಇದೆಂಥ ಅನ್ಯಾಯ?

ಬಂಧುಗಳನ್ನು ಮರೆತು ಹಗೆಗಳಲ್ಲಿ ಆಳಾಗಿ, ನಮ್ಮ ವಂಶಕ್ಕೇ ಕಳಂಕವನ್ನು ತರುವ ಆ ದನಗಳನ್ನು ಶಿಕ್ಷಿಸುವುದು ನಮ್ಮದೆ ಧರ್ಮವು. ಹೊಳೆನೀರಿಗೆ ಡೊಣ್ಣೆಯ ಅಪ್ಪಣೆಯೇನು? ಅದೂ ಬೇಡ. ಅವರೊಳಗೇ ಹಲವರು ಆ ದೇವತಾಸ್ವರೂಪಿಗಳಾದ ಗೋವುಗಳನ್ನು ಕಡಿದು, ಬಾಯಿಗೆ ಗಿಡಿಯುತ್ತಿರುವು ದನ್ನು, ಆ ಧರ್ಮರಕ್ಷಕರು ಯಾಕೆ ಕಂಡೂ ಕಾಣದಂತಿರುವುದು? ಅದರಿಂದ, ಅವರ ಧರ್ಮಾಚರಣೆಯೆಂದರೆ 'ಬಗ್ಗಿದವನಿಗೆ ಒಂದು ಗುದ್ದು ಹೆಚ್ಚು' ಎಂಬಂತೆಯೆ ಸರಿ. ಅಂಥ ದುಷ್ಟಲೋಕವನ್ನು ಮುರಿದುಬಡಿಯಲೆ ಬೇಕು. ಅದಕ್ಕೆ ಹಲವರೇಕೆ? ಅಪ್ಪಣೆಯಾದರೆ, ಕೂಡಲೆ ಊರಿಗೆ ದಾಳಿಯಿಟ್ಟು ಆ ಮನುಷ್ಯರನ್ನು ಕೊಂದುಕೂಗಿ ತಿಂದುತೇಗಿದ ಜಯಭೇರಿಯೊಡನೆ ಬರುತ್ತೇನೆ.

ಜಂಬುಕ:—ಜೀಯ, ನಿಮ್ಮ ಪಣೆಗಟ್ಟಿನ ಎಣಿಕೆಗೆ ಎಣೆಯಿಲ್ಲ. ಆದರೂ ಹಿತ ದೃಷ್ಟಿಯ ನನ್ನದೂ ಒಂದು ಅಭಿಪ್ರಾಯವಿದೆ. ಆನೆಗರುಳಿನ ಸವಿ ಬೇರೆ. ಆಡಿನ ಅಡಗಿನ ಕಂಪು ಬೇರೆ. ಅವರಂತೆ, ನನ್ನ ಮಾತಿನಲ್ಲಿಯೂ ಬೆಲೆ ಯಿದ್ದರೆ ಕೇಳಬಹುದಷ್ಟೆ.. ಅಪ್ಪಣೆಯಾದರೆ ಹೇಳುತ್ತೇನೆ.

ಸಿಂಹ:—ಹುಂ, ಅದೇನು?

ಜಂಬುಕ:—ಬುದ್ಧಿ, ನಿಮ್ಮ ಉದ್ಯೋಗಶಕ್ತಿಗಳ ಬಲುಮೆ ತಕ್ಕಷ್ಟುಂಟು. ಆದರೆ, ಶಕ್ತಿ ನೆಲೆಗೊಳ್ಳಬೇಕಾದರೆ, ಯುಕ್ತಿಯೋಚನೆಗಳ ಅಡಿಗಟ್ಟು ಅಚ್ಚುಗಟ್ಟಾ ಗಿರಬೇಕು. ಹೇಗೆಂದರೆ—ಎಣಿಕೆಯ ನೂಲನ್ನು ಯುಕ್ತಿಯ ಮಗ್ಗಕ್ಕೆ ಸುತ್ತುವ ಮೊದಲೆ, ಅದು ಗಟ್ಟಿಯಾಗಿದೆಯೊ ಎಂದು ಪರೀಕ್ಷಿಸಬೇಕು. ಆ ಉಪಾಯದ ಮಗ್ಗವನ್ನು, ಶಕ್ತಿಗನುಸಾರವಾಗಿ ಉದ್ಯೋಗದ ಬಟ್ಟೆ ಯಲ್ಲಿ ಎಸೆಯಬೇಕು. ಹಾಗಾದರೇ ಬಟ್ಟೆ ಬಯಲಿಗೆ ಬಂದು ಮಾನಕ್ಕಾ ಗುವದು. ಇದು ಸ್ವಕಪೋಲಕಲ್ಪಿತವಲ್ಲ; ನಿಮ್ಮ ಪೂರ್ವಿಕರ ಪ್ರಿಯ ಮಂತ್ರಿಗಳಾಗಿದ್ದ, ನನ್ನ ಹಿರಿಯರಾದ ಕರಟಕದಮನಕರ ಬಾಯಿಂದ ಬಿದ್ದ ಬಂಗಾರದ ಮಾತು. ಅದರಿಂದ, ಎಲ್ಲದಕ್ಕೂ ತಳಗಲ್ಲಾದ ಯುಕ್ತಿಯನ್ನೆ ಮೊದಲು ಪರೀಕ್ಷಿಸಬೇಕು.

ವ್ಯಾಘ್ರ:—ಆಗಲಿ, ಅದೇನು ಪರೀಕ್ಷೆ?

ಜಂಬುಕ:—ಬುದ್ಧಿ, ಹೇಳುತ್ತೇನೆ. ಆದರೆ 'ಹಿಂದಿದ್ದರೆ ಕೊತ್ತು, ಮುಂದಿದ್ದರೆ ತುತ್ತು' ಎಂಬುದು ಹೆಚ್ಚಾಗಿ ಈಗಿನ ಅರಸರ ರೀತಿ. ಅದರಿಂದ, ಕಂಡು ದನ್ನು ಕಂಡಂತೆ ಹೇಳಲಿಕ್ಕೆ ಸ್ವಲ್ಪ ಭಯವಾಗುತ್ತದೆ.

ಸಿಂಹ:—ಅದೇನೂ ಇಲ್ಲ. ನಿನ್ನ ಪೂರ್ವಜರಂತೆ, ನೀನೂ ಬಗೆಬಾಯಿಗಳಿಂದ ಸಹಾಯಕನಾಗಲೇ ಬೇಕು. ಕೆಲಸದ ಬಂಡಾರಕ್ಕೆ ಎಣಿಕೆಯೆ ಬೀಗದ ಕೈಯಲ್ಲವೆ?

ಜಂಬುಕ:—ಇದೀಗ ಕೋಲುಬೇಲಿಯಿಲ್ಲದ ರಾಜಮಾರ್ಗವು. ಕೇಳು. ಮೊದಲು ನಮ್ಮೆಣಿಕೆಯನ್ನೆ ಬಲಪಡಿಸಿಕೊಳ್ಳಬೇಕು. ಎಂದರೆ—ಆಡಳಿತದ ರೀತಿ, ಪ್ರಜೆ ಗಳೆಲ್ಲರಿಗೂ ಮೆಚ್ಚಿಕೆಯಾಗಿರಬೇಕು. ಮೇಲಾಳುಗಳಿಗೆ, ಎಲ್ಲರಲ್ಲಿಯೂ ಸಮದೃಷ್ಟಿಯಿದ್ದರೇ ಅದು ಸಾಗುವುದು. ಹಾಗಿಲ್ಲದೆ, 'ಈ ಕೆಲಸದಲ್ಲಿ ಮಾತ್ರ ನೀವು ನಮಗೆ ಸಹಾಯಕರಾಗಬೇಕು' ಎಂದರೆ, ಆ ಕೀಳುತರಗತಿ ಯವರು ಒಪ್ಪುವರೆ? ಕಷ್ಟಕಾಲದಲ್ಲಿ ಕೈಗೊಟ್ಟವನನ್ನು, ಇಷ್ಟವೊದಗಿದಾಗ, ಸಮ್ಮಾನದ ಹಿಟ್ಟಾಗಿಸಬಾರದು. ಐಕಮತ್ಯವೆಂಬುದು, ಒತ್ತಾಯದಿಂದ ಕಡೆ ಸಾಗದು. ಒಳಗೊಳಗಿನ ಬಿರುಕಿಗೆ ಮಣ್ಣುಮೆತ್ತದೆ, ಮೇಲುಮೇಲಿಂದ ಸಾರಣೆಮಾಡಿದರೆ ಹೇಗಾದೀತು? ನಿನ್ನ ಉದಾರಮತದಂತೆ, ದೊರೆಯಾದ ಅಂಧಕಾರನ ಅಭಿಪ್ರಾಯವೂ ಇರುವುದಾದರೆ ಕಾರ್ಯಸಿದ್ಧಿ ಕೈಗೆ ಬಂದಂತೆ ಯೆ ಸರಿ.

ಅಂಧಕಾರ:—ಹೌದು, ನನ್ನೊಳಗಿನ ಪ್ರಜೆಗಳೆಲ್ಲರೂ, ತಾಯಮಡಿಲ ಮಕ್ಕಳಂತೆ, ಅವರವರ ಯೋಗ್ಯತಾನುಸಾರವಾಗಿ, ಏಕರೀತಿಯಿಂದ ಸುರಕ್ಷಿತರಾಗಬೇಕು.

ವ್ಯಾಘ್ರ:—(ಕೋಪಿಸಿ) ದೊರೆಯೆ, ಭೇದಬುದ್ಧಿಯ ಬೀಜವಾದ, ಈ ನರಿಯ ಮಾತಿಗೆ ಏನೆಂದು ಹೇಳಬೇಕು! ಸಮಭಾವವೆಂಬುದು, ನಮ್ಮಲ್ಲಿ ಈಗಲ್ಲ ಆಗಲ್ಲ; ಆದಿ ಯಿಂದಲೆ ಹುಟ್ಟಿರುವುದು. ಲೋಕದ ಆ ಪಕ್ಷಪಾತಬುದ್ಧಿಯ ನಿಗ್ರಹ ಕ್ಕಾಗಿಯೆ, ನಾವು ಇಷ್ಟೆಲ್ಲ ಯೋಚಿಸುವುದು. ಪ್ರಜೆಗಳಿಗೆ ಅಸಂತೋಷ ವುಂಟಾಗಬಾರದೆಂದು, ನಾವು ಕೈಲಾದಷ್ಟು ಪ್ರಯತ್ನಿಸುತ್ತೇವೆ. ಸುಲಭ ವಾಗಿ ಒದಗತಕ್ಕ ಕಾಡಜಂತುಗಳನ್ನೂ ಬಿಟ್ಟು ನಾಡವುಗಳನ್ನೆ ತಿನಿಸಿಗಾಗಿ ಆರಿಸುವುದು ಮತ್ತೇಕೆ? ನನ್ನಾಕೆ, ಈ ಪ್ರಜೆಗಳ ಹಿತಕ್ಕಾಗಿ, ಹುಟ್ಟಿದ

ಮರಿಯನ್ನಾದರೂ ತಿಂದು ಹೊಟ್ಟೆಹೊರೆಯುತ್ತಾಳೆಂಬುದು ಜಗತ್ಪ್ರಸಿದ್ಧವಾಗಿದೆ. ಇದಕ್ಕಿಂತಲೂ ಅಧಿಕವಾದ ಪ್ರಜಾವಾತ್ಸಲ್ಯವೆಂದರೇನು? ಇನ್ನು, ಒಂದೊಂದು ಕಷ್ಟಕಾಲಗಳಲ್ಲಿ, ಇಂಥ ಮುಂದಾಳುಗಳ ರಕ್ಷಣೆಗಾಗಿ ತಮ್ಮ ಮೈಯ್ಯನ್ನಾದರೂ ಕೊಟ್ಟು, ಅದರಿಂದ, ನಮ್ಮ ಸಮಾಜೋದ್ಧಾರದ ಕೀರ್ತಿಯನ್ನು ಕಟ್ಟಿಕೊಳ್ಳುವುದು, ಹಿಂದಾಳುಗಳ ಧರ್ಮವು. ಇಂಥ ದೃಷ್ಟಾಂತವು ಆ ಊರಲ್ಲಿಯೂ ಬೇಕಾದಷ್ಟಿದೆ. ಎಂದಮೇಲೆ, ಸಂದೇಹದ ಸೆರೆಯೂ ಇಲ್ಲದೆ, ಈ ಜಂಬುಕ ಬಡಗಿ, ಈ ಅಯಂವಿಶೇಷದ ಪ್ರಶ್ನೆಯ ಉಳಿಯನ್ನು, ಹೆಟ್ಟಿದುದೇಕೆ?

ಕಪಿ:—(ಮರದಿಂದ) ಮಹನೀಯರೆ, ಒಂದಿಷ್ಟು, ಮೇಲೆ ಕಣ್ಣಿಟ್ಟು ಕಿವಿಗೊಡಿರಿ. ನಮ್ಮ ನರಿಯಣ್ಣನ ಪ್ರಶ್ನೆ ಯಥಾರ್ಥವಿದೆ. ಹೊರಗಿನವರಿಗೆ, ಹೊಕ್ಕು ನೋಡದೆ, ಒಳಗಿನ ಗುಟ್ಟು ಗೊತ್ತಾಗದು. ಅದರಿಂದ, ಬಡವರೆ ಅಧಿಕವಾಗಿರುವ ಇಲ್ಲಿಯ ಪ್ರಜಾಸಮೂಹದ ಹಿತಚಿಂತನೆಮಾಡುವುದಿದ್ದರೆ, ನರಿಯಣ್ಣನ ಮಾತನ್ನು ಚೆನ್ನಾಗಿ ಲಕ್ಷಿಸಬೇಕು. ಹುಲಿಯ ಹೊಟ್ಟೆಪಾಡಿನ ಈ ಮಾತು ಹಿತಕರವಲ್ಲ. ಅವನು ನಾಡಿಗೆ ಹೋಗುವುದು ನಾಲಗೆಯ ಸವಿಗಲ್ಲದೆ, ಈ ಪ್ರಜಾವಾತ್ಸಲ್ಯದಿಂದ ಅಲ್ಲವೆಂಬುದಕ್ಕೆ ಬೇಕಷ್ಟು ದೃಷ್ಟಾಂತಗಳುಂಟು. ಅವನ ಆಕೆಯೂ ಮರಿಯನ್ನು ಮುಕ್ಕುವುದು ಬಾಳಂತಿಮದ್ದಿಗಲ್ಲದೆ, ನಮ್ಮ ಒಳ್ಳಿತಕ್ಕಲ್ಲವೆಂಬುದನ್ನು ಹೇಳಬೇಕಾಗಿಲ್ಲ. ಸರ್ವಸಮಭಾವದವನಾದರೆ, ಈ ಹುಲಿ ತಮ್ಮವರನ್ನು ಯಾಕೆ ಮುಟ್ಟುವುದಿಲ್ಲ? ಇವನು, ಅಷ್ಟು ನಿಷ್ಪಕ್ಷಪಾತಿಯಾದರೆ, ನಾನೇಕೆ ಮರದಿಂದ ಮರಕ್ಕೆ ಲಂಘಿಸುತ್ತಿರುವುದು? ಹಕ್ಕಿಗಳು ನೆಲಮುಟ್ಟದೆ ಆಕಾಶದಲ್ಲೆ ಹಾರುತ್ತಿರುವುದಾದರೂ ಯಾಕೆ? ಈ ಬಗೆಯ ಹಾವಳಿಯನ್ನು ಸೈರಿಸದೆಯೆ, ದನಮುಂತಾದುವು, ಮೊದಲೆ ನಾಡನ್ನು ಸೇರಿದುವು. ಇದಕ್ಕಾಗಿಯೆ, 'ದೇಶಾಂತರಹೋದರೂ ಸ್ವಾತಂತ್ರ್ಯವಿರಬೇಕು' ಎಂದು ಆಗಾಗ ಗೋಳಿಡುತ್ತಿರುವುದು. ಆದರಿಂದ, ಮುಖಂಡರಾದವರು, ಇನ್ನಾದರೂ, ಈ ಹೊಟ್ಟೆಬಾಕತನಕ್ಕೆ ಅಡ್ಡಬಾರದಿದ್ದರೆ, ಎಲ್ಲವೂ ಗಾಳಿಮಾತಾಗುವುದು. [ಆ ಮಾತನ್ನು ಕೇಳುವ ಮೊದಲೆ ಹುಲಿಗೆ ಮಿತಿಮೀರಿದ ಸಿಟ್ಟೆದ್ದಿತು. ನರಿಯ ಮೇಲಿನ ಕೋಪದ ಕಿಡಿ ಕಪಿಯಲ್ಲಿ ಭುಗಿಲೆಂದಿತು. ಮಾಡುವುದೇನು? ಮಂಗನ ಮನೆ ಭದ್ರವಾಗಿತ್ತು. ಏರಿದ ಸಿಟ್ಟು ಪ್ರತಿಕ್ರಿಯೆಯಿಂದಲೆ ತಣಿದು

ಇಳಿಯಬೇಕಷ್ಟೆ. ಮೊದಲು ಕೈ, ಅದು ಮುಟ್ಟದಿದ್ದರೆ ನಾಲಗೆಯಾದರೂ ನೀಡುವುದು ನೀಚರ ಸ್ವಭಾವವು.]

ಹುಲಿ:—(ಗುಡುಗುಡಿಸಿ) ಅಃ, ನಿನ್ನ ನೆತ್ತರನ್ನು, ಈಗಲೆ ಕುಡಿಯಬೇಕಿತ್ತು!

ಕಪಿ:—ಉಃ, ಏನುಮಾಡಲಿ, 'ಕೈನಿಲುಕದಷ್ಟು ದೂರವಾಯಿತಲ್ಲ' ಎಂದಲ್ಲವೆ ಚಿಂತೆ? ಇದಕ್ಕೇ ನಾವು ಇಷ್ಟು ಎತ್ತರದಲ್ಲಿರುವುದೆಂದು ಗೊತ್ತಾಯಿತೆ?

ಹುಲಿ:—ಆಗಲಿ, ನೀನೆಲ್ಲಿ ಹೋಗುವೆ? ನೋಡೋಣ.

ಕಪಿ:—ಮತ್ತೆಲ್ಲಿ? ಮರದಿಂದ ಮರಕ್ಕೆ. ಚೆನ್ನಾಗಿ ನೋಡಬಹುದು.

ಹುಲಿ:—ಏನು, ಈ ಮರಕ್ಕೆ ಹತ್ತಕೂಡದೊ?

ಕಪಿ:—ಒಂದುವೇಳೆ ಹತ್ತಿದರೂ, ನನ್ನಂತೆ ಹಾರಕೂಡದು.

ಹುಲಿ:—ಇರಲಿ; ನಮ್ಮದೆಲ್ಲ ಅನ್ಯಾಯವು. ಆ ಮನುಷ್ಯರು ಸೊಂಟಕ್ಕೆ ಹಗ್ಗ ಹಾಕಿ, ಕೇರಿಕೇರಿಗಳಲ್ಲಿ ನಿಮ್ಮನ್ನು ಕುಣಿಸುವುದು ನ್ಯಾಯವಷ್ಟೆ.

ಕಪಿ:—ಸೊಂಟಕ್ಕೆ ಹಗ್ಗಹಾಕಿದರೂ, ನಿಮ್ಮಂತೆ ಕೊರಳಿಗೆ ಬಾಯಿಹಾಕುವ ಅಪಾಯವಿಲ್ಲವಲ್ಲವೆ? ಹುಟ್ಟುಗುರುಡನಿಗಿಂತ ಒಕ್ಕಣ್ಣನಾಗಿರುವುದೆ ವಾಸಿ. [ಈಗ ವ್ಯಾಘ್ರನ ಮನಸ್ಸು 'ಮುಯ್ಯಿಗೆ ಎಡೆ ಎಲ್ಲಿ?' ಎಂದು ಹುಡುಕುತ್ತಿತ್ತು. ಆ ಮರದ ತೊಗಟೆ ನುಣುಪಾಗಿಯೂ, ಉಗುರುನಾಟದಂತೆ ಗಟ್ಟಿಯಾಗಿಯೂ ಇದ್ದುದರಿಂದ ಹತ್ತಲಿಕ್ಕೂ ಸಾಧ್ಯವಿಲ್ಲ. ಆದಕಾರಣ ಕೈಯೂ ಇಲ್ಲ ಬಾಯೂ ಇಲ್ಲ. ಮರದ ಬುಡವನ್ನೆಲ್ಲ ಕೀರಿ ಎಡೆಗಾಣದೆ ಸಿಟ್ಟು ತಿರುಗಿತು. ಆಮೇಲೆ ಅದು ಎಲ್ಲಿ ಹೊಗಬೇಕು? ಬಾದರಾಯಣಸಂಬಂಧ ಹಿಡಿದು, ಹೀಗೆ ಚರ್ಚೆಗೆ ಮೊದಲುಮಾಡಿದ ತನ್ನಲ್ಲೆ ಆಸಿಟ್ಟು ಜರಬಹುದೆಂದು ನರಿ ಊಹಿಸಿತು. ನರಿಯ ಕಲಿಕೆಗೆ ಬೆನ್ನುಂಟೆ?]

ಜಂಬುಕ:—ಹುಲಿಯಣ್ಣ, ಬಾವಿಯ ಕಪ್ಪೆಯಂತಿರುವ ಈ ಮರದ ಮಂಗನ ಮಾತಿಗೆ ಬೆಲೆಯುಂಟೆ? ಮೇಲಾಳುಗಳ ವಿಚಾರವು, ಕೀಳಾಳುಗಳೆಲ್ಲರಲ್ಲಿಯೂ ಸರಿಯಾಗಿ ಹಬ್ಬುವುದರಿಂದ, ಅದು ಮೆಲ್ಲಮೆಲ್ಲನೆ ಜರಗಬೇಕೆಂಬುದು ಖಂಡಿತವು. ಆದರೆ, ಸ್ವಾರ್ಥದಲ್ಲಿ ಮಾತ್ರ ಕಣ್ಣಿರುವ ಇಂಥ ಅಲ್ಪರಿಗೆ ಅದು ನಿಮ್ಮ

ದುರುದ್ದೇಶವೆಂದು ತೋರಬಹುದು. 'ಮನೆಕಟ್ಟಿದವನೆ ಬಲ್ಲ, ಮದುವೆಮಾಡಿದವನೆ ಬಲ್ಲ' ಎಂಬ ನಾಡವರ ಮಾತಿನಂತೆ, ಯಜಮಾನಿಕೆಯ ಕಷ್ಟವನ್ನು ಬಲ್ಲವರೆ ಬಲ್ಲರು. ಇಂಥ ಅಲ್ಪರ ಅಪವಾದಗಳನ್ನು, ನಿಮ್ಮಂಥ ದೊಡ್ಡವರು ಮನಮುಟ್ಟಿಸಿಕೊಳ್ಳಬಾರದು. ಮಂಗಗಳು ಮಾತ್ರ ಮರಹತ್ತಿದರೂ, ಹಲವು ಅಬಲಜಂತುಗಳು ನಿಮ್ಮ ಕಾಲಡಿಯಲ್ಲೆ ಸುಖವಾಗಿ ಬಾಳಿಕೊಂಡಿಲ್ಲವೆ? ಎಲ್ಲದಕ್ಕಿಂತಲೂ ಹೆಚ್ಚಾಗಿ, ಅಶಕ್ತನಾದ ನನ್ನನ್ನು ತಮ್ಮವನೆಂಬ ಅಕ್ಕರೆಯಿಂದ ಮಂತ್ರಿಪದವಿಯಲ್ಲಿ ನೇಮಿಸಿದ, ಒಂದೇ ಒಂದು ದೃಷ್ಟಾಂತವು ನಿಮ್ಮ ಸಮದೃಷ್ಟಿಯನ್ನು ಸಮರ್ಥಿಸುತ್ತಿದೆ. ನಾನು ಮೊದಲು ಹೇಳಿಕೊಂಡುದಾದರೂ ನಿಮ್ಮ ತಪ್ಪನ್ನೆ ಕಂಡಲ್ಲ. ನಮ್ಮೊಳಗೆ ಏನಾದರೂ ಕುಂದಿದ್ದರೆ ಮೊದಲೆ ನಿವಾರಿಸಿಕೊಳ್ಳಬೇಕೆಂಬ ಎಣಿಕೆಯಿಂದ ಮಾತ್ರವೆ. ನಿಮ್ಮ ಉತ್ತರವಾದರೂ ಅರ್ಥಗರ್ಭಿತವಾಗಿಯೆ ಇತ್ತು.

ವ್ಯಾಘ್ರ:—(ಆನಂದಬಟ್ಟು) ನರಿಯಣ್ಣ, ಚೆನ್ನಾಗಿ ಹೇಳಿದೆ. ನೀನು ಇಷ್ಟರ ಸುವಿಚಾರಿಯೆಂದು ತಿಳಿದಿರಲಿಲ್ಲ. ನನಗೆ ನಿನ್ನಲ್ಲಿದ್ದ ಓರೆಗಣ್ಣು ಈಗಲೆ ನೇರಾಯಿತು. ಅದರಿಂದ ನನ್ನ ಬಿರುನುಡಿಯ ಬೇಸರವನ್ನು ಬಿಟ್ಟು ಕ್ಷಮಿಸು. ನಾವು ಮನಸ್ಸಾಕ್ಷಿಗೆ ಸರಿಯಾಗಿರುತ್ತೇವೆ. ಆದರೇನು? 'ಹೇಳೆನೆಂದಿದ್ದರೂ ಕೇಳೆನೆಂದಿರಬಹುದೆ?' ಇಂಥ ವಿಚಾರಪೂರ್ವಕವಾದ ಸಮಾಧಾನವು, ನಿನ್ನಂಥ ಯಥಾರ್ಥವಾದಿಗಳ ಮಾತಿನಿಂದಲೆ ನೆಲೆಗೊಳ್ಳಬೇಕು.

ಜಂಬುಕ:—(ಹುಲಿಯ ಮುಖವನ್ನೆ ನೋಡುತ್ತ ತಿಳಿದವನಂತೆ ನಟಿಸಿ) ಓಹೋ, ಹೀಗೊ? ಗುಟ್ಟೊಡೆಯಿತು. ನಮ್ಮೊಳಗೆ ಎಂದೂ ಇಲ್ಲದ ಈ ಮಾತಿನ ಜಗಳಕ್ಕೆ ಕಾರಣವೇನಿರಬಹುದೆಂದು ಆಗಿನಿಂದಲೆ ಯೋಚಿಸುತ್ತಿದ್ದೆನು. ಅದು ಈಗಲೆ ಹೊರಬಿತ್ತು. ಮರೆಯಲ್ಲಿ ಅಡಗಿದರೂ ಮೈದಾನಿನಲ್ಲಿ ಆಗದಿರುವಂತೆ, ಕೈಗೆ ಸಿಕ್ಕಿದ ಮೇಲೆ, ಆ ಮೋಸದ ತೇಜಸ್ವಿಯ ಆಟಕ್ಕೆ ಎಡೆಯುಂಟೆ?

ವ್ಯಾಘ್ರ:—ಅದೇನು? ಬೇಗನೆ ಹೇಳು. ಅವನ ಕುಹಕವನ್ನು ಹಾದಿಗೆಳೆದು, ಅಜಿಗಿಜಿಮಾಡಿಬಿಡುತ್ತೇನೆ.

ಜಂಬುಕ:—ಅದೀಗ ನಮ್ಮ ಮೊದಲಿನ ಕೆಲಸವು. ಆ ದುಷ್ಟನಾದ ಸದಾಗತಿ, ತೇಜಸ್ವಿಯೊಡನೆ ಹಗೆಗಟ್ಟಿದನೆಂದು ನಮ್ಮ ಕತ್ತಲೆಯಿಂದ ಗೊತ್ತಾಗಿದೆಯಷ್ಟೆ.

ಆದರೆ ಅದೆಲ್ಲ ಸುಳ್ಳೆಂದು ಈಗ ಪ್ರತ್ಯಕ್ಷಸಿದ್ಧವಾಗುವಂತಿದೆ. ಆ ಸದಾಗತಿ ಮೈಮರೆಯಿಸಿಕೊಂಡು, ಮಿಂಚುಹುಳುಗಳ ಅವತಾರವನ್ನು ಧರಿಸಿದ ತೇಜಸ್ವಿ ಯೊಡನೆ ಸೇರಿ ಈಕಡೆಗೆ ಬೀಸುತ್ತಿದ್ದನು. ಆದರೆ, ನಮ್ಮ ಅಂಧಕಾರನ ಎಡೆ ಯಲ್ಲಿ, ಅವರಿಗೆ ಸ್ಥಿರವಾದ ಆಶ್ರಯವು ಸಿಕ್ಕಲಿಲ್ಲ. ಅದರಿಂದ ಮುಂದಾಳು ಗಳಾದ ನಿಮ್ಮೆಲ್ಲರ ಉಸಿರುಗಳಲ್ಲಿ ಸದಾಗತಿಯೂ, ಕಣ್ಣುಗಳಲ್ಲಿ, ಮಿಂಚು ಹುಳುಗಳ ರೂಪದ ತೇಜಸ್ವಿಯೂ, ಗೊತ್ತಾಗದಂತೆ ಮನೆಮಾಡಿರುತ್ತಾರೆ. ಅದೋ, ನಿನ್ನ ಕಣ್ಣುಗಳಲ್ಲಿ, ಮಿಂಚುಹುಳುಗಳು ಕೆಂಪು ಕೆಂಡಗಳಂತೆ ಮಿನುಗುಟ್ಟುತ್ತವೆ. ಆ ನೀಚರು ನಿಮ್ಮಲ್ಲಿ ಮಾತ್ರವಲ್ಲ; ನಮ್ಮ ಕಣ್ಣು ಗಳಲ್ಲಿಯೂ ಹೊಕ್ಕಿರಬಹುದು. ಆದರೆ, ಕಳ್ಳರು ದೊಡ್ಡವರ ಮನೆ ಗಳಿಗೇ, ಹೆಚ್ಚಾಗಿ, ಕನ್ನಹಾಕುವಂತೆ, ಹುಲಿ ಸಿಂಹ ಮೊದಲಾದ ಮುಖಂಡ ರನ್ನೇ ಹೆಚ್ಚಾಗಿ ಪ್ರವೇಶಿಸಿದ್ದಾರೆ. ಒಬ್ಬೊಬ್ಬರಲ್ಲಿಯೂ ಇದ್ದು ಭಿನ್ನ ಭಿನ್ನವಾದ ಯೋಚನಾಭಿಪ್ರಾಯಗಳನ್ನು ತೋರಿಸುವುದೆ ಅವರ ಉದ್ದೇಶವು. ಅದರಿಂದಲೆ, ನಮ್ಮಲ್ಲಿ, ಒಬ್ಬನಿಗೆ ಒಂದು ಅಭಿಪ್ರಾಯವಾದರೆ, ಇನ್ನೊಬ್ಬನಿಗೆ ಮತ್ತೊಂದು ತಲೆದೋರಿ, ಹೀಗೆ ಮನಃಕ್ಲೇಶವುಂಟಾಗುವುದು. ಅದಕ್ಕಾಗಿ, ಅವರನ್ನು ಈಗಲೆ, ನಾವೆಲ್ಲರೂ ಕಿತ್ತೊಗೆಯಬೇಕು. [ಈ ಮಾತನ್ನು ಕೇಳಿದ ಕೂಡಲೆ, ಹುಲಿ ಸಿಂಹ ಮೊದಲಾದ ಮೂಢಪ್ರಾಣಿಗಳು ಮಹಾಕೋಪದಿಂದ 'ಆಃ, ನೀಚರೆ, ತೇಜಸ್ವಿಸದಾಗತಿಗಳೆ, ಸಿಕ್ಕಿದಿರಿ' ಎಂದು ಗುಡುಗುಡಿಸಿ ಗರ್ಜಿಸಿ, ತಂತಮ್ಮ ಕಣ್ಣುಗಳನ್ನು ಕುಕ್ಕಿ ಬಿಕ್ಕಿದುವು! ಸುಗ್ರೀವನನ್ನು ಹಿಡುಕೊಂಡು ಹೋದ ಕುಂಭಕರ್ಣನ ಕಾರ್ಯದಷ್ಟು ಸತ್ವತ್ವವು ಇಲ್ಲಿಲ್ಲ ದಿದ್ದರೂ, ಪ್ರತಿಫಲವು, ಅದಕ್ಕಿಂತಲೂ ಅಧಿಕವಾಗಿಯೆ ಆಯಿತೆನ್ನಬಹುದು. ಅಲ್ಲಿ ಮೂಗು ಬಾಗವಾಯಿತು, ಇಲ್ಲಿ ಕಣ್ಣಿಗೆ ಸೊನ್ನೆ ಮುಚ್ಚಿತು. ಒಡ ನೆಯೆ ಉರಿಬೇನೆಗಳು ಏರಿದುವು. ಆಗ ನರಿಯೂ, ಅದರ ಅನುಯಾಯಿ ಗಳೂ 'ಹಾ! ಒಳಹೊಕ್ಕು ತಲೆಬಡಿವ ಘಾತಕರೆ, ಜೀವಹೋದರೂ ಸರಿ. ನಿಮ್ಮನ್ನು ಕಿತ್ತೊಗೆವುದೆ ನಿಶ್ಚಯವು' ಎಂದು ಚೀರುತ್ತ ಓಡಾಡಹತ್ತಿದುವು.]

ಸಿಂಹಾದಿಗಳು:—(ಚೀರುತ್ತ) ಮಂತ್ರಿ, ಇದೇನು ಉರಿ ಏರುತ್ತಲೆ ಇದೆ?

ಜಂಬುಕ:—(ದೂರದಿಂದ) ನಮಗೂ ಹಾಗೆಯೆ ಆಗುತ್ತಿದೆ. ಅದೊಂದು ಅಪಾ ಯಕರವಲ್ಲ. ಬೀಗಿದ ಬಾವು, ಕೀವುತುಂಬಿ ಸಿಳಿತವೇರಿದರೆ, ಕೂಡಲೆ ಒಡೆದು ಸೋರಿ ವಾಸಿಯಾಗುವುದು. ಹಾಗೆಯೆ, ತನ್ನ ಒಳಸಂಚು ಬಯ ಲಾಯಿತೆಂದು ನಿರಾಶನಾಗಿ ತೇಜಸ್ವಿ ಈ ರೀತಿಯಲ್ಲಿ ಚುಚ್ಚುತ್ತಿರುವುದು.

ಆದರೆ, ಆತನ ಆಪ್ತನಾದ ಸದಾಗತಿಯನ್ನು, ಇನ್ನೂ ನಾವು ಶ್ವಾಸಕೋಶಗಳಲ್ಲಿ ಹೊಕ್ಕು ಹೊರಡಿಸಿ ಮನ್ನಿಸುತ್ತಿರುವುದರಿಂದ, ಅವನಿಗೆ, ತನ್ನ ಆ ಮಿತ್ರನ ಸಹಾಯವು ಈಗಳೂ ಇದೆ. ವಂಚಕಸದಾಗತಿಯೆ, ತೇಜಸ್ವಿಗೆ, ಒಳಗೊಳಗೆ ಕೈಗೊಟ್ಟು ಹೀಗೆ ಪೀಡಿಸುತ್ತಾನೆ. ಕೇಳಿರಿ, ನಾಡಿನ ಸಂಸಾರಾಗ್ನಿಯನ್ನು ಸೈರಿಸದೆ ಕಾಡಿಗೆ ಬಂದರೂ, ಯೋಗಿಗಳು ಶ್ವಾಸ (ಸದಾಗತಿ) ಗಟ್ಟಿಯೆ ಸುಖಿಗಳಾಗುವುದು. ಅದರಂತೆ, ನಾವೂ ಉಸುರಗಟ್ಟಿ, ಅವನನ್ನು ಅಟ್ಟಿಬಿಡಬೇಕು. ಹಾಗಾದರೆ, ಬೇನೆಯುರಿಗಳೆಲ್ಲ ತಣ್ಣಗಾಗಿ ಮುಂದಣ ಕೆಲಸವೆಲ್ಲ ತನ್ನಷ್ಟಕ್ಕೆ ತಾನೆ ನೆರವೇರುವುದು, [ನರಿಯ ಮಾತನ್ನೆ ಬ್ರಹ್ಮವಾಕ್ಯವೆಂದೆಣಿಸಿ ಘಾತುಕಪ್ರಾಣಿಗಳು ಉಸುರುಗಟ್ಟತೊಡಗಿದುವು. ಅದರ ಮಾತು ಸುಳ್ಳಾಗದೆ ಒಂದಕ್ಕೆ ಮೂರರಷ್ಟು ನಿಜವಾಯಿತು. ಹೇಗೆಂದರೆ— ಎಲ್ಲ ಮೃಗಗಳೂ ನರಿಯ ಉಪದೇಶವನ್ನು ಕಡೆವರೆಗೆ ಬಿಗಿಹಿಡಿಯದಿದ್ದರೂ, ಕೆಲವು ಕಣ್ಣಿಲ್ಲದುದರಿಂದ ಅಲ್ಲಲ್ಲಿ ಎಡವಿತಡವರಿಸಿ ಕಂದಿಗುಂಡಿಗಳಿಗೆ ಬಿದ್ದು ಮಡಿದುವು. ವ್ಯಾಘ್ರಸಮೂಹದ 'ಹುಲಿಹುಣ್ಣು' ಎಂಬುದು ಪ್ರಸಿದ್ಧವಷ್ಟೆ. ಹುಲಿಗಳು ಅತ್ತಣಿಂದ ಇತ್ತ, ಇತ್ತಣಿಂದ ಅತ್ತ, ಚುಚ್ಚಿಟ್ಟು ಒದ್ದಾಡಿ ಕೈಕಾಲು ಬಡಿದು ಕೆಡೆದುವು. ಹಲವು ಬದುಕಿದರೂ, ಆ ಕುರುಡುಮೊರಡುಗಳಿಂದ ಏನಾಗಲಿಕ್ಕಿದೆ? ಸ್ವಲ್ಪಕಾಲದಲ್ಲೆ ಆ ಮೃಗಗಳ ಮೆಯ್ಯೂ ತಣ್ಣಗೆ; ಘಾತುಕಕೃತ್ಯಗಳೂ ತಣ್ಣಗೆ; ಕಾಡೂ ತಣ್ಣಗೆ. 'ಓಂ ಶಾಂತಿಶ್ಶಾಂತಿಶ್ಶಾಂತಿಃ' ಆಯಿತು. ಕೊಟ್ಟದಕ್ಕೆಲ್ಲ 'ದಸ್ಕತು' ಎಳೆಯುತ್ತಿದ್ದ ಅಂಧಕಾರಧೃತರಾಷ್ಟ್ರನು, ಇನ್ನು ಮಾಡುತ್ತಾನೇನು? ನೋಡಿರಿ, ಹೀಗೆಯೆ, ನಮ್ಮಲ್ಲಿಯು ಕೆಲವು ಜಂಬುಕವ್ಯಕ್ತಿಗಳು ಜನಾಂಗವನ್ನೇ ವಂಚಿಸುತ್ತಿರುವುದು ತುಂಬ ವಿಷಾದಕರವು. ಹುಂ, ವಿಷಾದವೇಕೆ? ವಂಚಿಸಬೇಕಾದರೆ, ಆ ಮಾತು ಸಯುಕ್ತಿಕವಾಗಿರತಕ್ಕುದಷ್ಟೆ. ಅಂಥ ಮಾತುಗಳು, ಕೇಳುವ ಜನರ ಹೃದಯಕ್ಕೆ ಅನುಸಾರವಾಗಿಯೆ ಕಾರ್ಯರೂಪವನ್ನು ಹೊಂದುತ್ತವೆ ಎಂಬುದೂ ನಿಶ್ಚಯವು. ಕತ್ತಿ, ಕಟುಕನ ಕೈಗೆ ಬಂದು ಅಬಲರನ್ನು ಕಡಿಯಲಿಕ್ಕೂ, ಧೀರನ ಹಸ್ತಗತವಾಗಿ ಕಾಯಲಿಕ್ಕೂ ಕಾರಣವಾಗುವುದಲ್ಲವೆ? ಅದರಿಂದ, ಇದೂ ಪ್ರಕೃತಿಯ ಒಂದು ಅವತಾರವೆಂದು ಹೇಳಬಹುದು. ಆದರೆ, ಈ ಅವತಾರದಿಂದ ನಿರಪರಾಧಿಗಳೂ ಬಲಿಬಿದ್ದು ವಿಕೃತಿಯ ಅನ್ಯಾಯವಾಗುವುದೆಂದು ಆಕ್ಷೇಪಿಸಿದರೆ, 'ಉರಿಕಾಡಸುಡುವಲ್ಲಿ ಹಸಿಯೊಣಗಿಲೆಂದುಂಟೆ?' ಎಂದು ನ್ಯಾಯವನ್ನು ಸಮರ್ಥಿಸಬೇಕು. ದುಷ್ಟಸಂಗದ ಫಲವೆ ಅಷ್ಟು. 'ಕಲ್ಲಪ್ಪ ಗುಂಡಪ್ಪರ ಎಡೆಯಲ್ಲಿ ಮೆಣಸಪ್ಪ ನುಗ್ಗಿದ' ರೀತಿಯೂ ಹೀಗೆಯೆ.

ಅಂತೂ ಇಂತೂ, ಆ ಕಾಡವರ ಸಂಕಲ್ಪದಲ್ಲೆ ಪುಣ್ಯಕಾಲವು ಕಳೆಯಿತು. ಘಾತುಕಪ್ರಾಣಿಗಳ ಒತ್ತಾಟವೂ ಕಳೆಯಿತು. ಪರಮಾತ್ಮನು, ದುಷ್ಟನಾಶಕ್ಕೆ ಸಿದ್ಧಮಾಡಿಟ್ಟ ಉಪಾಯಗಳಲ್ಲಿ ಇದೂ ಒಂದು. ಹಲವರು ಕಾಲದಿಂದ, ಕೆಲವರು ರೋಗದಿಂದ, ಅನ್ಯರು ಹಗೆಗಳಿಂದ, ಅನೇಕರು ಅವಗಡಗಳಿಂದ, ಬೇರೆಯವರು ತಮ್ಮವರ ಮರೆಮೋಸಗಳಿಂದ, ಇನ್ನಿರುವವರು ತಮ್ಮಿಂದಲೆ ತಾವು ಸಾವಿನ ಸಜ್ಜೆಯನ್ನು ಸಾರುತ್ತಾರೆ. 'ಯಜ್ಜನ್ಯಂ ತನ್ನಷ್ಟಂ' ಎಂಬುದನ್ನು ಯೋಚಿಸಿದರೆ, ಅದು ಒಂದು ಆಶ್ಚರ್ಯವಲ್ಲ. ವಿಕೃತಿಯ ಅವತಾರವು ತರತರವಾಗಿದ್ದರೂ, ಕಡೆಗೆ, ಪ್ರಕೃತಿಯು ಮೈ ಒಂದೆ ಸರಿ. ಬಗೆಬಗೆಯ ಬಣ್ಣಗಳ ಬಳಿತದಿಂದ ಕ್ಷಣಕ್ಕೆ ಒಬ್ಬನಾಗಿ, ರಂಗಕ್ಕೆ ಮೋರೆ ತೋರಿಸಿದವನೂ, ಕಡೆಗೆ ಮನೆಗೆ ಹೊರಡುವಾಗ ತಾನೊಬ್ಬನು ಮಾತ್ರವೆ. ಆದರೂ "ವಿಕೃತಿಮೂಲಕವಾಗಿ ಪುಣ್ಯಪಾಪಗಳನ್ನು ಮಾಡಿಸುವುದೂ, ತಕ್ಕಂತೆ ಸ್ವರ್ಗನರಕಫಲಗೊಡುವುದೂ ಪರಮಾತ್ಮನೆ. ಎಂದ ಮೇಲೆ, ನಾವೇನು ಮಾಡಲಿಕ್ಕಿದೆ?" ಎಂದು ತಪ್ಪೊಪ್ಪುಗಳೆರಡನ್ನೂ ಒಡೆಯನಾದ ಪರಮಾತ್ಮನ ಮೇಲೆ ಹೊರಿಸುವ ಯುಕ್ತಿವಾದವು ಸರಿಯಲ್ಲ. ಯಾಕೆಂದರೆ, ತನ್ನ ಮನೆಗೆ ಬರಲಿಕ್ಕಿರುವ ಅತಿಥಿಗಳ ಅನುಕೂಲತೆಗಾಗಿ ಒಳ್ದಾರಿಗಳನ್ನು ಮಾಡಿಸುವುದೂ, ಕಳ್ಳರನ್ನು ಹಿಡಿಯಲಿಕ್ಕೆ ಸಂಚುಗಳನ್ನು ಒಡ್ಡುವುದೂ ಯಜಮಾನನ ಕೆಲಸವು. ಆದರೆ, ಅವರವರಿಗೆ ಆಯಾಬದ್ಧಿಗಳನ್ನು ಕೊಡುವುದೂ ಅವನ ಕರ್ತವ್ಯವಲ್ಲ. 'ಬುದ್ಧಿಃ ಕರ್ಮಾನುಸಾರಿಣೀ' ಎಂಬ ಹಾಗೆ, ಪೂರ್ವಕರ್ಮಾನುಸಾರವಾಗಿಯೆ ಆಯಾ ಬುದ್ಧಿ ನೆಲೆಗೊಳ್ಳಬೇಕು. ಬಿತ್ತಿದುದೆ ಬೆಳೆಯಲ್ಲವೆ? ಆದರೆ, ಆರಾಜಮಾರ್ಗದಲ್ಲೆ ಬಂದು ತಸ್ಕರಣ ಮಾಡಿದರೆ ಬಂಧನವೇ ಮನ್ನಣೆ. ದುಷ್ಕರ್ಮಕ್ಕೆ, ಅವನೆ ಪ್ರೋತ್ಸಾಹಿಸಿ, ಆಮೇಲೆ ಅವನೆ ಶಿಕ್ಷಿಸುವುದೆಂದರೆ, ಕೆಲವು ದುಷ್ಟರಾದ ಅಧಿಕಾರಿಗಳಂತೆಯೆ ಆಯಿತು. ಲೋಕರಕ್ಷಕನಾದ ಪರಮಾತ್ಮನನ್ನು, ಆ ಅಲ್ಪರಾದ ಅಧಿಕಾರಿಗಳೊಡನೆ ಹೋಲಿಸುವುದೆಂದರೆ, ಹಿಟ್ಟು ಬೂದಿಗಳನ್ನು ಒಟ್ಟುಗೂಡಿಸುವ ಮೂಢತೆಯೆ ಸರಿ. ನಮ್ಮ ಈ ರಾಜ್ಯಗಳಲ್ಲಿ ಹಸಿಬಿಸಿಗಳು ಒಟ್ಟಿಗೆ ಹೊತ್ತಿಹೋಮವಾಗುತ್ತಿದ್ದರೂ, ಪರಮಾತ್ಮನ ಅಖಂಡ ಸಾಮ್ರಾಜ್ಯಸಭೆಯಲ್ಲಿ ಸತ್ಯವೇ ಸಾವಿಲ್ಲದ ಸಭಾಹಿತನು. ನಮ್ಮಲ್ಲಿ, ಸತ್ಯದ ಕಿಡಿಯ ಸುತ್ತಲೂ ಸುಳ್ಳಿನ ಬೂದಿ ಮುಚ್ಚುವುದು ಸ್ವಭಾವವಾದ ಕಾರಣ, ಅದು ಕ್ರಮೇಣ, ಆ ಕಿಡಿಯನ್ನು ಸವೆಯಿಸುತ್ತ ಬರುತ್ತದೆ. ಸ್ವಾರ್ಥಿಗಳಾದ ಮಂತ್ರಿಗಳಿಗೆ ಒಳಗಾದ ಮುಖಂಡರ ಗತಿಯೂ ಹಾಗೆಯೆ.]

ಪಂಚಮಾಂಕ

[ನಾಡವರಿಗೆ ಎಡೆಗೊಡುವಂತೆ ಕಾಡವರ ಕಟ್ಟು ಅಳಿಯಿತು. ಶುಭೋದಯದ ಡಂಗುರಸಾರುವಂತೆ ಕೋಳಿಯು ನೀಳದ ಕೂಗು ಕೇಳತೊಡಗಿತು. ಒಡನೆ, ಗುರುವನ್ನು ಅನುಸರಿಸಿ ಹಾಡುವ ಶಿಷ್ಯರ ಪಾಠದಂತೆ, ನೂರಾರು ಹುಂಜಗಳು ಬಾಯ್ದೆರೆದುವು. ಆ ಬೋಧನೆಯಿಂದ ಎಚ್ಚರಿತ ಬೇರೆ ಹಕ್ಕಿಗಳೂ ಮುಂದಣ ದಾರಿ ಏನೆಂದು 'ಕಿಂಕಿಂ' ಗುಟ್ಟಿದುವು. ಮಾತು ಮುಟ್ಟಿದ್ದ ಕೋಗಿಲೆಯು ಹಾಡು ಕೋಡಿಹರಿದು, ಗೀತಾರಂಭವಾಯಿತು. ಜಲಧರನು ಸ್ವಚ್ಛತೆಯಿಂದ ಅನುರಕ್ತನಾದುದು 'ವೃದ್ಧಾನಾರೀಪತಿವ್ರತಾ' ಎಂಬಂತೆ ಎಂದು ಕೆಲವರು ಹೇಳಿದರೂ, ನಾವು, ಆರ್ಯನ ಆಗಮನಕಾಲದ ಸುಲಕ್ಷಣದಿಂದಲೆಂದೆ ಹೇಳುತ್ತೇವೆ. ಸದಾಗತಿಯು ಬಿರುಸೂ ತಣ್ಣಗಾಗಿತ್ತು. ಮನೆಮನೆಗಳಲ್ಲಿ ತೇಜಸ್ವಿಯೂ ಕಣ್ದೆರೆಯತೊಡಗಿದನು. ಅಡಿಯಾಳುಗಳೊಳಗೆ, ಎಷ್ಟೆ ವೈಮನಸ್ಯವಿದ್ದರೂ, ಸರ್ವಸಮದೃಷ್ಟಿಯು ಮೇಲಾಳಿನ ಸಮ್ಮುಖದಲ್ಲಿ ಎಲ್ಲರೂ ಒಟ್ಟಿಗೆ ಸೇರಿ ಕೈಜೋಡಿಸುತ್ತಾರೆ. ನೂರಾರು ದಾರಿಗಳು ಊರೂರೊಳಗೆ ಎಲ್ಲೆಲ್ಲಿಯೊ ಸುಂದಿಸುರುಟಿಸುಳಿದಾಡಿದರೂ ಪಟ್ಟಣದಲ್ಲಿ ಎಲ್ಲವೂ ಕಲೆತು ಕೂಡುತ್ತವೆಯಲ್ಲವೆ? ಆಗ, ಕರುಗಳು—

ಕುಸುಮ ಷಟ್ಪದಿ || ನಿನ್ನ ಹೊಟ್ಟೆಯಲಿ ಹುಟ್ಟಿದ ನನ್ನ ಕೊರಳನಿದೊ |
ಅನ್ನಿಗರು ಕಟ್ಟಿ ದೂರದೊಳಿರಿಸುತ ||
ನನ್ನ ಹಕ್ಕಿನ ಪಾಲಿಗಡ್ಡಬಹರನ್ಯಾಯ |
ವನ್ನಾರಿಗೆಂಬೆ ನಿನಗಲ್ಲದಂಬೆ || ೧ ||

ನಮ್ಮನ್ನು ಸಾಕುವನಿಗತಿ ಮೋಹವಿದ್ದರೂ |
ದುರ್ಮನಸ್ಸಿನಲಿ ಹುಲ್ಲಿತ್ತುಪಾಲಂ ||
ತಮ್ಮ ಸ್ವಾರ್ಥಕ್ಕಾಗಿ ಸೆಳೆವ ದೂತರ ಕೆಟ್ಟ |
ಹೆಮ್ಮೆಯನು ತಡೆದು ಮೊಲೆಗೊಡುವುದಂಬೆ || ೨ ||

ದನ || ಎಲೆ ಕರುವೆ ಕಾಡಮೃಗಗಳ ಬಾಯಿಯಿಂದುಳಿಸಿ |
ಬಳಿಕ ನಮ್ಮನು ಮೊದಲೊಳೇ ಪೂಜಿಸಿ ||
ಸಲಹುವಾ ನರರ ತಪ್ಪುಗಳ ಹುಡುಕದೆ ರೋಮ |
ಗಳನುಗುಳಿ ಪಾಲುಣ್ಣಬೇಹುದಂಬಾ || ೩ ||

ಹೀಗೆ ಗಾನಪೂರ್ವಕವಾದ ಕರುದನಗಳ ಮಾತುಕತೆಗಳು ನಡೆಯುತ್ತಿದ್ದುವು. ಆದರೆ, ಹೊರಗೆ ಇಷ್ಟು ಜಾಗ್ರತೆಯುಂಟಾದ ಮಾತ್ರದಿಂದೇನು? ಜೀವಿಗಳೊಳಗೆ ಪ್ರಮುಖರಾದ ಮನುಷ್ಯರಲ್ಲಿ ಹಲವರು, ಹಾಸಿಗೆಯಲ್ಲಿಯೂ ಮಿಸುಕಲಿಲ್ಲ. ಮಿಸುಕಿದರೂ, ಚಳಿಗೆ ಅಳುಕಿ, ಮುಸುಕುದೆಗೆಯಲಿಲ್ಲ. ತೆಗೆದರೂ, ಬೆಳಕಿಗೆ ಕಣ್ಣುದೆರೆಯಲಿಲ್ಲ. ಈಗಿನ ನವನಾಗರಿಕಲೋಕದ ರೀತಿಯೆ ಹೆಚ್ಚಾಗಿ ಹಾಗೆ. ಹೊತ್ತು ಮೀರಿ ಹೊಟ್ಟೆ ಕರೆದ ಮೇಲೆ ಮಾತ್ರವೆ ಏಳುತ್ತಾರೆ. ಆದರೆ, ಅರ್ಧಾಂಗವಾದ ಹೆಂಗುಸರಾದರೂ ಪೂರ್ವಾಚಾರವನ್ನು ಬಿಡದೆ ಕಾಲದಲ್ಲಿ ಎದ್ದು ಪುರುಷರ ಆನುಕೂಲ್ಯಗಳನ್ನು ಒದಗಿಸುತ್ತಿರುವುದೊಂದು ಸುಚಿಹ್ನವೆ. ಕೈಮುಟ್ಟಿ ತಾವು ಮಾಡಿಟ್ಟ ಸಿದ್ಧಾನ್ನವನ್ನು ಎಲ್ಲರಿಗೂ ಇಕ್ಕಿ, ಉಳಿದುದನ್ನ ತಾವು ಸೇವಿಸುವ ಆ ಸ್ತ್ರೀಯರ ನಿಸ್ವಾರ್ಥಬುದ್ಧಿಯೂ ಕರ್ತವ್ಯ ನಿಪುಣತೆಯೂ, ಇನ್ನೂ ಕದಲದಿರುವುದು ಭಾಗ್ಯೋದಯವೆಂದೆ ಹೇಳಬೇಕು. ಆದರೆ, ಹಲವರು, ತಮ್ಮ ನವನಾಗರಿಕತೆಯ ಮಂತ್ರವನ್ನು ಅವರ ಕಿವಿಯಲ್ಲಿಯೂ ಜಪಿಸಹತ್ತಿದ್ದಾರೆ. ಆದರೂ, ಆಪರಾರ್ಥಬುದ್ಧಿಯ ಬೇರು, ಭರತಖಂಡದ ಸ್ತ್ರೀರತ್ನಗಳ ಹೃದಯದಿಂದ ಕಿತ್ತುಹೋಗಲಾರದು. ಹುಂ, ಸೂಜಿಗೆ ನೂಲನ್ನು ಎಷ್ಟುದ್ದಕ್ಕೂ ಸುರಿಯಬಹುದಲ್ಲವೆ? ಅದಿರಲಿ. ಮೂಡಲಕರೆಯಲ್ಲಿ ಆರ್ಯನ ಪತಾಕೆಯ ಕೆಂಪು ತಲೆದೋರಿತು. ಮರದ ಅಡಿಯಲ್ಲಿದ್ದ ಕತ್ತಲೆಕಾಡಿಗೆ, ಅಲ್ಲಿಂದ ಗವಿಗೆ ಹೊಕ್ಕು, ಬೇಟೆಗಾರನಿಗೆ ಭಯಪಟ್ಟ ಮೃಗದಂತೆ, ಮೈಮರೆಯಿಸಿತು. ಆದರೂ, ದುಷ್ಟರ ಅಂತರಂಗದಂತಿರುವ ಕೆಲವೆಡೆಗಳಲ್ಲಿ ಮಾತ್ರ, ಮುಂದಿನ ಬಿತ್ತಿಗಾಗಿ, ಮತ್ತೂ ನಿಶ್ಶೇಷವಾಗಲಿಲ್ಲ. ಆದರೆ, ನಕ್ಷತ್ರಪತಿ, ತನ್ನ ಹಿಮಕರಗಳಿಂದ, ಆರ್ಯಪತಾಕೆಯನ್ನು ಮುಚ್ಚಿಮುಸುಕಿದನು. ಅದರಿಂದೇನು? ಹತ್ತಿಯ ಮೂಟೆ ಕಿಡಿಯನ್ನು ಒತ್ತಿ ಬಾಳುವುದೆ? ಮಂಜೆಲ್ಲ ಕರಗಿಹೋಯಿತು. ಆಗ ನಕ್ಷತ್ರಪತಿಯನ್ನೇನು ನೋಡುವುದು! ಅವನ ಮೋರೆಯೆಂದರೆ, ಆಕಾಶಗಂಗೆಯಲ್ಲಿ ತೇಲಬಿಟ್ಟ ಹಾಲುಕಂಚಿನ ಬಟ್ಟಲೆಂಬಂತೆ ತೋರಿತು. ಅವನ ಒಡನಾಡಿಗಳ ತಲೆಕುಡಿಯನ್ನು ಸಹ ಕಂಡು ಕೇಳಿದವರಿಲ್ಲ. ಅದರಿಂದ, ನಕ್ಷತ್ರಪತಿ ನಿಸ್ತೇಜನಾಗಿ ಮುಂಗಾಣದೆ ಮುನ್ನೀರಮಡುವಿಗೆ ಬೀಳುವುದೊ, ಇನ್ನೆಲ್ಲಾದರೂ ಮರೆಯಾಗುವುದೊ ಎಂದು ಕಳವಳಿಸುತ್ತಿದ್ದನು. ಅಷ್ಟರಲ್ಲಿ ಆರ್ಯನೂ ದ್ವಿಜಸಮೂಹದ ಸ್ವಸ್ತಿವಾಚನದೊಡನೆ ಮೇಲೇರಿ ಮೂಡುವೆಟ್ಟದ ಮಣೆಯನ್ನು ಮಂಡಿಸಿದನು.]

ಆರ್ಯ:—ಪ್ರಿಯ ಲೋಕವೆ, ನಿಮ್ಮ ದೃಢನಿಶ್ಚಯಪೂರ್ವಕವಾದ ಮಂತ್ರದ ಮಹಿಮೆಯಿಂದಲೆ, ನನಗೆ ಬಂಧಮೋಕ್ಷವಾಯಿತು. ಆ ಮಹತ್ಕಾರ್ಯಕ್ಕೆ, ಉಪಚಾರದ ಬಣ್ಣದ ಮಾತುಗಳನ್ನು ಒಪ್ಪಿಸಿ, ನಿಮ್ಮ ಸಾಲಕ್ಕೆ ಬರಿಸೊನ್ನೆಯನ್ನು ಆಡವಿಡುವ ವಂಚಕಬುದ್ಧಿ ನನಗೆ ಸಲ್ಲದು. ಅಷ್ಟೆ ಅಲ್ಲ.

ಚೌಪದಿ || ಆಡಿಕೆಯ ಮರಳ ರಾಶಿಯೊಳೆಣಿಕೆನೀರಂ |
ತೋಡಿತೋಂಕಿದರೆ ಕೂಡಲೆ ಆರುತೊಣಗಿ ||
ಮಾಡಿಕೆಯ ಹೊಲಕೆತಟಕೂ ನಾಸ್ತಿಯಾಗಿ |
ನೋಡೆ, ಕೆಲಸದ ಬೆಳೆಮೊಳೆಯದು ನಿಜವಾಗಿ || ೧ ||

ಎಂಬ ಸುಭಾಷಿತವಿರುವುದರಿಂದ, ಶಕ್ತ್ಯನುಸಾರವಾಗಿ ಕೆಲಸದಿಂದಲೆ ನಿಮಗೆ ಕೃತಜ್ಞತೆಯನ್ನು ಸಮರ್ಪಿಸಬೇಕು. ಮೊದಲೀಗ, ಈ ನಕ್ಷತ್ರಪತಿಗೆ ಒಂದೆರಡು ಬುದ್ಧಿಮಾತುಗಳನ್ನು ಹೇಳಲಿಕ್ಕಿದೆ. ಆತನು, ದುಷ್ಟಸಂಗದಿಂದಲೂ ಕಾಲಾನುಸಾರವಾಗಿಯೂ, ಒಮ್ಮೆ, ಹಗೆಗಟ್ಟಿದರೂ, ನಮ್ಮವನೆ ಅಲ್ಲವೆ? ಮಾತ್ರವಲ್ಲ.

ಚೌಪದಿ || ಕಳೆಗುಂದಿ ನೀರಹೊಕ್ಕಡಗಲಿಚ್ಛಿಸಿದ |
ಖಳನನಾದರು ದಂಡಿಸುವುದು ಸರಿಯಲ್ಲ ||
ಕನಿಕರದ ಹನಿ, ನಿರಾಶಾರೋಗವನ್ನು |
ತಣಿಸುತೊಳ್ದಾರಿಯನು ತೋರಿಸುವ ಮದ್ದು || ೧ ||

ಹಲರದರೊಳೂ ಗುಣವನೊಂದದಿರಲೇನು? |
ಅಳಿವನೌಷಧಿಯಿಂದ ತಡೆಯಲಾಗುವುದೆ? ||
ಕೆಲರಾದರೂ ಸುಖವನೊಂದಿ ಲೋಕವನು |
ಬೆಳಗಿಪರು, ಹತ್ತುಕಲ್ಲೊಂದು ಹಣ್ಣೆಂಬರ್ || ೨ ||

ಕರುಣವೆನ್ನುವ ದೈವಿಕದ ಪೈರನವುಕಿ |
ನರರ ದುರುಳತೆಮೋಸವುಳ್ಳಗಳು ಮುಸುಕಿ ||
ಬೆಳೆಗಡ್ಡಿಬರಲು ಖಂಡಿಸುತವರಕಾಳಂ |
ನೆಲಕೆ ಸರಿಯಾಗಿ ಹಂಚುವುದೆಮ್ಮ ಧರ್ಮಂ || ೩ ||

ಇದಕೆಷ್ಟು ಕಷ್ಟವೊ, ಅದಕ್ಕಿಂತ ಸುಖವು |
ಅಧಿಕವೈ, ಬಾವಿಯುಗೆದೊಸರುಚಿಮ್ಮಿದವೊಲ್ ||
ಮೊದಲಿನದು ಕ್ಷಣಿಕ ಮತ್ತಿನದು ಶಾಶ್ವತವು |
ಅದನರಿತು ಲೋಕಹಿತಗೈವುದೇಮತವು || ೪ ||

ಎಂದು ಹೇಳುತ್ತಾರೆ. ಒಮ್ಮೆ ನಾಟದ ಮದ್ದು, ಇನ್ನೊಮ್ಮೆ ಕಾಲ, ಹವೆ ಇವುಗಳ ಅನುಕೂಲ್ಯದಿಂದ ನಾಟುವುದಲ್ಲವೆ? (ಎಂದು, ಕಳೆಗುಂದಿದ ನಕ್ಷತ್ರ ಪತಿಯ ಕಡೆಗೆ ಕೈನೀಡಿ)

ಎಲೆ ನಕ್ಷತ್ರಪತಿಯೆ, ಈ ವರೆಗೆ, ಎಷ್ಟೆಷ್ಟೊ ಅನುಕೂಲ್ಯಗಳನ್ನು ಒದಗಿಸಿ 'ಬುದ್ಧಿ, ಈ ಹೊತ್ತು ಬಂದೀತು, ನಾಳೆ ಬಂದೀತು' ಎಂದು ದಾರಿ ನೋಡುತ್ತಿದ್ದುದೆಲ್ಲ ಗಾಳಿಯ ಹತ್ತಿಯಾಯಿತು. ಆದರೆ, ಸಾರಾಸಾರವಿಚಾರಕನಾದವೋಲೆಯೆ, ಅಧಿಕಾರವನ್ನು ಕೊಡದೆ, ಮೊದಲೆ ಯಜಮಾನಿಕೆಯನ್ನು ಒಪ್ಪಿಸಿದ ತಪ್ಪು ನನ್ನದೆ. ಈಗ ಮನೆಗಿಂತ ದೊಡ್ಡ ಮೆಟ್ಟುಗಲ್ಲನ್ನು ಏರಿಸಿದ ನನ್ನ ತಪ್ಪಿಗೆ ನನಗೂ, ನಿಂತಲ್ಲಿಂದಲೆ ಕಾಲುನೀಡಿದ ನಿನ್ನ ಉದ್ಧತತ್ವದ ಘಾತುಕತನಕ್ಕೆ ನಿನಗೂ ತಕ್ಕ ಪ್ರಾಯಶ್ಚಿತ್ತವೆ ಆಯಿತು. ಇರಲಿ, ಇದರಿಂದಲೂ ಒಳ್ಳೆಯ ಪಾಠವನ್ನೆ ಕಲಿಯಬಹುದು. ಹೇಗೆಂದರೆ—ದಾರಿಹಿಡಿದವರು ಮುಂದಾಳುಗಳ—ದಾರಿಬಿಟ್ಟವರು ತಂತಮ್ಮ—ಪ್ರಯತ್ನಕಷ್ಟಗಳಿಂದಲೆ ಕರ್ತವ್ಯವನ್ನು ಕಂಡುಕೊಳ್ಳತಕ್ಕುದು. ಅದರಲ್ಲಿ, ಮೊದಲನೆಯವರಿಗೆ, ಆ ಮುಖಂಡರ ಮೇಲುಪಂತಿಯಿಂದಾಗಿ ಸನ್ಮಾರ್ಗವು ಕಣ್ಣೆದುರಲ್ಲಿಯೆ ಇರುವುದು. ಎರಡನೆಯವರಿಗೆ, ಅಭ್ಯಾಸವು ದುಷ್ಟವಾಗಿಯೂ, ಸನ್ಮಾರ್ಗವನ್ನು ಹುಡುಕಬೇಕಾಗಿರುವುದರಿಂದಲೂ, ಕಷ್ಟಕರವಾಗುವುದು. ಊರ ಮುಂದಾಳುಗಳೂ ಹಿಂದಾಳುಗಳೂ ಈ ರೀತಿಯ ವಿಷಯವಿಚಾರವನ್ನು, ಮಾಡುವವರಿದ್ದಾರೆ. ಆದರಿಂದ ನಾವು ಬಹಳ ಜಾಗ್ರತೆಯಿಂದಿದ್ದು, ನಮ್ಮ ನಡತೆಯಿಂದ ಆದಷ್ಟು ಒಳ್ಳೆಯ ದೃಷ್ಟಾಂತವನ್ನೆ ತೋರಿಸಬೇಕು. ಅಲ್ಲವಾದರೆ 'ಶಿಷ್ಯಪಾಪಂ ಗುರೋರಪಿ' ಎಂಬಂತೆ ಲೋಕವೆಂಬ ಶಿಷ್ಯನ ಪಾಪವು ನಮ್ಮ ಮೇಲೆಯೂ ಹೊರುವುದು. ಕೇಳು, ಎಳಮೆಯಲ್ಲಿ, ಅದರಲ್ಲಿಯೂ, ಸ್ವತಂತ್ರಾಧಿಕಾರಕ್ಕೆ ಎಡೆಸಿಕ್ಕಿದಲ್ಲಿ, ಹಲವು ಮಂದಿ ಕೆಳೆಯರು ತಲೆದೋರುತ್ತಾರೆ. ಅವರು ವಿನಯವಿಧೇಯತೆ ಸ್ತುತಿ ನಮಸ್ಕಾರ ಮೊದಲಾದ ರಸಾಯನ (Wine)ಗಳನ್ನೆ ಕಾಣಿಕೆಗೊಡುತ್ತಾರೆ. ಆ ರಸಾಯನವು ನಾಲಗೆಗೆ ಮೆಚ್ಚಿದಷ್ಟೂ, ಹೃದಯಕ್ಕೆ ಕಿಚ್ಚೆಂಬುದು, ಮೊದಮೊದಲು ಗೊತ್ತಾಗುವುದಿಲ್ಲ. ಅವರ ಹೊಗಳಿಕೆಗೆ ಹಿಗ್ಗಿ ಹಲವರು ಪರೋಪಕಾರಿಗಳ ಹಂತಿಗೆ ಹತ್ತುತ್ತಾರೆ. ಊರಲ್ಲಿ ಈಗ ಪರೀಕ್ಷೆಗಾಗಿ ಓದುವ ಹುಡುಗರಂತೆ, ತಾವು ಮೇಲಿನ ತರಗತಿಗೆ ಏರಬೇಕೆಂದು ಸೊಂಟಗಟ್ಟಿ ಪ್ರಯತ್ನಿಸುತ್ತಾರೆ. ಆ ತರಗತಿಗಳಲ್ಲಿ ಬಹಳ ಭೇದ

ಗಳುಂಟು. ಎಷ್ಟೆಷ್ಟು ಮೇಲೇರುತ್ತಾರೊ, ಅಷ್ಟು ಮಾನೆಯನ್ನು ಮರೆಯ ಬೇಕಾಗುತ್ತದೆ. ಅದರಲ್ಲಿ ಮೊದಲನೆಯವನಾದಕೂಡಲೆ 'ಮನೆಗೆ ಮಾರಿ, ಪರರಿಗೆ ಉಪಕಾರಿ' ಎಂಬ ಬಿರುದು ಸಿಕ್ಕುವುದು. ಆದರೆ, ಆ ಬಿರುದಿನ ಬಿರುಗಾಳಿಗೆ ತಲೆಗೊಟ್ಟವನು, ಬುಡವು ಸಪುರವಾಗಿಯೂ, ಕೊಡಿ ತೋರ ವಾಗಿಯೂ ಬೆಳೆದ ಮರದಂತೆ, ಕಡೆಗೆ ಮೈಮುರಿತು ಬಿದ್ದು ದಾರಿಹೋಕರ ತುಳಿತಕ್ಕೆ ಎಡೆಯಾಗುವನು. ಹಾಗೆಂದರೆ, ಪರೋಪಕಾರವೆಂಬುದು ನಿಕೃಷ್ಟ ವೆಂದು ನನ್ನ ಯೋಚನೆಯಲ್ಲ. ಆ ಸದ್ಗುಣವು, ತನ್ನೊಡನೆ ಮನೆಯಲ್ಲಿ ಬೆಳೆದು ತರಬೇತಾಗಬೇಕು. ಹೇಗೆಂದರೆ—ತನಗೆ, ಮನೆಗೆ, ನೆರೆಹೊರಗೆ, ಹಳ್ಳಿಪಳ್ಳಿಗೆ ಕ್ರಮೇಣ ಊರುದ್ದಕ್ಕೂ ಕೃತಜ್ಞತೆಯ ಉಪಕಾರವನ್ನು ಒಪ್ಪಿಸ ಬೇಕು. ಹಾಗಿದ್ದರೆ, ಬುಡಬುಡ ದಪ್ಪವಾಗಿಯೂ, ಕೊಡಿಕೊಡಿ ತೆಳ್ಳಗಾಗಿ ನೆಲೆನಿಂತು ಗಟ್ಟಿಮುಟ್ಟಾಗಿಯೂ ಇರುವ ವೃಕ್ಷದಂತೆ, ಲೋಕಕ್ಕೆ ಹೂವಿನ ಪರಿಮಳದ ಬೋಧನೆಯನ್ನೂ ಫಲವನ್ನೂ ಒದಗಿಸಲು ಸಮರ್ಥನಾಗುವನು. ಹೀಗೆ, 'ಅಡಿನೋಡಿ ಮುಡಿಹೊರುವ ಎಚ್ಚರಿಕೆ' ಇಲ್ಲದ ಕಾರಣವೆ ನಿನ್ನ ಪರೋಪಕಾರದ ಕೈಯೂ ಕಟ್ಟಿಹೋಯಿತು. ಈಗ, ನಿನ್ನ ಪ್ರೋತ್ಸಾ ಹಕರೂ ಸ್ನೇಹಿತರೂ ಎಲ್ಲಿ? ಕೇಳು.

ಕಂದ ॥ ಸಂಕಟವೆಂಬಾ ಹೆಸರಿನ ।
ಬೆಂಕಿಯ ಕೋವೆಯೊಳಗಿಟ್ಟು ಕರಗಿಸ ಹೊನ್ನಂ ॥
ತಾಂಕೂಡಿಕೊಂಡ ಬೆಸುಗೆಯ ।
ಸಂಕುಲವೆಂಬಾಪ್ತರಲ್ಲಿಗಲ್ಲಿಗೆ ಸರಿವರ್ ॥ ೧ ॥

ಇನ್ನಾದರೂ, ಬೆಳ್ಳಗಿದ್ದುದೆಲ್ಲ ಸಕ್ಕರೆಯೆಂಬ ಅವಿಚಾರಕ್ಕೆ ಎಡೆ ಗೊಡದೆ, ನಿಜವಾದ ಲೋಕೋಪಕಾರವನ್ನೆ ಮಾಡು. ನಿನ್ನಲ್ಲಿದ್ದಂತೆ, ನಿನ್ನನ್ನು ಹೊಂದಿದ ನಕ್ಷತ್ರಮಂಡಲದಲ್ಲಿಯೂ, ನನಗೆ ಅಕ್ಕರೆಯುಂಟು. ಕತ್ತಲೆಯನ್ನಾದರೂ, ಸಂಪೂರ್ಣವಾಗಿ, ಅಲ್ಲಗಳೆವವನಲ್ಲ. ಎಲ್ಲೆಲ್ಲಿಯೂ ಅದರ ಕಪ್ಪಿನ ಲೆಪ್ಪಹಾಕಿ ನೋಟಕ್ಕೆ ಅಂದವಾಗಿಸಬಹುದಲ್ಲದೆ, ಕುಂದುಕ ವನ್ನು ಉಂಟುಮಾಡುವ ಆ ಕತ್ತಲೆಯನ್ನೆ, ಯಾವಾಗಲೂ ಎಲ್ಲೆಲ್ಲಿಯೂ ಬಿಟ್ಟು ಅವಲಕ್ಷಣಕ್ಕೆ ದಕ್ಷಿಣೆಗೊಡಬಾರದೆಂದು ಮಾತ್ರವೆ ನನ್ನ ಉದ್ದೇಶವು. ಎಲ್ಲ ವನ್ನೂ, ಸಾವಧಾನವಾಗಿ ಎಣಿಸಿನೋಡು. ಪಾಪವು ಪಂಕದಲ್ಲಿ ಅದ್ದಿದರೂ, ಅದೋ, ಪುಣ್ಯದ ವಿಚಾರವು ಕೈನೀಡಿರುವುದು.

ನಕ್ಷತ್ರಪತಿ:—(ಬಾಡಿಬಸವಳಿದು) ಆರ್ಯ, ಅಮೃತವನ್ನು ಕುಡಿದರೂ, ವಿಷವನ್ನು ಕಾರುತ್ತಿದ್ದ ಈ ದುಷ್ಟನ ನಡತೆಯನ್ನು ಎಷ್ಟೆಂದು ನಿಂದಿಸಲಿ! ಆಗಲೇ, ತಪ್ಪನ್ನು ಮನ್ನಿಸಿ ವಾತ್ಸಲ್ಯದಿಂದ ಕೈಗೊಡುತ್ತಿರುವ ನಿನ್ನ ಕನಿಕರವನ್ನು ಏನೆಂದು ಬಣ್ಣಿಸಲಿ!! ಲೋಕದಲ್ಲಿ ನ್ಯಾಯಪರರಾದ ಮುಖಂಡರಿಗೂ ಅನುಯಾಯಿಗಳಿಗೂ, ಇನ್ನು ಬೇರೆ ಕಲಿಯಬೇಕಾಗಿಲ್ಲ. ದೊಡ್ಡವರು ನಿನ್ನ ನಡತೆಯನ್ನು ಕಲಿತು, ಚಿಕ್ಕವರು ನನ್ನ ರೀತಿಯನ್ನು ಅಷ್ಟೂ ಬಿಟ್ಟರೆ, ಅದೆ ಸನ್ಮಾರ್ಗವಾಗುವುದು. ದುರ್ಬೋಧನೆಗೊಟ್ಟ ಸ್ನೇಹಿತರನ್ನು ನಾನೀಗ ದೂರುವುದೇಕೆ? "ಹರಿಣನ ಚಿತ್ತಂ ನೆಲೆಗೊಂ। ಡರೆ ಬೇಡನ ಗಾನವೇನುಮಾಡಲಿಕುಂಟು?" ಎಂಬಂತೆ, ನನ್ನ ಬುದ್ಧಿಭ್ರಂಶತೆಯನ್ನೆ ನಿಂದಿಸಬೇಕು. ಅದಿರಲಿ. ನಾನು, ಇನ್ನೂ ಈ ಕಳಂಕದ ಮೋರೆಯನ್ನು ತೋರಿಸಿ, ಭೂಮಿಗೆ ಪಾಪದ ಕನ್ನಡಿಯನ್ನು ಹಿಡಿಯಬಹುದೆ? ನಿಶ್ಚಯಿಸಿದಂತೆ ಈ ಕಡಲಿಗೆ ಬಿದ್ದು, ದುರಿತದ ಹೇಸಿಕೆಗೆ ಸಗಣಿಬಳಿದುಬಿಡುತ್ತೇನೆ. ದಯವಿಟ್ಟು ಅಪ್ಪಣೆಗೊಡಬೇಕು.

ಆರ್ಯ:—ಪ್ರಿಯನೆ, ನಿನ್ನ ಈ ಮಾರ್ಪಾಡು ಮಹದಾನಂದಕರವು. ಆದರೆ, ಈಕಡೆಮಾತು ಅಷ್ಟೆ ಶೋಚನೀಯವು. ಆತ್ಮಘಾತವೆಂದರೆ, ಮೊದಲಿನ ಪಾಪಕ್ಕೆ ಬಡ್ಡಿ. ನೀನು ಮಾತಿನಂತೆ ಕೆಲಸವನ್ನು ಮಾಡಿದರೆ, ಪಶ್ಚಾತ್ತಾಪದಿಂದ ಕಂಗಾಣದಿರುವ ಪಾಪಿಗಳಲ್ಲಿ, ಆ ದೃಷ್ಟಾಂತದಿಂದ ಕೆಟ್ಟ ಪರಿಣಾಮವೆ ಆಗುವುದು. ಅದರಿಂದ ಇಡಿ ಲೋಕವೆ ಹಾಳಾಗಬಹುದು.

ನಕ್ಷತ್ರಪತಿ:—ಮುಂಗಾಣದ ನನ್ನ ಆ ಪಾಪಕ್ಕೆ ಈ ಪರಿಹಾರವೆ ತಕ್ಕುದಲ್ಲವೆ?

ಆರ್ಯ:—ಛೀ, ಎಂದೂ ಅಲ್ಲ. ಕಣ್ಣುದೆರೆದರೂ ದಾರಿಗಾಣುವುದಿಲ್ಲವೆ?

ನಕ್ಷತ್ರಪತಿ:—ಮುಂದೆ ಕತ್ತಲೆ ಮುತ್ತಿಕೊಂಡಿದ್ದರೆ ಕಾಣುವುದು ಹೇಗೆ?

ಆರ್ಯ:—ಆ ಕತ್ತಲೆಯ ಕಾಡನ್ನು ಒತ್ತಿ, ದಾರಿಬಿಡಿಸುವುದು ನಮ್ಮ ಕೆಲಸವು.

ನಕ್ಷತ್ರಪತಿ:—ಆದರೆ, ನನ್ನ ಈಗಿನ ಕರ್ತವ್ಯವೇನು?

ಆರ್ಯ:—ಈಗ ನೀನು ಈ ಸಮುದ್ರದಲ್ಲಿ ಮುಳುಗಿ ಮಿಂದು, ಪಾಪವನ್ನು ತೊಳೆದು ನಡೆ. ನಾಳೆ ಮೊದಲ್ಗೊಂಡು, ಕಾಲಕ್ಕಿಂತ ಮೊದಲೆ ನನ್ನಲ್ಲಿಗೆ

ಬರತೊಡಗು. ದಿನಗಳೆದಂತೆ, ಹೆಚ್ಚುಹೆಚ್ಚು ಹೊತ್ತು, ನನ್ನ ಬಳಿಯಲ್ಲಿ ಇರಬೇಕಾದೀತು. ಆದರೆ ಈಗಲೆ ಹೇಳುತ್ತೇನೆ; ಮೊದಮೊದಲು ನೀನು ಕೃಷನಾಗಹತ್ತುವಂತೆ ತೋರುವೆ. ಮದ್ದಿನಿಂದ ರೋಗನಿವೃತ್ತಿಯಾಗುತ್ತಿರುವಾಗ ಮುಂಚೆಮುಂಚೆ ರೋಗಿಯು ಮೈ ಕುಂದುವ ಹಾಗೆ, ನಿನ್ನಂಥ ದಾರಿದಪ್ಪಿದ ಪ್ರಾಯಸ್ಥವಿದ್ಯಾರ್ಥಿಗಳೂ, ಆದಿಯಲ್ಲಿ ಒಮ್ಮೆ, ಬದಲಿಕೆಯ ಗುಣವು ನೆಲೆಗೊಳ್ಳುವ ವರೆಗೆ, ಅಬಲರಾಗುತ್ತ ಬರುವುದು ಸ್ವಭಾವವು. ಆದರೆ, ಅದು ಅಪಾಯಸೂಚಕವಲ್ಲದುದರಿಂದ ಭಯವಿಲ್ಲ. ಆಮೇಲೆ ಬೋಧಿಸಿ ನಿನ್ನನ್ನು ಪರಿಪೂರ್ಣನನ್ನಾಗಿಯೂ ಕಳಾವಂತನನ್ನಾಗಿಯೂ ಮಾಡುವೆನು. ಬರಿದೆ, ಈಗಿನ ಕೆಲ ವಿದ್ಯಾರ್ಥಿಗಳ ಯೋಚನೆಯಂತೆ ಕಂಡಲ್ಲಿ ಕೈಹಾಕಿದರೆ ಗುರಿಮುಟ್ಟದು.

ನಕ್ಷತ್ರಪತಿ:—ಹೇಗಾದರೂ ಗಾಯಮಾಡಿ ಮದ್ದು ಬಳಿದಂತಾಗುವುದರಿಂದ, ಈ ಕಪ್ಪುಕಳಂಕವೊಂದು ನನ್ನನ್ನು ಬಿಡುವಂತಿಲ್ಲ. ಇಂಥ ದೋಷದ ನಿದರ್ಶನವು, ಲೋಕಕ್ಕೆ ಸನ್ಮಾರ್ಗದಾಯಕವೆಂಬುದನ್ನಾದರೂ, ಹೇಗೆ ನಂಬಲಿ?

ಆರ್ಯ:—ಅದು ಯಾರನ್ನು ಬಿಟ್ಟಿದೆ? ಹುಟ್ಟುವುದೇ ಕಳಂಕದಿಂದ. ಆದರೆ, ಆ ದೋಷವನ್ನು ಒಳಗೆ ಅಡಗಿಸಿ, ನಿರ್ದೋಷಿಯೆಂದು ನಟಿಸುವುದೆ ವಂಚಕತನದ ತಪ್ಪು. ತನ್ನದನ್ನಾದರೂ, ತಿಳಿದು ಬಯಲಾಗಿಸಿದರೆ, ಅದು ಭೂಷಣವೆ. ನೀನು ಕಳಂಕವನ್ನು ಪ್ರಕಟಿಸಿದ ಕಾರಣ ಧರ್ಮವೆ ಆಯಿತು. ಪಂತಿಯಲ್ಲಿ ತಪ್ಪಿನ ಕೆಳಗೆ ಹಂಸಪಾದವನ್ನು ಎಳೆದಂತೆ, ನಿನ್ನಲ್ಲಿ ಆ ಕಳಂಕವಿರಲಿ. ಮೇಲೆ ತಳತಳಿಸುವ ಕಳೆಯ ಒಪ್ಪು ಹೊಳೆಯುತ್ತಿರುವುದಲ್ಲವೆ? ಕೈತಪ್ಪು ಪ್ರತಿಯೊಬ್ಬನನ್ನೂ ಬಿಡದಿರುವಂತೆ, ಇಂತಹ ರಾಜನನ್ನಾದರೂ ದೋಷದ ಬ್ರಹ್ಮಕಪಾಲವು ಬಿಟ್ಟಿಲ್ಲವೆಂದು, ಪ್ರಜೆಗಳಿಗೆ ಜಾಗ್ರತೆಯ ದೃಷ್ಟಾಂತವೆ ಆಗುವುದು. ಮುಂದಿನವನು ಮರೆತು ಕಲ್ಲನ್ನು ಎಡವಿದರೆ, ಹಿಂದಿನವನೂ ಎಡವಲೇಬೇಕೆಂಬ ಕಟ್ಟಳೆಯುಂಟೊ? ಎಚ್ಚರಿತು ಕೆಳನೋಡಿ ಕಾಲಿಡಬೇಕೆಂಬ ವಿವೇಕವುಂಟಾಗುವುದೊ?

[ಆರ್ಯನ ಅಪ್ಪಣೆಯಂತೆ, ಸಮುದ್ರಸ್ನಾನ ಮಾಡಿ, ನಕ್ಷತ್ರಪತಿ ನಡೆದನು. ಮೂರ್ಖತೆಯ ಮರುಗುತ್ತಕ್ಕೆ ಪಶ್ಚಾತ್ತಾಪವೆ ಮೊದಲಿನ ಮದ್ದೆಂದು ಆರ್ಯನ ಅಭಿಪ್ರಾಯವು. ಹಾ! ಇಂಥ ಹಿತಬೋಧನೆಯನ್ನೂ,

ಹಲವುಮಂದಿ ನೀಚರು, ಗೂಗೆಗಳಂತೆ, ಕಣ್ಮುಚ್ಚಿ ನಿಂದಿಸುತ್ತಾರೆ. ಕೆಲವರು ಕತ್ತಲೆಯಂತೆ, ತಿಳಿದವರ ಕಣ್ಣನ್ನೂ ಕಟ್ಟಲಿಕ್ಕೆ ಕೈನೀಡುತ್ತಾರೆ. ಬೇರೆ ಕೆಲವು ಮಂದಿ 'ಗೆದ್ದವನೇ ಮುದ್ದಣ್ಣ'ನೆಂದು ನೆಗೆದ ದೋಣಿಹತ್ತುವ ಹೇಡಿಗಳು ಏನೇನೋ ಗಾಳಿಮಾತಾಡುತ್ತಾರೆ. ಆದರೆ, ತೇಜಸ್ವಿಗಳೆಂದರೆ ಮಾತ್ರ, ಎಂದೆಂದೂ ದೃಢಗೆಡದ ತೇಜಸ್ವಿಗಳೆ. ಅಂಥವರಿಗೆ ವಿಧೇಯರಾಗಿ, ಎಲ್ಲರಲ್ಲಿಯೂ ಸ್ವಾಭಾವಿಕವಾಗಿ ತೋರಿಬರುವ ಹಲಕೆಲವು ತಪ್ಪುಗಳನ್ನಷ್ಟೆ ತಿದ್ದಿ, ಒಡಗೂಡಿ ಬಾಳಿದರೆ, ನೂರು ವರುಷದಲ್ಲಿ ಆಗಬಹುದಾದ ಏಳಿಗೆ ಮೂರೆ ವರುಷದಲ್ಲಿ ಸಾಧ್ಯವಾಗುವುದು. ಒಂದು ವಿಷಯದ ಸೇಡನ್ನು ಇನ್ನೊಂದಕ್ಕೆ ನೆಯ್ಯುತ್ತಿದ್ದರೆ, ಅದು ಸಂಕರಜಾತಿಯಂತೆ, ಎಲ್ಲವು ಎಲ್ಲವಕ್ಕೂ ಸಂಬಂಧಿಸಿ, ಇಡಿ ಜನಾಂಗದ ಕೊರಳಿಗೇ ಒಯ್ಯುಚ್ಚ (ಉರುಳು)ವಾಗುವುದು. ಬರಿದೆ ಮುಂದಾಳುಗಳಲ್ಲಿ ತಪ್ಪನ್ನೆ ಒಡ್ಡುತ್ತಿದ್ದರೆ ಹೇಗೆ ಸಾಗುವುದು? ಉಪ್ಪೊಂದರಿಂದಲೆ ಊಟವಾಗುವುದೆ? ಹಾಗೆಂದು, ಅವರೂ ಹಿಂದಾಳುಗಳಲ್ಲಿ ಭೇದವಿಡಬಾರದು. ಎರಡು ಪಂಗಡವೂ ಸಂಗಡಿಸಿ ಇರಬೇಕು. ನೋಡಿರಿ, ಕಾಲೆರಡು ನಡೆಯೊಂದು.]

ಆರ್ಯ:—ಪ್ರಿಯಲೋಕವೆ, ಈಗ ಇಷ್ಟೊಂದು ಮಾತ್ರವೆ ಹೇಳಬೇಕಾಗಿದೆ. ಕಾಲಗತಿಯಿಂದ ನಾನು, ಈ ವಾತಾವರಣದಿಂದ ಅತ್ತ ಒಯ್ಯಲ್ಪಟ್ಟ ಕೂಡಲೆ, ನಮ್ಮೆಲ್ಲರ ಬಾಳುವೆಯೂ ಕಪ್ಪಾಯಿತೆಂದು ಎದುರಾಳುಗಳು ಎಣಿಸಿರಬಹುದು. ಆದರೆ, ನಾನು ಹೋದಹೋದಲ್ಲಿಗೆ ಆಗಾಗ ಬಂದು ನೆರವಾಗುತ್ತಿದ್ದ ನಿಮ್ಮ ಮಂತ್ರಶಕ್ತಿಯಿಂದಾಗಿ, ಅವರಿಗೆ ನನ್ನನ್ನು ಕೈಗಟ್ಟುವ ಧೈರ್ಯಶಕ್ತಿಗಳು ಇದ್ದಿಲ್ಲ. ಅದರಿಂದ, ಎತ್ತೆತ್ತಲೂ ಬೆಳಕಿನ ಬಯಲಾಯಿತು. ಕಿಕ್ಕಿರಿದ ಕತ್ತಲೆಯೆ ಮಾಯವಾಗಿ, 'ಪರರಿಗಿಟ್ಟ ಶೂಲ ತನಗೆ' ಎಂಬ ಮಾತು ಅವರಿಗೇ ದೃಷ್ಟಾಂತವಾಯಿತು. ಕಡೆಗೂ, ನಿಮ್ಮಿಂದಲೆ ಈ ಪೂರ್ವಸ್ಥಿತಿ ಪ್ರಾಪ್ತವಾಯಿತು. ಇದೀಗ ಪ್ರಜಾಧರ್ಮದ ಲಕ್ಷಣವು. ರಾಜಭಕ್ತಿ, ಸ್ವಾಭಿಮಾನ, ಲೋಕಧರ್ಮ, ಇವೆಲ್ಲವನ್ನೂ ಸದುದ್ದೇಶದ ಪರೋಪಕಾರದ ಬುದ್ಧಿಯೊಂದರಿಂದಲೆ ಸಾರ್ಥಕವನ್ನಾಗಿ ಮಾಡಿದ ನಿಮ್ಮ ರೀತಿನೀತಿಗಳನ್ನು ಹೇಳಿ ಮುಗಿಸುವಂತಿಲ್ಲ. ನಿಮ್ಮಲ್ಲಿ ಹೀಗೆ ಹಲವರು ನಡೆದರೂ, ಕೆಲವರು, ಇನ್ನೂ ದಾರಿಗಾಣಲಿಲ್ಲವೆಂದು ತೋರುವುದು.

ಭಾವಿಯ ಜೀವನಕ್ಕೆ ಮರುಳಾಗಿ, ಅವರು ತತ್ಕಾಲದ ಏಳಿಗೆಯ ದಿಕ್ಕಿ ಯಿಂದ, ಬಗ್ಗಿ ಬೀಳುವಂತಿದ್ದಾರೆ. ಆ ಜೀವನವನ್ನೂ, ತಮ್ಮ ಸದ್ಗುಣಬದ್ಧ ವಾದ ಕೆಲಸದ ಕೊಡದಿಂದ ಉದ್ಧರಿಸಿ, ಶೋಧಿಸಿಯೇ ಸೇವಿಸತಕ್ಕುದು, ಇರಲಿ, ಅಂಥ ಚಂಚಲಚಿತ್ತರು, ಆ ತತ್ಕಾಲದ ನಿರಾಶೆಯಿಂದ ದಾರಿಗಾ ಣದೆ ಹುಚ್ಚುಗಟ್ಟುವುದು ಸ್ವಭಾವವು. ಅದರ ನಿವಾರಣೆಗಾಗಿ, ಇಡೀ ಜನಾಂಗದ ವಿದ್ಯಾಭ್ಯಾಸವೆ (National Education) ಮುಖ್ಯವು. ಈಗ ನಕ್ಷತ್ರಪತಿಯೂ, ದಾರಿಗೆ ಬರುವಂತಿದ್ದಾನೆ. ಅದರಿಂದ, ತಲೆಯ ಹೊರೆ ಹಗಲಿಗೆ ಬಂದಂತಾಗುವುದು. ಆದರೆ, ಆಧಾರವು ಇಳಿದಂತೆ ಲೋಕದಲ್ಲಿ ನಿರಂತರೋದ್ಯೋಗದ ಉತ್ಸಾಹವೂ ಇಳಿವುದುಂಟು. ಅದು ಮಾತ್ರ, ತಪ್ಪತ್ತರೋಗಿಯ ಅಪಥ್ಯ ಸೇವನೆಯಂತೆ, ಜನಾಂಗಕ್ಕೇ ಅಪಾ ಯಕರವು. ಮನಸ್ಸಿಟ್ಟು ಕೇಳಿರಿ. ನಮ್ಮ ಕರ್ತವ್ಯಭಾರವು ಇನ್ನೂ ಇಳಿ ದಿಲ್ಲ. ಲೋಕವೆಲ್ಲವೂ ರೂಢಿವಿರೋಧವಲ್ಲದ ಶಾಸ್ತ್ರೀಯಸುಧಾರಣೆ ಗಳನ್ನು ತಿಳಿದಮೇಲೆಯೆ, ನಮ್ಮ ಪ್ರಯತ್ನಕ್ಕೆ ಮುಗುಳಿಯನ್ನು ಇಡತಕ್ಕುದು.

ಚೌಪದಿ ॥ ಮೊದಲಿನದೆಯಾದರೂ ಧಾನ್ಯವನು ತಂದು ।
ವಿಧವಿಧಪರಿಷ್ಕಾರಗಳನೆಸಗಿ ಜನರು ॥
ಸವಿಗೆ ಸರಿಯಾಗಿ ಭಕ್ಷ್ಯವ ಮಾಡುವಂತೆ ।
ನವಸುಧಾರಣೆ ಶಾಸ್ತ್ರಬೀಜದಿಂದಹುದು ॥ ೧ ॥

ಆಧಿಯಲಿ ನಮ್ಮಯ ಸುಧಾರಣೆಗೆ ಬಿತ್ತು ।
ವೇದವಾಯಿತು, ಶಾಸ್ತ್ರವಾಮೇಲೆ ಬಂತು ॥
ಆಧುನಿಕಧರ್ಮಸಮ್ಮತವಮತವೆ ಮುಂದೆ ।
ಮೋದವೀವುದು ಶಾಸ್ತ್ರವಾಗಿ ಹಿತದಿಂದೆ ॥ ೨ ॥

ನೀವೂ ಅದಕ್ಕೆ ಅನುಸಾರವಾಗಿಯೆ, ಕೆಲಸಕ್ಕೆ ಕೈಹಾಕಿರಿ. ವಿಘ್ನ ಗಳು ಮುಕ್ಕುರುಕುವವೆಂದು ಎದೆಗೆಡಬೇಡಿರಿ. ಆ ವಿಘ್ನದ ಮೈ ಎರಡು. ಆದಿಯಲ್ಲಿ ಸವಿದೋರಿಸುವುದು ಒಂದು; ಭೀತಿಬಿತ್ತುವುದು ಇನ್ನೊಂದು. ಮೊದಲಿನದು ನಂಜಿನ ಕಜ್ಜಾಯದಂತೆ, ಆದಿಯಲ್ಲಿ ಮಾತ್ರ ಸವಿ. ಎರಡನೆ ಯದು ಗೆರಸಿಹೆಟ್ಟಿ ಹಕ್ಕಿ ಹಾರಿಸುವಂತೆ, ಮೊದಲೆ ಅಬ್ಬರವು. ಎರಡಕ್ಕೂ

ಭಾವಿ = ಭವಿಷ್ಯತ್ಕಾಲ, ಬಾವಿ.

ಗುರಿ ಒಂದೆಯಾದಕಾರಣ, ಅವುಗಳಿಂದ ವೈಮರೆಯು ಬಾರದು. ಅದಿರಲಿ, ಎಲ್ಲವನ್ನೂ ತಿಳಿದ ನಿಮ್ಮೊಳಗಿನ ದೃಢಚಿತ್ತರ ಕರ್ತವ್ಯದಕ್ಷತೆಯಿಂದಲೆ, ನನ್ನ ಗತಿ, ಇಷ್ಟರಲ್ಲಿ ಈ ನೆಲೆಗೆ ಬಂತು. ಎಂದ ಮೇಲೆ ಹೆಚ್ಚೇಕೆ ಹೇಳಲಿ? ನಮ್ಮ ಈ ತೇಜಸ್ವಿ ಎಂಥೆಂಥ ಕಷ್ಟಸಂದರ್ಭಗಳಲ್ಲಿಯೂ ಎದೆಗೆಡದುದರಿಂದಲೂ, ಈ ಆರ್ಯಭೂಮಿ ಕಷ್ಟಗಳನ್ನು ಸೈರಿಸಿ ನಡೆದ ಕಾರಣದಿಂದಲೂ, ಅವರ ಮಹಿಮೆ ಎಂದೆಂದೂ ಶಾಶ್ವತವಾಗಿರಲಿ. ಈ ಭೂಮಿ, ಯಜ್ಞಯಾಗಾದಿಗಳಿಗೆ ಎಡೆಗೊಡುತ್ತಾ ಲೋಕೋಪಕಾರದಲ್ಲಿ ನಿರತವಾಗಿ ಕೀರ್ತಿಯನ್ನು ಪಡೆಯಲಿ. ಆಹವಿಸ್ಸುಗಳನ್ನು ಸ್ವರ್ಗಕ್ಕೆ ಸಾಗಿಸುವ ಮಹಾಧಿಕಾರವು ತೇಜಸ್ವಿಗೆ. ಅದಲ್ಲದೆ 'ಚಿತ್ರಭಾನು' ಎಂಬ ನನ್ನ ಹೆಸರಿನ ಬಿರುದನ್ನೂ ಅವನಿಗೆ ಕೊಡುತ್ತೇನೆ. ಜಲಧರಸದಾಗತಿಗಳೂ, ತಮ್ಮ ಅಧಿಕಾರದ ನಿಜತತ್ವವನ್ನು ತಿಳಿದು, ಕಾರ್ಯಕ್ಕೆ ಕೈಹಾಕತಕ್ಕದು. ಕಡೆಗೆ, ಇದೊಂದು ಮಾತು. ಲೋಕದಲ್ಲಿ, ತಂತಮ್ಮ ಮನಶ್ಶಕ್ತಿ ಕಾರ್ಯಶಕ್ತಿಗಳಿಗೆ ಅನುಸಾರವಾಗಿಯೆ, ಆಯಾ ವ್ಯಕ್ತಿಗಳು ನಿಜವಾದ ಮುಂದಾಳುಗಳಾಗುವುದು. ಆ ಶಕ್ತಿಗಳಿಲ್ಲದೆ, ಹೊರಗಿನ ಆಡಂಬರದ ಬಲದಿಂದ ಒಮ್ಮೆ ಮುಂದಾಳುಗಳ ಹಂತಿಯಲ್ಲಿ ನಿಂತರೂ, ಅಶಕ್ತನಾದವನು ಎರಡನೆ ನಿಮಿಷದಲ್ಲಿಯೆ ಕೆಳಗಿಳಿಯಬೇಕಾಗುವುದು. ನಿಜವಾಗಿ ನೋಡಿದರೆ, ಮುಂದಾಳೆಂದರೆ, ಹಿಂದಾಳುಗಳ ಊಳಿಗದವರು. ಅವರು, ಏಳಿಗೆಹೊಂದತಕ್ಕ ಉಪಾಯಗಳನ್ನು ಎಣಿಸಿ ಹೂಣಿಸುವ ಕೆಲಸವು ಆ ಮುಂದಾಳುಗಳನ್ನೆ ಹೊಂದಿರುವುದರಿಂದ ಹಾಗೆ ಹೇಳಿದೆನು. ಲೋಕದ ಸ್ಥಾವರಜಂಗಮಾತ್ಮಕವಾದ ಪ್ರತಿಯೊಂದು ವ್ಯಕ್ತಿಯಲ್ಲಿಯೂ ಅಗಾಧಶಕ್ತಿಯುಂಟು. ಅವುಗಳೊಳಗೆ ಬಹಳಪಾಲು ಇನ್ನೂ ಪ್ರಕಟವಾಗಲಿಲ್ಲ. ಪ್ರಕಟವಾಗಿರುವವುಗಳಲ್ಲಿಯೂ ಮುಖ್ಯಮುಖ್ಯಾಂಶಗಳು, ಈಗಿನ, 'ಹಾಲನ್ನು ಹೆಂಡಕ್ಕೆ ಮಾರುವ' ನವನಾಗರಿಕತೆಯಿಂದಾಗಿ ಮಾಯವಾದುವು. ವಿಚಾರಿಸಿ ನೋಡಿರಿ, ಅಂದಿನ ಸಂಜೀವನಮಣಿ ಮೊದಲಾದ ದಿವ್ಯೌಷಧಗಳೂ ದಿವ್ಯಕಲೆಗಳೂ ಈಗ ಎಲ್ಲಿರುತ್ತವೆ? ಎಲ್ಲವನ್ನೂ, ಕಣ್ಣಿಗೆ ಮಣ್ಣುಚೆಲ್ಲಿದ ಕಳ್ಳರು, ಕಣ್ದೆರೆವಾಗ ಸುಲಿದುಕೊಂಡು ಓಡಿದ್ದಾರೆ. ಆದರೆ, ಅವರಿಗೂ, ಆ ದಿವ್ಯವಸ್ತುಗಳ ಪ್ರಯೋಗವಿವೇಕವು ಇಲ್ಲದಕಾರಣ, ಕುರುಬನಿಗೆ ಮಾಣಿಕವೂ ಕಲ್ಲಾಗುವಂತೆ, ಎಲ್ಲವೂ ಎಲ್ಲೆಲ್ಲಿಯೊ ಚೆದರಿ ಹೋಯಿತು. ಆಗಲಿ, ಇನ್ನಾದರೂ ಪ್ರಯತ್ನಿಸಿ ಪ್ರತಿಯೊಬ್ಬನೂ ವಿದ್ವಾಂಸ

ನಾಗುವಂತೆ ಮಾಡಿರಿ. ಅಂದಿಗೆ, ಎಲ್ಲವೂ ಸಮೃದ್ಧವಾಗುವುದು. ಈ ಭೂಮಿಯನ್ನು ಸ್ವರ್ಗವನ್ನಾಗಿ ಮಾಡುವ ಯೋಗ್ಯತಾಂಶಗಳು ಪ್ರತಿಯೊಂದು ವಸ್ತುವಿನಲ್ಲೂ ಇವೆ. ಅವುಗಳನ್ನು ಶೇಖರಿಸುವ ಕಾರ್ಯಭಾರವೆಂಬುದು ಈ ಮುಂದಾಳುಗಳ ತಲೆಯಲ್ಲಿ. ಅದರಿಂದ ಎಲ್ಲರೂ ಈ ಕಡೆಮಾತನ್ನು ಮರೆಯದಿರಬೇಕು.

ಚೌಪದಿ || ನಿಮ್ಮಲ್ಲಿ ಸುಖವಿಹುದು ಹೊರಗಿಲ್ಲವಿಲ್ಲ |
ಒಮ್ಮೆ ತಿಳಿವಿನ ದೀಪಹಚ್ಚಿ ನೋಡುವುದು ||
ಸಮ್ಮತಿಸದೂರುದ್ದ ಕೋಡಿ ಕೈನಿಲುಕೆ |
ಅಮ್ಮಮ್ಮ! ದುಃಖಕಂಟಕವೆ ಚುಚ್ಚಲಿಕೆ || ೧ ||

ನೀವಾರು ನಿಮ್ಮ ಹದನೇನರಿತುಕೊಳ್ಳಿ |
ಭಾವಭೇದವೆ ಸುಟ್ಟು ಸೀಕರಿಂಪಕೊಳ್ಳಿ ||
ಭಾವವೊಂದಹುದೆ ಕತ್ತಲೆಯ ಕೈದೀಪ |
ಆವಾಗಲೂ ಬಿಡದಿದನು ನಡೆಯಿರಪ್ಪ || ೨ ||

ನಾನೆ ಮೇಲ್ ನೀ ಕೀಳೆನುವ ಭೇದಬುದ್ಧಿ |
ಹೀನವಹಸ್ವಾರ್ಥದೆಂಜಲಕೂಳ ಮಡ್ಡಿ ||
ತಾನಾವನೋ ಲೋಕಹಿತಗೈವನವನು |
ಮಾನವನ್ನಳಿವ ಮಾನವನೆನ್ನಿಸುವನು || ೩ ||

ಕಾಲಪುಸ್ತಕದ ಹಗಲಿರುಳ ಪುಟಗಳಲಿ |
ಹೇಳುವ ಅದೃಷ್ಟದಾಸುಖದುಃಖಗಳನು ||
ಆಲೋಚಿಸದೆ ಕಣ್ಣುಮುಚ್ಚಿ ಕುಳಿತಿರಲು |
ಹಾಳಹುದಿದನು ತಿಳಿದು ಬಾಳಿರೈ ಸುಖದಿ || ೪ ||

ತಿಳಿದ ಮಂದಿಗೆ ದುಃಖವೂ ಸುಖವೆನಿಪುದು |
ತಿಳಿಯದಿರೆ ಸುಖವಾದರೂ ದುಃಖವಹುದು ||
ತಿಳಿಯದೆಂತೆಂತೊ ಕೊಳಲಮೃತವೂ ವಿಷವೂ |
ತಿಳಿಯೆ ವಿಷವೂ ಅಮೃತವಾಗುವುದು ನಿಜವು || ೫ ||

[ತೇಜಸ್ವಿ ಮುಂತಾದವರೆಲ್ಲರೂ ಏಕಕಂಠರಾಗಿ]

ಆರ್ಯ:—ನಿನ್ನ ಸದ್ಬೋಧನೆಗೆ ಮರುಮಾತಿಲ್ಲ. ನಾವೂ, ಅದಕ್ಕೆ ಅನುಸಾರವಾಗಿಯೆ ಕಾರ್ಯತತ್ಪರರಾಗುತ್ತೇವೆ. ಆದರೆ ಅಂಗಸಾಧನೆ ಮಿತಾಹಾರ

ಮೊದಲಾದ ಎಚ್ಚರಿಕೆಯಿಂದ ಇರುವವನಿಗೆ, ಪ್ರಕೃತಿದೇವಿಯೆ ರೋಗವನ್ನು ದೂರದಲ್ಲಿಡುವಂತೆ, ನೀನು ಸದ್ಬುದ್ಧಿಕಾರ್ಯದಕ್ಷತೆ ಮೊದಲಾದ ಸದ್ಗುಣ ಗಳನ್ನು ದಯಪಾಲಿಸತಕ್ಕದು.

ಆರ್ಯ:—ಪರಮಾತ್ಮನ ಉದ್ದೇಶದಂತೆ ಎಲ್ಲವೂ ಸುಗಮವಾಗುವುದು.

(ಎಲ್ಲರೂ ಸೇರಿ)

ಚೌಪದಿ || ಎಲೆ ದೇವ, ನಿನ್ನೆಣಿಕೆಯಂತೆ ಈ ಲೋಕಂ |
ನಲಿವುತಿರೆ, ನಾವೆ ನಮ್ಮನು ನೂಕಿ ದುಃಖಂ ||
ಗಳಿಗೆ ಬಲಿಯಹುದನರಿತೆವು ಇನ್ನು ಮೇಲೆ |
ಕಲಿವ ಸದ್ಬುದ್ಧಿಯನು ನಿಲಿಸು ನಮ್ಮಲ್ಲಿ || ೧ ||

ಹಲವರಿನ್ನೂ ಕಾಡುಗವಿಗಳಲ್ಲಿಹರು |
ಕೆಲರು ದುರ್ಮನದ ಕೋಣೆಯೊಳೆ ಕುಳಿತಿಹರು ||
ತಿಳಿವೆಂಬ ಬೆಳಕನ್ನು ತೋರುವೆವು ನಾವು |
ತಿಳಿವ ಹುಟ್ಟಿಸಿ ಕಣ್ಣತೆರೆಯಿಸೆರಗುವೆವು || ೨ ||

ಮೇಲುಮೇಲಿನ ಕಾರ್ಯ ಲೋಕಕಾಗಿಹುದು |
ಆಲಿಸುತ್ತೊಳಗೆ ಕಳೆಗೊಡಲು ನೀನೆಂದು ||
ಕೇಳಿಕೆಗೆ ಹಲವು ದೃಷ್ಟಾಂತವಿಹುದದನು |
ಹೇಳಲೇಕೆ? ಧರಿತ್ರಿಯೇ ಸಾಕ್ಷಿಯಿರಲು || ೩ ||

ಎತ್ತಿಹೆವು ತಲೆಯನಿಡು ಧರ್ಮದಾ ಹೊರೆಯಂ |
ಹೊತ್ತು ನಡೆವಾಶಕ್ತಿಗೊಡುಹೃದಯಕಿನ್ನು ||
ಸತ್ಯಸಾರದ ಸವಿಯು ನಾಲಗೆಗೆ ಕಲಿಸು |
ಮತ್ತೆ ಹಾಲೊಡನೆ ರುಚಿಯಂತೆಲ್ಲ ಬಹುದು || ೪ ||

ಕಂದ || ಅವರವರ ಹುಟ್ಟುಹಕ್ಕುಗ |
ಳವರವರಿಗೆ ಬಂದು ಬಂಧನಂಗಳ ಹರಿದು ||
ಅವನಿಯೊಳದ್ವೈತಾನಂ ||
ದವತೋರ್ಕೆ, ಸರ್ವಸಮುದಭಾವವಬೀರ್ಕೆ || ೫ ||

ಮೊದಲಾವು ಗೈದಪಾಪ |
ಕ್ಕೊದಗಿದ ಫಲವೆಂಬ ಭೇದವಸ್ವಾತಂತ್ರ್ಯಂ ||
ಮೊದಲಾದ ಬಂಧನಾವಳಿ |
ಕದಲಿತು ನಮ್ಮನ್ನು ನಮ್ಮನೇ ಮಾಡಿನ್ನು || ೬ ||

ತನ್ನಂತೆ ಬೇರೆಯುವನೂ ।
ಎನ್ನುವ ವಿಜ್ಞಾನಬೀಜವೆಲ್ಲರ ಬಗೆಯೊಳ್ ॥
ತನ್ನಂತೆ ಮೊಳೆಯಲಾರ್ಯಮ ।
ತೋನ್ನತಿ ಕನ್ನಡಿಸಲಾಶಿವಂ ಕೈಗೊಡಲಿ ॥ ೭ ॥

(ಎಲ್ಲರೂ ಹೋಗುವರು.)

ಸೂತ್ರಧಾರನಾದ ಕಾಲನು:—(ಪ್ರವೇಶಿಸಿ) ಆಃ! ಈ ಒಂದು ಹಗಲಿರುಳಲ್ಲಿ ಏನೆಲ್ಲ ಕೆಲಸವಾಯಿತು!! ಒಮ್ಮೆ ಹೊನ್ನಾದುದು ಇನ್ನೊಮ್ಮೆ ಮಣ್ಣಾಗಿಯೂ, ಮತ್ತೊಮ್ಮೆ ಮಣ್ಣಾಗಿದ್ದುದು ಮೇಲೊಮ್ಮೆ ಹೊನ್ನಾಗಿಯೂ ತೋರಿತು. 'ಈ ಅಶಾಶ್ವತವಾದ ಮಾರ್ಪಾಟದಿಂದ ಏನು ಫಲ? ಎಲ್ಲವೂ ನಾಟಕದ ವೇಷಾಂತರವಲ್ಲದೆ ಬೇರೇನೂ ಇಲ್ಲ.' ಎಂದು ಕೆಲವರು ಆಕ್ಷೇಪಿಸಬಹುದು. ಆದರೆ, ಅದು ಸರಿಯಲ್ಲ. ಈ ಪ್ರಪಂಚವೆ ಸುಳ್ಳು. ಮೇಲೆ ಮಾತ್ರ ಸತ್ಯದ ಬಣ್ಣಬಳಿದಿದೆ. ಆ ಬಣ್ಣವು, ಆಗಾಗ ಮಾಸಿಹೋಗುವುದು ಪ್ರಕೃತಿ. ಅದರಿಂದ, ಪುನಃ ಬಣ್ಣಹಿಡಿಯಲಿಕ್ಕಾಗಿ ಒಂದಿಷ್ಟು ಬದಲಾವಣೆಮಾಡಬೇಕಾಗುವುದು. ಮೊದಲೊಮ್ಮೆ ಬೆಳೆಗೊಟ್ಟ ಹಳೆಮಣ್ಣನ್ನು ನೇಗಿಲಗುಳದಿಂದ ಮಗುಚಿ, ಎರಡನೆ ಅದರಲ್ಲಿ ಬಿತ್ತಿ ಬೆಳೆಮಾಡುವ ರೂಢಿಯೂ ಇದಕ್ಕೆ ಅನುಸಾರವಾಗಿಯೆ. ಹಾಗೆಯೆ, ಈ ಲೋಕವನ್ನು ಹೆಚ್ಚಾಗಿ ಕವಿದು ನಿಂತ ಅಸತ್ಯದ ಅಜ್ಞಾನಾಂಧಕಾರವೆಂಬ ಕತ್ತಲೆಮಣ್ಣನ್ನು, ಸತ್ಯಸೂರ್ಯನೆಂಬ ಗುಳದಿಂದ ಅಡಿಮಗುಚಿ ಜ್ಞಾನಬೀಜವನ್ನು ಬಿತ್ತಿ ಬೆಳೆಯಿಸಿ ಬೆಳಕಿಗೆ ತರಬೇಕು. ಆ ಕೃಷಿಯಲ್ಲಿ ಅನೇಕ ಮಿಥ್ಯಾತ್ಮದ ಕ್ರಿಮಿಕೀಟಗಳು ನಾಶವಾಗಿ ಅವುಗಳೆ ಗೊಬ್ಬರವಾಗುವವು. ಆ ಮೇಲೆ ಅದರಲ್ಲಿಯೆ ಮೊಳೆತು ಬೆಳೆಯನ್ನು ಅಳಿಯಿಸುವ ಕಳೆಗಳನ್ನೂ, ಹೊರಗಿನ ಸೊಪ್ಪುಸದೆಗಳನ್ನೂ ಆ ಪೈರಿಗಾಗಿ ಬೂದಿಮಾಡುವರು. ತಪ್ಪಿನ ನಾಶವೆ ಒಪ್ಪಿನ ಪೋಷಕವೆಂಬ ಹೇಳಿಕೆಯಂತೆ ಇದು ಯುಕ್ತವೆ ಆಗಿದೆ. "ಅಸತ್ಯಂ ಪಥಮಾರುಹ್ಯ ಸತ್ಯಂ ಪಶ್ಯಾಮಿ ಭಾರತ=ಎಲೈ ಅರ್ಜುನನೆ, ಅಸತ್ಯವನ್ನು ಹೊಂದಿ ಸತ್ಯವನ್ನು ನಿರೀಕ್ಷಿಸುತ್ತೇನೆ" ಎಂಬ ಪರಮಾತ್ಮನ ಉದ್ದೇಶವಾದರೂ ಇದೆ. ಈ ಹಗಲಿರುಳಿನ ಉದ್ದೇಶವೂ ಇದೇ. ಒಂದೆ ಮರದ ಎರಡು ಕೊಂಬೆಗಳು ಒರಸೊರಸುವಂತೆ, ಈ ಹಗಲಿರುಳುಗಳು ನಮ್ಮ ದೃಷ್ಟಿಗೆ ಅನ್ಯೋನ್ಯ ವಿರೋಧಭಾವದಿಂದ ತೋರಿದರೂ, ನಿಜವಾಗಿ ಹಾಗಿಲ್ಲ. ಪ್ರಕೃ

ತಿಯ ನಾನಾಂತರದ ವಿದ್ಯೆಯ ರೂಪವೆ ಪರಮಾತ್ಮನ ಅಂಗಚ್ಛವಿ. ಮಾಯಾದೇವಿಯೆಂಬ ಅಜ್ಞಾನಾಂಧಕಾರವೆ, ಆತನ ಹೊದಕೆ. ಜ್ಞಾನ ಹಸ್ತದಿಂದ ಆ ಹೊದಕೆಯನ್ನು ಎತ್ತಿದರೆ, ಪರಬ್ರಹ್ಮನ ರೂಪು ಪ್ರಕಟ ವಾಗುವುದು. ಅದನ್ನೆ ವಿದ್ಯಾಭ್ಯಾಸವೆಂದು ಹೇಳುವರು. ಅದನ್ನು, ಧರ್ಮಾನುಸಾರವಾಗಿ, ಎಷ್ಟೆಷ್ಟು ಚೆನ್ನಾಗಿ ಮಾಡುತ್ತಾರೊ ಅಷ್ಟಷ್ಟು ಪರ ಮಾತ್ಮನ ಬಂಧುಗಳಾಗುತ್ತಾರೆ. ಸಂಪೂರ್ಣವಾಗಿ ತತ್ವಾರ್ಥವನ್ನು ಅರಿತ ಮೇಲೆ, ಹೊಳೆ ಸಮುದ್ರದಲ್ಲಿ ಬೆರತುಹೋಗುವಂತೆ, ಪರಬ್ರಹ್ಮನ ಅಖಂಡ ಜ್ಯೋತಿಯಲ್ಲಿ ಐಕ್ಯವಾಗುತ್ತಾರೆ. ಎಷ್ಟೆಷ್ಟು ಪರಮಾತ್ಮನ ಹೊರಗಾಗಿ ತೊಳಲುತ್ತಾರೊ, ಅಷ್ಟಷ್ಟು, ಅವನ ಹೊದಕೆಯ ಅಂಧಕಾರವೇ ಕಣ್ಣುಕಟ್ಟು ತ್ತಿದೆ. ಅದು, ರಾಜಸ್ಥಾನದ ದ್ವಾರಪಾಲಕನಂತೆ, ಅಪರಿಚಿತನನ್ನು ತಡೆದು ಬಿಡುತ್ತದೆ. ಆ ದ್ವಾರವನ್ನು ಬಿಟ್ಟು ಎತ್ತೆತ್ತ ಹೊಂಚುಹಾಕಿದರೂ, ಅಜ್ಞಾ ನವೂ, ಅಪರಾಧವೂ, ಅವನ ತಲೆಹೊರೆಯಾಗುತ್ತದೆ. ಕಳ್ಳದಾರಿಯಲ್ಲಿ ಮುಂದುವರಿದರೆ, ಆತನಿಗೆ ಶಿಕ್ಷೆಯೆ ಗತಿಯಾಗಿ ಬಹಿಷ್ಕಾರಹೊಂದಿ ಪಾಪಿ ಯಾಗುತ್ತಾನೆ. ಅದರಿಂದ, ವಿನಯ ವಿಧೇಯತೆ ಮೊದಲಾದ ಗುಣಗಳನ್ನು ಬಿಗಿಹಿಡಿದು, ಕಷ್ಟಗಳನ್ನು ಸೈರಿಸಿ ಪ್ರಯತ್ನಿಸಿದರೆ, ಒಂದಲ್ಲ, ಇನ್ನೊಂದು ಸಂದರ್ಭದಲ್ಲಿ ಆ ಜಗತ್ಪತಿಯ ಕರುಣೆಯನ್ನು, ರಾಜದ್ವಾರದಿಂದಲೆ ಪಡೆಯ ಬಹುದು. ವಿನಯಪೂರ್ವಕವಾದ ಕಷ್ಟವೆ, ಸಫಲವಿದ್ಯಾಭ್ಯಾಸದ ಪೂರ್ವ ರೂಪವೆಂಬುದನ್ನು ಯಥಾರ್ಥತತ್ವರವಾದ ಲೋಕವೆಂಬ ವಿದ್ಯಾರ್ಥಿ ಮರೆಯ ಬಾರದು. ನಿಜವಾದ ವಿದ್ಯಾರ್ಥಿಗಳ ಇಷ್ಟಾರ್ಥವನ್ನು, ಜಗದ್ಗುರುವಾದ ಪರಮಾತ್ಮನು ಸಲಿಸಿ, 'ಗುರುವಿನಂತೆ ಶಿಷ್ಯ' ಎಂಬಂತೆ ಸಿದ್ಧಪಡಿಸದೆ ಇರ ಲಾರನು. ಈಗ, ಹಗಲೆಂದರೆ, ಕಣ್ತೆರೆಯಿಸುವ ಆವಿದ್ಯೆಯೆಂದೂ, ಇರು ಳೆಂಬುದು, ಆ ಅಂಧಕಾರರೂಪದ ಕತ್ತಲೆಯೆಂದೂ, ಲೋಕಕ್ಕೆ ಮನ ಮುಟ್ಟಿರಬಹುದು. ಅದರಿಂದ, ಈ ಹಗಲಿರುಳಿನ ಕಥೆ ಎಲ್ಲವೂ, ಪವಿತ್ರ ಧಾರಿಯಾದ ಭಗವಂತನ ಎಣಿಕೆಯಂತೆಯೇ ನಡೆದಿದೆ. ಅವನಾದರೂ ಆಯಾ ವ್ಯಕ್ತಿಗಳನ್ನು, ಗಾಳಿಯ ಮೂಲಕ ಜಳ್ಳನ್ನು ತೂರಿ ನೆಲ್ಲನ್ನು ಆರಿಸುವಂತೆ, ಪರೀಕ್ಷಿಸಿಯೇ ಒಳಗೊಳ್ಳತಕ್ಕವನು. ಆ ಕೆಲಸಕ್ಕೆ ಸಾಧನರೂಪವಾಗಿ, ನನ್ನನ್ನು ನಿಯಮಿಸಿರುವುದು. ಅಕಟಾ ! ಈ ಗುಟ್ಟನ್ನು ತಿಳಿಯದ ಲೋಕವು, ಸುಖಬಂದಾಗ ತಾನೆ ಸಮರ್ಥನೆಂದು ಹಿಗ್ಗಿ, ದುಃಖವೊದಗಿದಾಗ, ಕೈ

ದೋರಿಸಿ ನನ್ನನ್ನು ಬೈಯುತ್ತಿದೆ. ಹೇಗೆ? ಈಗ ಕುರುಡುಹೋಗಿ, ಕನ್ನಡಿ ಕೈಗೆ ಬಂತೆ?

ಪ್ರಿಯ ಲೋಕವೆ, ಇದನ್ನು ತಿಳಿದು, ಕಾಡುಗತ್ತಲೆಗಳ ಭೇದಭಾವ ವನ್ನು ಬಿಟ್ಟುಬಿಡಿರಿ. ನಿಮ್ಮ, ರಾಜಕೀಯ ಧಾರ್ಮಿಕ ಸಾಮಾಜಿಕ ಮಾರ್ಗ ಗಳನ್ನು ಸರಿಪಡಿಸಿಕೊಳ್ಳಿರಿ. ಹಾಗಾದರೆ, ನನ್ನ ಕಾಲರಥದ ಚಕ್ರವೂ, ಆ ಮಾರ್ಗಗಳಲ್ಲಿ, ನಿರಾತಂಕವಾಗಿ ನಡೆವುದು. ನಿಮಗೂ ಹಿತವಾಗುವುದು. ಇದೋ ಗಂಟೆಬಾರಿಸಿ ಸಾರುತ್ತೇನೆ. 'ಅಂಗಳದಲ್ಲಿ ಹೇಸಿಕೆಮಾಡಿಕೊಂಡು ಮಂಗಳನ ಕಷ್ಟ'ವೆಂದು ಗುಣುಗುಟ್ಟಬೇಡಿರಿ. ಈ ಜ್ಞಾನವು ನಿಮ್ಮಲ್ಲಿ ನೆಲೆ ಗೊಳ್ಳಬೇಕಾದರೆ, ನನ್ನ ಈ ಉಪನ್ಯಾಸವೊಂದೇ ಸಾಲದು. ನೀವೆಲ್ಲರೂ, ಮಾತೃಭೂಮಿಯನ್ನು ಮನಮುಟ್ಟಿ ಸರ್ವವಿಧದಿಂದಲೂ ಸೇವಿಸುವ ವ್ರತ ಹಿಡಿಯಬೇಕು. ಲೋಕಮಾನ್ಯರಾದ, ಸರ್ವವನ್ನೂ ಬಿಟ್ಟ, ಸನ್ಯಾಸಿಗಳೂ ಕೂಡ, ಮಾತೃದೇವತೆಯನ್ನು ಕಂಡಲ್ಲಿ ತಲೆಬಗ್ಗಿಸಿ ಪೂಜಿಸುತ್ತಾರೆ. ಎಂದಮೇಲೆ, ಇಡಿ ಜನಾಂಗಕ್ಕೆ ಮಾತೃಸ್ವರೂಪಿಣಿಯಾದ ಈ ಭಾರತ ಮಾತೆಯನ್ನು ಅಲಕ್ಷಿಸಿದರೆ, ನಿಮಗೆ ಗತಿ ಇಲ್ಲ. ಈಗಿನ ಹಲವು ನವ ನಾಗರಿಕರು, ಅವಳ ಮಾತಿಗೆ ಮನ್ನಣೆಗೊಡದೆ ತಿರಸ್ಕರಿಸುತ್ತಿರುವುದರಿಂದಲೆ, ನಿಮಗೆ ಇಂಥ ದುರ್ಗತಿಯುಂಟಾಗಿದೆ.

ಚೌಪದಿ ॥ ಬೆಳೆದಪುದು ತಾಯ ಹೊಟ್ಟೆಯೊಳಗಲ್ಲಿಂದ ।
ತಲೆದೋರುತವಳ ಮಡಿಲೊಳೊಸರ್ಪಪಾಲ ॥
ಕುಡಿದು ಫಲದುಂಬುತಾ ಮಾತೃಭೂಮಿಯನು ।
ಬಿಡುತಳಲಿಪುದೆ ಮರವೆಯಾದರೂ ತಾನು? ॥ ೧ ॥

ಹುಟ್ಟುತಿನ್ನೊಂದು ಕಡೆಗೈದಿರೀತಿಯನು ।
ಬಿಟ್ಟು ಬಗೆಬಗೆ ಬಟ್ಟೆ ವೇಷಭಾಷೆಯನು ॥
ಕಟ್ಟಿಬಂದಬ್ಧಿಯನು ಬೈವ ವ್ಯಾಪಾರ ।
ದೃಷ್ಟಿಯಿದು ಏಳಿಗೆಯ ಮೂಲೇ ಕುಠಾರ ॥ ೨ ॥

ಕುಸುಮ ಷಟ್ಪದಿ ॥ ಫಲಕೆ ತಂದೆಯೆ ಕಾರ್ಯವೃಕ್ಷವಾ ವೃಕ್ಷಕ್ಕೆ ।
ಎಣಿಕೆಯೇ ತಾಯಿಬೇರದಕೆ ಯುಕ್ತಿ ॥
ಮೊಳೆವ ಬಿತ್ತಹುದೆಲ್ಲಕೂ ಜೀವನವು ಧರ್ಮ ।
ಹೊಳೆವುದದು ಕಣ್ದೆರೆದರೆಲ್ಲೆಲ್ಲಿಯೂ ॥ ೩ ॥

ಅದರಿಂದ ಬೇರೆ ಯೋಚನೆಯು ಬಿಟ್ಟಿಲ್ಲಕೊ ।
ಮೊದಲಾದ ಧರ್ಮವೊಂದನೆ ಹಿಡಿದರೆ ॥
ತುದಿವರೆಗೆ ಸರಿಯಾಗಿ ಫಲವನುಂಬನುಕೃಷಿಯು ।
ನೊದಗಿಸಲು ಕೈ ತಾನೆ ಕೈ ನೀಡದೆ? ॥ ೪ ॥

ಕಂದ ॥ ಹಗಲಿರುಳ ನೋದುತೆಲ್ಲರು ।
ಬಗೆಯನು ತಿದ್ದುತ್ತ ಧರ್ಮಮಾರ್ಗದಿ ನಡೆಯೆ ॥
ಜಗದೊಳಗದ್ವೈತಾನಂ ।
ದಗಳು ಸಮಾಜಕ್ಕೆ ಸಂತತಂ ಸಂಜನಿಕುಂ ॥ ೫ ॥

[ಎಂದು ಪುಷ್ಪಾಂಜಲಿಯನ್ನು ಒಪ್ಪಿಸುವನು]

॥ ಇತಿ ॥